ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಕುವೆಂಪು, ಪು.ತಿ.ನ ಮತ್ತು ಬೇಂದ್ರೆ ಕವನಗಳಲ್ಲಿ ಸೂರ್ಯೋದಯ

೨೦೦೮-೨೦೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿಸಲ್ಲಿಸಿದ ನಿಬಂಧ

ಮಾರ್ಗದರ್ಶಕರು
ಪ್ರೊ. ಕಾಳೇಗೌಡನಾಗವಾರ
ವಿಶ್ರಾಂತ ಪ್ರಾಧ್ಯಾಪಕರು,
ಮೈಸೂರು ವಿಶ್ವವಿದ್ಯಾನಿಲಯ.

ಸಂಶೋಧಕ
ಎಚ್.ಎಲ್. ಮೋಹನ್‌ರಾಜ್
ಕನ್ನಡ ಎಂ.ಫಿಲ್. ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ,ಹಂಪಿ.
ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

೨೦೦೮-೨೦೦೯
ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಕನ್ನಡ ವಿಶ್ವವಿದ್ಯಾಲಯ

ಕುವೆಂಪು, ಪು.ತಿ.ನ ಮತ್ತು ಬೇಂದ್ರೆ
ಕವನಗಳಲ್ಲಿ ಸೂರ್ಯೋದಯ

೨೦೦೮–೨೦೦೯ನೇ ಸಾಲಿನ ಎಂ.ಫಿಲ್. ಪದವಿಗಾಗಿಸಲ್ಲಿಸಿದ ನಿಬಂಧ

ಮಾರ್ಗದರ್ಶಕರು
ಪ್ರೊ. ಕಾಳೇಗೌಡನಾಗವಾರ
ವಿಶ್ರಾಂತ ಪ್ರಾಧ್ಯಾಪಕರು
ಮೈಸೂರು ವಿಶ್ವವಿಧ್ಯಾನಿಲಯ

ಸಂಶೋಧಕ
ಎಚ್.ಎಲ್. ಮೋಹನ್‌ರಾಜ್
ಕನ್ನಡ ಎಂ.ಫಿಲ್. ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ,ಹಂಪಿ. ಕುವೆಂಪು ವಿದ್ಯಾವರ್ಧಕ ಟ್ರಸ್ಟ್, ಮೈಸೂರು.

೨೦೦೮–೨೦೦೯
ಕನ್ನಡ ವಿಶ್ವವಿದ್ಯಾಲಯ,ಹಂಪಿ.

ದೃಢೀಕರಣ ಪತ್ರ

೨೦೦೮-೦೯ ನೇ ಸಾಲಿನಲ್ಲಿ ಎಚ್.ಎಲ್ ಮೋಹನ್‌ರಾಜ್ ಎಂಬ ಎಂ.ಫಿಲ್ ವಿದ್ಯಾರ್ಥಿಯು ಈ ಪರೀಕ್ಷೆಯ ಅಂಗವಾಗಿ **"ಕುವೆಂಪು ಪು.ತಿ.ನ ಮತ್ತು ಬೇಂದ್ರೆ ಕವನಗಳಲ್ಲಿ ಸೂರ್ಯೋದಯ"** ಎಂಬ ವಿಷಯ ಕುರಿತು ನನ್ನ ಮಾರ್ಗದರ್ಶನದಲ್ಲಿ ಸಂಶೋಧನಾ ನಿಬಂಧವನ್ನು ಸಿದ್ಧಪಡಿಸಿದ್ದಾರೆ. ಇದನ್ನು ಇವರು ಈ ಮೊದಲು ಯಾವುದೇ ಬಗೆಯ ಪದವಿ, ಡಿಪ್ಲೋಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲ ಎಂದು ದೃಢೀಕರಿಸುತ್ತೇನೆ.

(ಸಹಿ)

ಪ್ರೊ.ಕಾಳೇಗೌಡನಾಗವಾರ,
ವಿಶ್ರಾಂತ ಕನ್ನಡ ಪ್ರಾಧ್ಯಾಪಕರು,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,
ಮಾನಸಗಂಗೋತ್ರಿ, ಮೈಸೂರು,

ಸ್ಥಳ:ಮೈಸೂರು
ದಿನಾಂಕ:-೧೫:೦೯:೨೦೦೯

ಪ್ರಮಾಣ ಪತ್ರ

"ಕುವೆಂಪು, ಪು.ತಿ.ನ ಮತ್ತು ಬೇಂದ್ರೆ ಕವನಗಳಲ್ಲಿ ಸೂರ್ಯೋದಯ" ಎಂಬ ವಿಷಯದ ಸಂಶೋಧನ ನಿಬಂಧವನ್ನು ಕನ್ನಡ ಎಂ.ಫಿಲ್ ಪದವಿಯ ಕ್ರಮಸಂಖ್ಯೆ **KVTMKS-00321** ರ ವಿದ್ಯಾರ್ಥಿಯಾದ ನಾನು ೨೦೦೮–೨೦೦೯ನೇ ಸಾಲಿನ ಪರೀಕ್ಷೆಗಾಗಿ **ಪ್ರೊ.ಕಾಳೇಗೌಡನಾಗವಾರ** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದೇನೆ.

ಈ ನಿಬಂಧವನ್ನು ಯಾವುದೇ ಬಗೆಯ ಪದವಿ, ಡಿಪ್ಲೊಮಾ ಅಥವಾ ಪ್ರಶಸ್ತಿಗಾಗಿ ಯಾವುದೇ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

(ಎಚ್.ಎಲ್.ಮೋಹನ್‌ರಾಜ್)
೨೦೦೮–೦೯ನೇ ಸಾಲಿನ ಎಂ.ಫಿಲ್ ವಿದ್ಯಾರ್ಥಿ
ಕುವೆಂಪು ವಿದ್ಯಾವರ್ಧಕ ಟ್ರಸ್ಟ್
ಜಯಲಕ್ಷ್ಮೀಪುರಂ, ಮೈಸೂರು

ಸ್ಥಳ: ಮೈಸೂರು
ದಿನಾಂಕ:೧೫–೦೯–೨೦೦೯

ಪರಿವಿಡಿ

ಪ್ರವೇಶ

ಮಣ್ಣು, ಕಲ್ಲು, ಕಾಡು, ಪರ್ವತ, ಸರೋವರ ಸಾಗರಗಳಿಂದ ಕೂಡಿದ ಭೂಮಿ ಸುಂದರವಾಗಿದೆ. ಬಹು ದೂರಕ್ಕೆ ವ್ಯಾಪಿಸಿದ ಅದರ ಮೈ ಆಕಾಶವನ್ನು ದಿಗಂತದಲ್ಲಿ ಮುಟ್ಟುವಂತೆ ತೋರುತ್ತದೆ. ಹಗಲು, ಇರುಳು, ಮಳೆಗಾಲ, ಚಳಿಗಾಲ, ಸೆಕೆಗಾಲ ಒಂದರ ಅನಂತರ ಒಂದು ಬದಲಾಗುತ್ತದೆ, ಕಾಲ ಸಾಗುತ್ತದೆ. ತೇಲುವ ಮೋಡ, ಬೀಳುವ ಮಳೆ, ಹಸಿರು ಸಸ್ಯ ಇವುಗಳಿಗೆಲ್ಲ ಜೀವಧಾತು ಸೂರ್ಯ.

ಸೂರ್ಯ ತೋರಿಕೆಗೆ ಅತಿ ದೊಡ್ಡ ಹಾಗೂ ಪ್ರಕಾಶಮಾನವಾದ ಒಂದು ನಕ್ಷತ್ರ, ಭೂಮಿಯಿಂದ ಸೂರ್ಯನಿಗಿರುವ ದೂರ ಕೇವಲ ೧೪೮. ೬ ಮಿಲಿಯ ಕಿ.ಮಿ. ಇತರ ನಕ್ಷತ್ರಗಳು ಸೂರ್ಯನಿಂದ ಎಷ್ಟೋ ಪಾಲು ದೂರದಲ್ಲಿವೆ. ಹದಿಮೂರು ಲಕ್ಷ ಭೂಮಿಗಳು ಸೂರ್ಯನಲ್ಲಿ ಹಿಡಿಸಬಲ್ಲವು. ಸೂರ್ಯ ಕೋಟ್ಯಂತರ ವರ್ಷಗಳಿಂದ ಈ ರೀತಿ ಉರಿದು ಶಾಖವನ್ನು ಕೊಡಲು ಅಲ್ಲಿ ಚೈತನ್ಯ ಉತ್ಪಾದನೆಗೆ ಬೇಕಾದ ಬೀಜ ಸಮ್ಮಿಲನವೇ ಕಾರಣ. ಸೂರ್ಯನ ಒಳಭಾಗದಲ್ಲಿರುವ ಜಲಜನಕ ಬೀಜಗಳು ಕೂಡಿ ಹೀಲಿಯಂ ಪರಮಾಣು ಬೀಜಗಳು ಉಂಟಾಗುವ ಪ್ರಕ್ರಿಯೆಯಿಂದ ಹೊರ ಬರುವ ಉಷ್ಣದ ಬೆಳಕೇ ಕಿರಣಗಳು.

ಇಟಲಿಯ ವಿಜ್ಞಾನಿ ಗೆಲಿಲಿಯೋ ಮೊದಲ ಬಾರಿಗೆ ಸೂರ್ಯ ಕಲೆಗಳನ್ನು ಸ್ಪಷ್ಟವಾಗಿ ಗುರುತಿಸಿದ. ನಮಗೆ ದೊರಕುವ ಆಹಾರ ತಯಾರಾಗುವುದಕ್ಕೆ, ಹವಾಮಾನಗಳಿಗೆ ಸೂರ್ಯ ನೀಡುವ ಚೈತನ್ಯವೇ ಕಾರಣ. ಶುಭ್ರವಾದ ಆಕಾಶ ಹಗಲಿನಲ್ಲಿ ನೀಲಛಾಯೆಯಿಂದ ಕಂಗೊಳಿಸುತ್ತದೆ. ಭೂಮಿಯ ಮೇಲೆ ಅಗಾಧ ಗಾತ್ರದ ಅರ್ಧಗೋಲವನ್ನು ಇಟ್ಟಂತೆ ತೋರುತ್ತದೆ. ಮುಂಜಾನೆ ಮೂಡಣದಿಂದ ಏರಿದ ಸೂರ್ಯ ಸಂಜೆ ಪಡುವಣದಲ್ಲಿ ಇಳಿದು ಅಸ್ತಮಿಸುತ್ತಾನೆ. ದಿಗಂತದಲ್ಲಿ ಕೆಂಪು ಕಿತ್ತಲೆ ಬಣ್ಣಗಳ ಓಕುಳಿಯಾಗುತ್ತದೆ.

ಸಾವಿರಾರು ವರುಷಗಳಿಂದ ಜನರು ಪ್ರಪಂಚದ ವಿವಿಧ ಭಾಗಗಳಲ್ಲಿ ಸೂರ್ಯನನ್ನು ದೇವರೆಂದು ಪೂಜಿಸುತ್ತಿದ್ದಾರೆ. ಭೂಮಿಯ ಚರಿತ್ರೆಯಲ್ಲಿ ಸೂರ್ಯನದು ಮಹತ್ವದ ಪಾತ್ರ. ನಮ್ಮ ದೇಶದ ಜನರಿಗಂತೂ ಸೂರ್ಯ ಪೂಜ್ಯನೂ ರಹಸ್ಯವುಳ್ಳವನೂ ಆಗಿರುವನು. ಇದಕ್ಕಾಗಿಯೇ ವೈದಿಕ ಕಾಲದ ಋಷಿಗಳ ಬೆರಗಿನ ಸ್ತುತಿಯ ವಸ್ತುವಾಗಿದ್ದ ಸೂರ್ಯ. ಇದು ಬರಿಯ ಸೂರ್ಯೋದಯವಲ್ಲ ಪ್ರಜ್ಞೋದಯ ಎಂದು ಹಿಂದಿನವರು ಕರೆದಿದ್ದಾರೆ.

* * * * * *

ಅಧ್ಯಾಯ - ಒಂದು
ಪ್ರವೇಶ

* ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸೂರ್ಯೋದಯ
* ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೂರ್ಯೋದಯ
* ಅಧ್ಯಯನ ಸ್ವರೂಪ

ಸೂರ್ಯೋದಯ - ಸೂರ್ಯಾಸ್ತ ವನ್ನು ಬಣ್ಣಿಸದ ಕವಿ ಇರಲು ಸಾಧ್ಯವಿಲ್ಲ. ಅಷ್ಟಾದಶ ವರ್ಣನೆಗಳ ಒಂದು ಭಾಗವಾಗಿಯೇ ಸೂರ್ಯ ಕಾಣಿಸಿಕೊಳ್ಳುತ್ತಾನೆ. ದಂಡಿಯು ಮಹಾಕಾವ್ಯದ ಸುಲಕ್ಷಣಗಳನ್ನು ಹೇಳುವಾಗ ತನ್ನ 'ಕಾವ್ಯಾದರ್ಶ'ನದಲ್ಲಿ ಹೀಗೆ ಹೇಳಿದ್ದಾನೆ.

ಸರ್ಗಬಂಧೋ ಮಹಾಕಾವ್ಯಮುಚತೇ ತಸ್ಯ ಲಕ್ಷಣಮ್ ।
ಆಶೀರ್ನಮಸ್ಕ್ರಿ ಯಾವಸ್ತು ನಿರ್ದೇಶೋವ್ಯಾಪಿ ತನ್ಮುಖಮ್ ॥
ಇತಿಹಾಸ ಕಥೋದ್ಭೂತಮಿತರ್‌ದ್ವಾ ಸದಾಶ್ರಯಮ್ ।
ಚತುರ್ವರ್ಗ ಫಲಾಯತ್ತಂ ಚತುರೋದಾತ್ತ ನಾಯಕಮ್ ॥
ನಗರಾರ್ಣವ ಶೈಲರ್ತು ಚಂದ್ರಾರ್ಕೋದಯ ವರ್ಣನೈಃ ।
ಮಂತ್ರದೂತ ಪ್ರಯಾಣಾಜಿ ನಾಯಕಾಭ್ಯುದಯೈರಪಿ ॥
ಅಲಂಕೃತಮ ಸಂಕ್ಷಿಪ್ತಂ ರಸಭಾವನಿರಂತರಮ್ ।
ಸರ್ಗೈರನತಿ ವಿಸ್ತೀರ್ಣೈಃ ಶ್ರವ್ಯವೃತ್ತೈಃ ಸುಸಂಧಿಭಿಃ ॥
ಸರ್ವತ್ರೇ ಭಿನ್ನ ವೃತ್ತಾಂತೈರುಪೇತಂ ಲೋಕರಂಜನಮ್ ।
ಕಾವ್ಯಂ ಕಲ್ಪಾಂತರಸ್ಥಾಯೀ ಜಾಯೇತ ಸದಲಂಕೃತಿ[1] ॥

"ಒಂದಕ್ಕಿಂತ ಹೆಚ್ಚು ಸರ್ಗಗಳು ಸೇರಿ ಆಗುವ ಪ್ರಬಂಧವು ಮಹಾಕಾವ್ಯವೆನಿಸುತ್ತದೆ. ಅದರ ಲಕ್ಷಣಗಳು ಹೀಗಿರಬೇಕು. ಅದರ ಆದಿಯಲ್ಲಿ ಹಾರೈಕೆ ಅಥವಾ ನಮಸ್ಕಾರ ಅಥವಾ ಕಥಾನಿರ್ದೇಶವು ಬರುತ್ತದೆ. ಇತಿಹಾಸವಾಗಲಿ ಕಥೆಯಾಗಲಿ ಅದಕ್ಕೆ ಮೂಲವಾಗಬಹುದು. ಇವಲ್ಲದೆ ಬೇರೆಯ ಸತ್ಪುರುಷರನ್ನು ಕುರಿತು ಇರುವುದೂ ಉಂಟು. ಅದು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳ ಫಲಪ್ರಾಪ್ತಿಗೆ ಅಧೀನವಾಗಿರುತ್ತದೆ. ನಾಯಕನು ಚತುರನೂ, ಉದಾತ್ತನೂ ಆಗಿರುತ್ತಾನೆ. ಊರು, ಕಡಲು, ಬೆಟ್ಟ, ಋತು, ಸೂರ್ಯೋದಯ, ಚಂದ್ರೋದಯವು ಇವುಗಳ ವರ್ಣನೆಯಿಂದಲೂ ವನವಿಹಾರ, ಜಲಕ್ರೀಡೆ, ಮಧುಪಾನ, ವಿನೋದ, ಸುರತೋತ್ಸವಗಳಿಂದಲೂ ವಿಯೋಗಗಳಿಂದಲೂ ಕುಮಾರಜನನದ ವರ್ಣನೆಗಳಿಂದಲೂ ಮಂತ್ರಾಲೋಚನೆ, ದೂತವಾಕ್ಯ, ವಿಜಯಯಾತ್ರೆ, ಯುದ್ಧ, ನಾಯಕನ ವಿಜಯ ಇವುಗಳಿಂದಲೂ ಅಲಂಕೃತವಾಗಿ ಸಂಕ್ಷೇಪವಾಗಿರದೆ ರಸಭಾವಗಳಿಂದ ನಿಬಿಡವಾಗಿರುತ್ತ ಅತಿ ವಿಸ್ತಾರವಿಲ್ಲದ, ಕಿವಿಗಿಂಪಾದ ವೃತ್ತಗಳಿಂದ ಕೂಡಿದ, ಒಳ್ಳೆಯ ಸಂಧಿಗಳಿರುವ ಮತ್ತು ಮೊದಲು ಬರುವ ವೃತ್ತಗಳಿಂದ ಬೇರೆಯಾದ ವೃತ್ತಗಳು ಕಡೆಯಲ್ಲಿ ಬರುವಂತೆಯೂ ಪ್ರತಿ ಸರ್ಗಗಳಿರುವ ಅಲಂಕಾರಸಹಿತವಾದ ಕಾವ್ಯ ಲೋಕರಂಜನೆಯನ್ನು ಮಾಡುವುದಲ್ಲದೆ ಕಲ್ಪಾಂತರದವರೆಗೂ ಚಿರಸ್ಥಾಯಿಯಾಗಿ ನಿಲ್ಲುತ್ತದೆ"[2]

೧. ದಂಡಿ ಕಾವ್ಯಾದರ್ಶ, ಶಾರದಾಮಂದಿರ, ಮೈಸೂರು, ೧೯೭೫ (ಪ್ರಥಮ ಪರಿಚ್ಛೇದ, ೧೪-೧೯)

೨. ಕೆ. ಕೃಷ್ಣಮೂರ್ತಿ, ಕನ್ನಡ ಕಾವ್ಯಾಲಂಕಾರ, ಪು. ೧೪೬-೧೪೫

ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸೂರ್ಯೋದಯ

ಆದಿಕವಿ ಪಂಪನ ಪಂಪಭಾರತದಲ್ಲಿಯೂ ಸೂರ್ಯೋದಯದ ವರ್ಣನೆಯನ್ನು ಕಾಣಬಹುದು. ಅಂದರೆ ಆ 'ಪಸರಿಪ ಕನ್ನಡಕೊಡೆಯನೊರ್ವನೆ ಸತ್ಕವಿ ಪಂಪನಾವಗಂ' ಎಂದು ಪ್ರಸಿದ್ಧಿ ಪಡೆದ ಪಂಪಮಹಾಕವಿಯ ಭಾರತ ಕಾವ್ಯಾಂಬರದಲ್ಲಿಯ ಸೂರ್ಯೋದಯ ಸಚೇತನ ಸಜೀವಗಳಾಗಿವೆ. ಮಹಾಕಾವ್ಯದ ಅಷ್ಟಾದಶ ವರ್ಣನೆಗಳ ಶಿಷ್ಟಾಚಾರ ಪರಿಪಾಲನೆಗಾಗಿ ಬಂದ ಪೂರಕ ವರ್ಣನೆಗಳಲ್ಲಿ ಪಂಪನ ಸೂರ್ಯೋದಯದ ವರ್ಣನೆ ಬರಿ ವರ್ಣನೆಯಾಗಿ ಕಾಣದೆ, ನೈಜವಾಗಿ ಕಾವ್ಯದ ಕಥಾ ಸಂದರ್ಭಕ್ಕೆ ಸಮನ್ವಯವಾಗಿ ಬರುತ್ತದೆ. ಕವಿಕುಲಗುರು ಕಾಳಿದಾಸನ ಶಾಕುಂತಲ ನಾಟಕದಲ್ಲಿ ಪ್ರಕೃತಿಯೂ ಪ್ರಮುಖ ಪಾತ್ರವನ್ನಾಡಿದಂತೆ, ಕನ್ನಡ ಕವಿಕುಲಗುರು ಪಂಪನ ಮಹಾಭಾರತದ ಕಥೆ ಇತಿಹಾಸದಲ್ಲಿ ಸೂರ್ಯನದು ಪ್ರಮುಖ ಪಾತ್ರವಿದೆ.

ಈ ಪ್ರಮುಖ ಪಾತ್ರದ ಮಹತ್ವವನ್ನು ನೋಡುವಾಗ ಘಟನೆಗಳ ಬೆಳಕಿನಲ್ಲಿ ನೋಡುವುದಕ್ಕಿಂತ ಪ್ರತ್ಯೇಕವಾಗಿ ಪಾತ್ರಗಳಿಗೆ ಸಂಬಂಧಿಸಿದ ಹಾಗೆ ನೋಡಿದುದಾದರೆ ಆಂತರ್ಯದ ಸೌಂದರ್ಯ- ಸಂದರ್ಭದ ಗಾಂಭೀರ್ಯ ಹೆಚ್ಚು ಎದ್ದು ತೋರುವವು. ಸೂರ್ಯನ ಮಗ ಕರ್ಣನು ಮಹಭಾರತದ ಪಾತ್ರಗಳಲ್ಲಿ ಸೂರ್ಯ ಸಂಬಂಧಿಕನು, ಅಂತೆಯೇ ಕರ್ಣನಿಗೆ ಸಂಬಂಧಿಸಿ ಬಂದವು ಸೂರ್ಯ ವರ್ಣನೆಗಳು ಅತ್ಯಂತ ರಸ ಸಿದ್ಧಿ- ಪಡೆದವುಗಳಾಗಿವೆ.

ತರುಣಿಯಾದ ಕುಂತಿಯು ದುರ್ವಾಸರಿಂದ ಪಡೆದ ಮಂತ್ರ ಪರೀಕ್ಷೆಗಾಗಿ ತರಣಿಯನ್ನು ಪ್ರಾರ್ಥಿಸಿ ಪ್ರತ್ಯಕ್ಷಪಡಿಸಿಕೊಳ್ಳುತ್ತಾಳೆ. ಆಗ ಬಾನಿನಿಂದ ಭೂಭಾಗಕ್ಕೆ ಇಳಿದು ಬಂದ ತರಣಿ ಕಾವ್ಯದಲ್ಲಿಯೂ ಪ್ರಥಮವಾಗಿ ಇಳಿದು ಬರುತ್ತಾನೆ.

ತನ್ನೆ ಸಮ್ಮುಖದಲ್ಲಿದ್ದ ಸೂರ್ಯನೊಡನೆ ಮಾತನಾಡದೆ ಲಜ್ಜಾಭರಿತಳಾಗಿ ಎದೆಗುಂದುತ್ತಾಳೆ ಕುಂತಿ. ಕರೆಸಿದ ಕಾರಣವನ್ನು ಕುಂತಿಯಿಂದ ಕೇಳಬೇಕೆಂಬ ಸೂರ್ಯನ ಆಸೆ ಪೂರೈಸುವುದಿಲ್ಲ. ಕುಂತಿಯ ಮುನ್ನಿನ ಮನೋಗತವನ್ನರಿತೂ ಈಗಿನ ಅವಳ ಮನಸ್ಸಿಗೆ ವಿರುದ್ಧವಾಗಿ ತನ್ನ ಶಕ್ತಿಸಮನ್ವಿತಸುತನನ್ನಿತ್ತನು. ಸೂಕ್ಷ್ಮ ದೃಷ್ಟಿಯಿಂದ ಈ ಪ್ರಸಂಗವನ್ನು ಪರೀಕ್ಷಿಸಿದಾಗ ಕರ್ಣನ ಭವಿಷ್ಯದ ದುರಂತದಲ್ಲಿ ಆದಿತ್ಯನೂ ಪಾಲುಗಾರನಾಗುತ್ತಾನೆ.

ಪಡೆದದ್ದನ್ನು ಪರೀಕ್ಷಿಸಿ ಪ್ರಯೋಗಿಸಿ ನೋಡಬೇಕೆಂಬ ಕುತೂಹಲ ಕುಂತಿಗೆ ಮೂಡಿ ಸೂರ್ಯನನ್ನು ಪ್ರಾರ್ಥಿಸಿ ಪ್ರತ್ಯಕ್ಷ ಮಾಡಿಕೊಂಡಾಗ ಆ ಕುತೂಹಲವು ಭಯಾನಕವಾಗಿ ಪರಿಣಮಿಸಿತು. ಮಗನನ್ನು ಪಡೆಯಬೇಕೆಂಬ ಅವಳ ಮಮತೆ ಮಾಯವಾಯಿತು. ಅವಳ ಪ್ರಸ್ತುತ ಅಭೀಷ್ಟದಂತೆ ಸೂರ್ಯನು ಸುತನನ್ನೀಯದಿದ್ದರೆ ಕರ್ಣ ಜನನವಾಗುತ್ತಿರಲಿಲ್ಲ. ವಿಧಿಯ ಬಂಧನದಗ್ನಿಗೆ ಬೆಂದು ಇಂಧನವಾಗುತ್ತಿರಲಿಲ್ಲ ಕರ್ಣ.

ಸೂರ್ಯನು ಕರ್ಣನ ಜೀವನದಲ್ಲಿ ಹಾಸು ಹೊಕ್ಕು ಬರುವಂತೆ ಪಾರ್ಥನಲ್ಲೂ ಕೂಡ ಬರುವನು. ಅರ್ಜುನನು ಸುಭದ್ರೆಯ ಸೌಂದರ್ಯದ ಸೆರೆಯೊಳಗಿದ್ದಾನೆ. ಕಾಮದ ಕಾವಿನಿಂದ ದೇಹ ದಹಿಸತೊಡಗಿದೆ. ಹೊರಳಿ ಮುಗಿದರೂ ಮರಳಿ ಮರಳಿ ಸುಭದ್ರೆಯ ಚಿತ್ರ ಕಣ್ಮುಂದೆ ಕಟ್ಟುತ್ತದೆ. ಬೆಳಗಿನ ಕೊನೆಯ ಗಳಿಗೆಯ ಸ್ವಪ್ನದಲ್ಲಿ ಸುಭದ್ರೆಯನ್ನು ಸಂಧಿಸಿದಂತಾಗುತ್ತದೆ. ಆ ಸಮಯದಲ್ಲಿ ಸೂರ್ಯೋದಯವಾಗುತ್ತದೆ. ಆ ವರ್ಣನೆ ಈ ರೀತಿ ಇದೆ:

ಪುದಿದ ತಮಂ ಮದೀಯಕಿರಣಾಳಿಯನಾನದವೋಲೆ ನಿನ್ನನಾ
ಪದಟರುಮಾನರೆನ್ನುದಯಮಭ್ಯುದಯಂ ನಿನಗೆಂದು ಕನ್ನೆಯಂ
ಪದೆದೊಡಗೊಂಡು ಪೋಗಿರದಿರೆಂದು ಗುಣಾರ್ಣವ ಭೂಭುಜಂಗೆ ಕ
ಟ್ಟಿದಿರೊಳ ಬಟ್ಟೆದೋಱುವವೊಲಂದೊಗೆದಂ ಕಮಲೈಕಬಾಂಧವಂ ॥ (೪-೧೧೧)

ಕತ್ತಲೆಯು ನನ್ನ ಕಿರಣಕ್ಕೆ ಹೆದರಿ ಹರಿದು ಹೋಗುವಂತೆ ನಿನ್ನ ಶೌರ್ಯಕ್ಕೂ ವಿರೋಧಿಗಳು ಬೆದರಿ ಕಾಲಿಗೆ ಬುದ್ಧಿ ಹೇಳುತ್ತಾರೆ. ನಿನ್ನನ್ನು ಪರಾಭವಗೊಳಿಸುವ ಪರಾಕ್ರಮಿಯೂ ಇನ್ನಾರಿಲ್ಲ. ನಿನ್ನ ಹಂಬಲದ ಹವಳ, ನೆನಕೆಯ ನವನೀತ, ಕನಸಿನ ಕೆಳದಿಯಾದ ಸುಭದ್ರೆಯನ್ನು ಒಡಗೂಡಿ ಹೊರಟುಹೋಗು. ನನ್ನುದಯವೇ ನಿನ್ನಭ್ಯುದಯವೆನ್ನುವಂತೆ ಸೂರ್ಯನು ಉದಯಿಸಿ ಬಂದನಂತೆ.

ಬಲರಾಮನ ಬಯಕೆಯಂತೆ ದುರ್ಯೋಧನನ ಧರ್ಮಪತ್ನಿಯಾಗಲಿರುವ ಸುಭದ್ರೆಯು ಕೃಷ್ಣನ ಕಪಟತನದಿಂದ ಅರ್ಜುನನ ಅರ್ಧಾಂಗಿಯಾಗುವಳೆಂಬ ನಿರ್ಧಾರ ಈ ಉದಯದಲ್ಲಿದೆ. ಅಲ್ಲದೆ, ಮನದಲ್ಲಿ ಅಂಕುರಿಸಿದ ಕಾಮಾಗ್ನಿಜ್ವಾಲೆಯನ್ನು ಶಮನಗೊಳಿಸಿಕೊಳ್ಳುವನೆಂಬ ಅರ್ಥವೂ ಇದೆ. ಮತ್ತು ಅರ್ಜುನನ ಅತಿಶಯ ಪರಾಕ್ರಮ ವರ್ಣನೆಯೂ ಇದೆ. ಕಥಾನಾಯಕನ ಪಾತ್ರ ನಿರೂಪಣೆಯಲ್ಲಿ ಸೂರ್ಯೋದಯದ ಪಾತ್ರ ಸಂದರ್ಭೋಚಿತವಾಗಿದೆ.

ಆ ಸಮರ ಮುಖದೊಳೆಸೆವರಿ
ಕೇಸರಿಯ ವಿರೋಧಿ ರುಧಿರ ಜಲನಿಧಿವೊಲ್ ಸಂ
ಧ್ಯಾಸಮಯಮೆಸೆಯೆ ತಳತಳ
ನೇಸಱ್ ಮೂಡುವುದುದೊಡ್ಡಕ್ಕೆಳ್ತಂದರ್ ॥ (೧೧-೬)

ಭೀಮನ ಪಾತ್ರಕ್ಕೆ ಸಂಬಂಧಿಸಿದ ಸೂರ್ಯೋದಯದ ವರ್ಣನೆಯೂ ಪಂಪಭಾರತದಲ್ಲಿದೆ. ವಾಯುಸುತನು ಈ ಭಾರತ ರಣಾಂಗಣದಲ್ಲಿ ಬಕ ಕೀಚಕ ಹಿಡಿಂಬ ದುಶ್ಶಾಸನ ದುರ್ಯೋಧನ ಮೊದಲಾದವರನ್ನೆಲ್ಲ ಯಮಸದನ ಕಟ್ಟುವ ಜಟ್ಟಿ. ಅವನು ಪೂಣ್ದ ಪ್ರತಿಜ್ಞೆಗಳನ್ನೆಲ್ಲ ಪೂರೈಸಿ, ದ್ರೌಪದಿಯ ಕಣ್ಣೀರಿನ ಕಡಲಿನ ಕಾಳ್ಗಿಚ್ಚನ್ನಾರಿಸಬೇಕಾಗಿದೆ. ಅಗ್ನಿಪುತ್ರಿಯಾದ ದ್ರೌಪದಿಯಂತೂ ತನ್ನನ್ನು ಅವಮಾನಪಡಿಸಿದ, ಅಣಕವಾಡಿದ, ಪ್ರತಿಪಕ್ಷದ ಪರಾಕ್ರಮಿಗಳನ್ನೆಲ್ಲ ತನ್ನ ಒಡಲ ವಡಬಾಗ್ನಿಯಲ್ಲಿ ಬೈತಿಟ್ಟು ಉರಿಯತೊಡಗಿದ್ದಾಳೆ. ಇವಳ ಉರಿಯಿಂದ ಉರಿವೆದ್ದ ಗಾಳಿಯ ಮಗ ಭೀಮ. ಗೂಳಿಯ ದನಿಯ ಗುಡುಗಿನಂತೆ ಆರ್ಭಟಿಸುತ್ತ ಕಾಲ್ಕೆರೆಯುತ್ತ ಯುದ್ಧಭೂಮಿಯಲ್ಲಿ ನಿಂತಿದ್ದಾನೆ. ಅಗ್ನಿಪುತ್ರಿಯ ಅಪೇಕ್ಷೆಗೆ ವಾಯುಪುತ್ರನ ಪುರಸ್ಕಾರ ದೊರೆತಾಗ, ಅಳಿಯದೆ ಉಳಿಯದ ಎದುರಾಳಿ ಬಳಗ. ಈ ಸಂದರ್ಭ ಸಾರ್ಥಕತೆಗಾಗಿ ಸೂರ್ಯೋದಯವು ಸಹಾಯಕ ಸಾಧನವಾಗಿದೆ.

ಅರಗಿನ ಮನೆಯಿಂದ ಪಾಂಡವರು ಪಾರಾಗಿ ಹಿಡಿಂಬ ಇರುವ ಅರಣ್ಯಕ್ಕೆ ಪ್ರವೇಶಿಸುವರು. ಮಾರ್ಗಾಯಾಸದಿಂದ ಬಳಲಿದ ಸಹೋದರರು, ವಿಶ್ರಾಂತಿಯನ್ನು ಪಡೆಯಲೆಂದು ಮಲಗಲು ಹೇಳಿ ಅವರ ರಕ್ಷಣೆಗಾಗಿ ಭೀಮನು ಜಾಗರೂಕತೆಯಿಂದ ಎಚ್ಚೆತ್ತಿದ್ದು ಇರುಳನ್ನು ಕಳೆಯುತ್ತಾನೆ. ಆಗ ಹಿಡಿಂಬನು ಇವರನ್ನು ತಿಂದು ತೇಗಬೇಕೆಂದು ಬಯಸುವನು. ಅದಕ್ಕೋಸ್ಕರ ತನ್ನ ಪ್ರಿಯ ತಂಗಿಯನ್ನು ಕರೆದುಕೊಂಡು ಬರುವನು. ಆಗ ಬರುವ ಸೂರ್ಯೋದಯ ವರ್ಣನೆ ಜೀವನ ವಿಕಾಸದ ಪೂರ್ವಪೀಠಿಕೆಯಾಗಿ ನಿಲ್ಲುತ್ತದೆ.

ತುಂಬಿದ ರಕ್ತತೆಯಿಂ ನಿಜ
ಬಿಂಬಂ ವಾರುಣಿಯನೊಸೆದು ಸೇವಿಸೆ ನಾಣ್ಗ ॥
ಟ್ಟಂಬೋಲ್ ತೇಜಂ ಮಸುಳ್ವಿನ
ಮಂಬರಮಂ ಬಿಸುಟನಾಗಳಂಬುಜ ಮಿತ್ರಂ ॥ (೩-೨೩)

ಹೀಗೆ ಪಂಪನ ಕಾವ್ಯಗಳಲ್ಲಿ ಸೂರ್ಯೋದಯವು ಕಾವ್ಯ ಸೌಂದರ್ಯದ ಸೆಲೆಯಾಗಿ ಕಾಣಸಿಕೊಳ್ಳುತ್ತದೆ. ರನ್ನನ 'ಅಜಿತಪುರಾಣ ತಿಲಕಂ' ನಲ್ಲಿಯೂ ಸೂರ್ಯೋದಯ ವರ್ಣನೆ ಹೀಗೆ ಬರುತ್ತದೆ.

ವಾಸವದಿಕ್ತಟಂ ಸಮೆದ ಮೂಷೆ ತಮಂ ಸುರಿದಿರ್ದಲರ್ದಬ್ಜ ಸಂ
ವಾಸಿ ಸಮೀರಣ್ಸೌರಣಿಗನಾಗಿ ನಿದಾಘನ ದೀಪ್ತಿವರ್ತಿಯೊಳ್
ಕಾಸೆ ತೆರಳ್ದ ಪಿಂಜರಿಯವೋಲ್ ಕಿಸುಸಂಜೆ ತೆರಳ್ವಿನಂ ಪಳಂ
ಗಾಸಿನ ಪೊನ್ನಗಂಟೆಯವೊಲೊಪ್ಪಿದುದುದ್ಗತ ಭಾನುಮಂಡಲಂ ॥

ಇಂದ್ರನ ದಿಕ್ಕಾದ ಪೂರ್ವದ ದಿಕ್ಕು ಕುಲುಮೆಯಾಗಿ ಕತ್ತಲು ಇದ್ದಿಲಾಗಿ ನಿಧಾನವಾಗಿ ಗಾಳಿಯಿಂದ ಉರ್ಜಿ ಕಾವು ಕೊಟ್ಟು ಬೆಂಕಿಯಕಿಡಿಯ (ದೀಪ್ತಿವರ್ತಿ) ರೀತಿ ಹತ್ತಿ ಚೆನ್ನಾಗಿ ಕಾಯಿಸಿದ ಅಕ್ಕಸಾಲಿಗ (ಏರಣಿಗನ್) ಆಗ ಕತ್ತಲು ಸುಟ್ಟು ಹೋಗಿ ಹಳೆಯ ಕಾಸಿನ (ಪಳಂಗಾಸಿನ) ರೀತಿ ರಾಜರ ಅರಮನೆಯಲ್ಲಿರುವ ಕರೆಯುಗಂಟೆ ರೀತಿ (ಸೈನಿಕರನ್ನೋ ಮತ್ತೆ ಇತರರನ್ನ ಕರೆಯಲು ತಟ್ಟೆಯಾರೀತಿ ಗೋಳಾಕಾರದ ಗಂಟೆ) ಕೆಂಪಾಗಿ ದುಂಡಗೆ ಭಾನುಮಂಡಲ ಎಂಬ ಕುಲುಮೆಯಿಂದ ಫಳಫಳನೆ ಹೊಳೆಯುತ ಕಾಯಿಸಿದ ಹಳೆಕಾಸಿನ ರೀತಿ ಮೇಲೆರುತ್ತಿದ್ದನು ಎಂದು ರನ್ನನು ಅತ್ಯುಕ್ತಿಅಲಂಕಾರದಲ್ಲಿ ಅದ್ಭುತವಾಗಿ ಸೂರ್ಯೋದಯವನ್ನು ಚಿತ್ರಿಸಿದ್ದಾನೆ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಈ ವರ್ಣನೆಯು ಬಹಳ ಮುಖ್ಯವಾದುದು. ಸೂರ್ಯೋದಯ ವರ್ಣನೆಯನ್ನ 'ಸೂಕ್ತಿಸುಧಾರ್ಣವಂ' ನಲ್ಲಿ ಮಲ್ಲಿಕಾರ್ಜುನನು ಹೀಗೆ ನಿರೂಪಿಸುತ್ತಾನೆ.

ಕುಮುದಂ ಮೀನ್ ಚಂದ್ರಮಂ ಚಂದ್ರಿಕೆ ಕಳೆಯಲಿತಂ ಜ್ಯೋತಿಸಸ್ಯಂ ನಯಂಗುಂ
ದೆ ಮನಂ ಪಂಕೇರುಹಂ ತಣ್ಣೆಲರವಸರತೂರ್ಯಂ ರಥಾಂಗದ್ವಯಂ ಸಾಂ
ಧ್ಯಮಯೂಖಂ ಪೆರ್ಚೆ ಮರ್ಬುಂ ಸುಸಿಲಮಜಿಪು ಪಕ್ಷಿಸ್ವನಂ ಭೈರವೀರಾ
ಗುಮಗುರ್ವಂ ಬೀಜೆ ಪಾಂಥರ್ ನಡೆಯೆ ಕವಿಯಿ ನರ್ಕೋದಯಸ್ತೋತ್ರಮಕ್ಕುಂ॥

(ಸೂಕ್ತಿಸುಧಾರ್ಣವಂ;೯-೧)

ಹಳಹಳಸಿರ್ದ ತಾರೆ ಕಳೆಗುಂದಿದ ಚಂದ್ರನಲರ್ಕೆಗುಂದಿಂದು
ತ್ಪಲಮತಿ ಶೈತ್ಯಮಪ್ಪೆಲರು ಸಂದುವ ದೀಪ್ತಿಯಗಲ್ವ ಜಾರೆಯರ್
ಗಳಿಪುವ ಕೋಳೆ ಶಂಖಮರುಣಚ್ಛವಿ ಕೆಂಪಿನಮಂಡಲಂ ಕತ
ಕ್ಕೆಳಸುವ ಕೋಕಮಬ್ಜವಿಕಸಂ ಸಲೆ ಸೂರ್ಯನ ವರ್ಣನಕ್ರಮಂ ॥

(ಸೂಕ್ತಿ ಸುಧಾರ್ಣವಂ ೯-೨)

ಈ ಪದ್ಯದಲ್ಲಿ "ಪಳಪಳನಿರ್ದ ತಾರೆ", "ಕಳೆಗುಂದಿದ ಚಂದ್ರಂ" "ವೈತ್ಯಮಪ್ಪೆಲರು" "ಗಳಪುವಕೋಳಿ", "ಅರುಣಚ್ಛವಿ", "ಇನಮಂಡಲ", ಇವುಗಳ ವರ್ಣನೆಗಳು ಪ್ರಕೃತಿಯಲ್ಲಿ ಸೂರ್ಯೋದಯ ಕಾಲದಲ್ಲಿ ನಾವು ಅನುಭವಿಸಿರುವ ಒಂದು ಸುಖವನ್ನು ತೋರಿಸುತ್ತವೆ ; ಅದು ಇರಬೇಕು ಎಂಬುದು ಮಲ್ಲಿಕಾರ್ಜುನನ ಅಪೇಕ್ಷೆ.

ಎಂದರೆ ತಾರೆಗಳ ಮತ್ತು ಚಂದ್ರನ ಕಾಂತಿಯುಕುಂದಿ, ಅರಳಿದ ಉತ್ಪಲ, ತಣ್ಣನೆಗಾಳಿ ಸಂದುವ ಬೆಳದಿಂಗಳು, ವೇಶ್ಯೆಯರ ಅಗಲ್ವಿಕೆ, ಕೋಳಿಯ ಕೂಗು, ಅರುಣನು ಕಾಂತಿಗೊಳ್ಳುವುದು ಭಾನುಮಂಡಲ ಕಂಪೇರುವುದು, ಸ್ಫೂರ್ತಿಗೊಳ್ಳುವ ಕೋಗಿಲೆ, ವಿಕಾಸವಾಗುವ ಕಮಲ - ಈ ಕ್ರಿಯೆಗಳೆ ಸೂರ್ಯನ ಉದಯದಿಂದ ಆಗುವ ಪ್ರಕ್ರಿಯೆ.

ಕತ್ತಲೆ ಕವಿದು ನಭದಲ್ಲಿ ಕೆಂಪೇರಿದಾಗ ಈ ಸೂರ್ಯೋದಯದ ಆಗಮನವನ್ನು ಮೊದಲು ಸಾರುವುದು ಕೋಳಿ. ಕೋಳಿಗೂ ಸೂರ್ಯೋದಯಕ್ಕೂ ಹತ್ತಿರದ ಗುಂಟುನುಂಟುಗಳಿವೆ. ಮಲ್ಲಿಕಾರ್ಜುನನು ಅದನ್ನ ಈ ರೀತಿ ನಿರೂಪಿಸುತ್ತಾನೆ:

ಪೊಕ್ಕಂದೀ ಪುರಮೊಳ್ ಸುಖ
ವಕ್ಕಾಡಿತು ಚಂದ್ರನೆಂಬ ರಾಯಂ ಪೋಗಲ್
ದುಷ್ಕರ ವಹ್ನಿಯೆ ತೋಱದೆ
ಕುಕ್ಕೂಕೂಯೆಂದು ಕೋರಿಱಕೂಗಿದುವಾಗಳ್ ॥

ಅರುಣನು ಆಗಮಿಸಿದಾಗ ಚಂದ್ರನು ಮರೆಯಾಗಲು ಕತ್ತಲು ತೊರೆಯುವಾಗ ಕೋಳಿ "ಕುಕ್ಕೂಕೂಯೆಂದು ಕೋಳಿ ಕೂಗಿದುವಾಗಳ್". ಕೋಳಿ ಕೂಗಿದಾಗ ಕಿರಣೋದಯವಾಗುವುದು ಅದನ್ನೂ ಕೂಡ ಮಲ್ಲಿಕಾರ್ಜುನ ಈ ರೀತಿ ಹೇಳುತ್ತಾನೆ.

ಇಳೆಯ ಮುಸುಕಂ ಮೆಲ್ಲನೆ
ಕಳೆವುತ್ತೆಚ್ಚಱಿಸುತಂ ರಥಾಂಗಮನಬ್ಜಂ
ಗಳನೆವೆದೆ ಅಱಿಯಿಸುತಂ ದೆಸೆ
ಗಳನೆಬ್ಬಿಸುತೆದ್ದವಾಗಳಿನಕಿರಣಂಗಳ್ ॥

ಕಿರಣೋದಯವಾದಾಗ ಬಾನಿನಲ್ಲಿ ಮಂಡಲೋದಯವಾಗುವುದು.

ಮುದಯಿಸುತಂ ಸರಸಿಜಮಂ
ಬೆದಱಿಸುತುಂ ಕೈರವಂಗಳಂ ಘನಪಥದೊಳ್
ಕೆದಱುತ್ತುಂ ಕಿರಣಾಳಿಯ
ನುದಯಾಚಳಚೂಡದಲ್ಲಿ ಮೂಡಿದನರ್ಕಂ ॥

ಬಾನಿನಲ್ಲಿ ಮಂಡಲೋದಯವಾದಾಗ ಪ್ರಕೃತಿಯಲ್ಲಿ ಈ ಕೆಳಕಂಡಂತೆ ಚಟುವಟಿಕೆಗಳು ಪ್ರಾರಂಭವಾಗುವವು.

ನಿಶಿ ಬಿಟ್ಟೋಡೆ ಶಶಾಂಕನುನ್ನತಕರಂಗಳ ಬಾಡೆ ಕಂಜಾಳಿ ಸಂ
ತಸಮಂ ಸೂಡೆ ಮದಾಳಿ ಪಾಡೆ ನಲವಿಂ ಚಕ್ರಾಹ್ವಯಂ ಕೂಡೆ ಶೈ
ತ್ಯಸಮೀರಂ ನೆಱೆ ತೀಡೆಕ್ಕೈರವನಿಕಾಯಂ ಕೋಡೆ ಪೂರ್ವಾದ್ರಿಕೆಂ
ಬಿಸಲಿಂದೊಪ್ಪಿರೆ ಮೂಡಿದಂ ಭಗಣಶೋಭಾತಸ್ಕರಂಭಾಸ್ಕರಂ ||

(ಸೂಕ್ತಿಸುಧಾರ್ಣವಂ ೯'-೭೫')"

ತಮವಿರದೋಡೆ ಜಾರೆ ಮನೆಗೋಡೆ ತಳಿರ್ಗಳು ಬಾಡೆ ಪೆರ್ಮೆಯಿಂ
ಭ್ರಮರಗಳಾಡೆ ಕಂತು ಪರಿದೋಡೆ ಧರಾತಳ ಕೂಡೆಯೆಲ್ಲರುಂ
ಕ್ರಮದಲಿ ನೋಡೆ ಭೈರವಿಯ ಪಾಡೆ ಹಿಂಮಂ ಕಳಿದೋಡೆ ಚಕ್ರಸಂ
ಭ್ರಮದಲಿಕೂಡೆ ಪದ್ಮನಲಿದಾಡೆ ಪ್ರಭಾಕರ ಮೂಡೆ ರಾಗದಿಂ ||

ನಿಶಿಯು ಬಿಟ್ಟು ಓಡುವುದು, ಶಶಾಂಕನ ಕಿರಣಗಳು ಬಾಡಿ ಹೋಗುವವು, ತಾವರೆಗಳ ಸಮೂಹಗಳು ಅರಳಲು ದುಂಬಿಗಳು ಝೇಂಕರಿಸಲು, ನಲಿವಿಂದ ಚಕ್ರವಾಕ ಪಕ್ಷಿಗಳು ಕೂಡಲು ತಣ್ಣನೆಗಾಳಿ ಮೈಸೋಂಕಲು ಕನ್ನೈದಿಲೆಗಳು ಮುದುರಿಕೊಳ್ಳಲು ಕಾರಣ ಸೂರ್ಯ ಇಷ್ಟೆಲ್ಲಕ್ಕೂ ಕಾರಣಕರ್ತನಾದ ಸೂರ್ಯನನ್ನು "ಭಗಣಶೋಭಾತಸ್ಕರಂ ಭಾಸ್ಕರಂ" ಎಂದಿದ್ದಾನೆ. ಹಾಗೆಯೇ ಸೂರ್ಯನ ಬರುವಿಕೆಯಿಂದ ಮತ್ತೂ ಪರಿವರ್ತನೆಯಾಗುವುದನ್ನು 'ತಮವಿರದೋಡೆ.....................' ಎಂಬ ವೃತ್ತದಲ್ಲಿ ನೋಡಬಹುದು. ಕತ್ತಲು ಇರದೆ ಓಡಿ, ಜಾರೆಯರು ಸೂರ್ಯೋದಯದಿಂದ ತಮ್ಮ ಕೆಲಸಕ್ಕೆ ಭಂಗ ಬಂದು ಮನೆಗೆ ಓಡಲು, ಪ್ರೀತಿಯಿಂದ ಭ್ರಮರಗಳು ಆಡಲು, ಮನ್ಮಥನು ಕೂಡ ತೆರಳಿ ಧರೆಯಲ್ಲಿ ಎಲ್ಲರು ಪರಸ್ಪರ ಕೂಡಲು, ಭೈರವಿಯ ರಾಗ ಹಾಡಲು, ಚಳಿ ಸರಿಯಲು, ಚಕ್ರವಾಕಪಕ್ಷಿಗಳು ಸಂಭ್ರಮದಲ್ಲಿ ಕೂಡಲು, ಕಮಲಗಳು ಹರ್ಷದಾಳಲು ಸೂರ್ಯನ ಸ್ಫೂರ್ತಿ ಹಾಗೂ ಅವನ ಹಿತವಾದ ಅಪ್ಪುಗೆಯಿಂದ

ಪರೆದುದು ಮರ್ಬು ಪರ್ಬಿದುದು ಕೆಂಬೆಳಗು ಇಂದ್ರದಿಶಾ ವಿಭಾಗಮಂ
ಸುರಭಿಸಮೀರನೂದಿಮುದು ಎಸಳ್ ಮಿಸುಕಲ್ ತೊಡಗಿತ್ತು ಪಂಕಜಂ
ಸರಮಱೆದೊಂದನೊಂದೆಳೆಸುತಿರ್ದುವು ಕೋಕಮ್ ಉಲೂಕಸಂಕುಳಂ
ಪರಿಯಿಸಿ ಬಂದಡಂಗಿದುವು, ಪಕ್ಕಿಗಳೆದ್ದುವು ಸುಪ್ರಭಾತದೊಳ್ ||

(ಸೂಕ್ತಿಸುಧಾರ್ಣವ, ಪು. ೨೨೯ ಪ. ೬೩.)

ಮುಂದೆ ಮಹಾಸುರ ಮಥನಂ
ಒಂದೇಱೆದನಮರಗಿರಿ ಶಿಖಾಗ್ರಮನೆಂದೋ
ರಂದದೆ ಮೊರೆವಳಿಯಿಂದರ
ವಿಂದೌಷದ ಮುಂದೆ ನಿದ್ದೆ ತಿಳಿದುವು ಕೊಳಗಳ್ ||

(ಸೂಕ್ತಿಸೂಧಾರ್ಣವಂ, ಪು. ೨೨೬ ಪ. ೪೧)

ಮೇಲಿನ ವೃತ್ತದ "ಪರೆದುದು ಮರ್ಬು, ಪರ್ಬಿದುದು ಕೆಂಬೆಳಕು ಇಂದ್ರದಿಶಾ ವಿಭಾಗಮಂ" ಎನ್ನುವ

ಕುಸುರಿಯ ಕೆಲಸ ರೋಮಾಂಚನವನ್ನುಂಟು ಮಾಡುತ್ತದೆ. ಸುಗಂಧಮಯವಾದ ಗಾಳಿಗೆ ಕಮಲದ ಎಸಳು ಮಿಸುಗತೊಡಗಿತು ಎಂಬಲ್ಲಿ ನವುರಾದ ಭಾವವಿದೆ. ಕಂದ ಪದ್ಯದ ಕಡೆಯ ಎರಡು ಸಾಲುಗಳು", "ದುಂಬಿಯ ಗುಂಜಾರವದಿಂದ ಕೊಳಗಳು ನಿದ್ದೆ ತಿಳಿದುವು" ಎನ್ನುವ ಕಲ್ಪನಾನುಭವ ಸಮರ್ಥವಾಗಿ ಚಿತ್ರಿತವಾಗಿದೆ.

ಲಕ್ಷ್ಮೀಶನು ತನ್ನ ಜೈಮಿನಿಭಾರತದಲ್ಲಿ ಸಶಕ್ತವಾಗಿ ಸೂರ್ಯೋದಯದ ವರ್ಣನೆಯನ್ನು ಹೀಗೆ ಮಾಡಿದ್ದಾನೆ:

ಮೂಡುದೆಸೆಯೊಳ್ ಕೆಂಪು ದೊರೆಯೆ ತಾರಗೆ ಪರಿಯೆ
ಕೂಡೆ ತಂಗಾಳಿ ಮುಂಬರಿಯೆ ಕಮಲಂ ಬಿರಿಯೆ
ಪಾಡುವೆಳೆದುಂಬಿಗಳ್ಮೊರೆಯೆ ಚಕ್ರಂ ನೆರೆಯೆ ನೈದಿಲೆಯ ಸೊಂಪುಮುರಿಯೆ
ಬೀಡುಗೊಂಡಿರ್ದ ಕತ್ತಲೆಯ ಪಾಳೆಯುಮೆತ್ತ
ಲೋಡಿದುದೊ ನೋಡಿದಪೆನೆಂದು ಪೂರ್ವಾಚಲದ
ಕೋಡುಗಲ್ಲಂ ಪತ್ತಿದಂತೆ ಮೆರೆದಂ ಪ್ರಭೆಯೊಳೌನ್ನತ್ಯಾನಾದಿತ್ಯನು ॥

(ಜೈಮಿನಿಭಾರತ - ೩-೬೫)

ಮುಂದಿನ ಯಜ್ಞಕ್ಕೆ ಯಜ್ಞಾಶ್ವತರಲು ಕೃಷ್ಣನ ಸಹಾಯ ದೊರೆತಾಗ ಧರ್ಮರಾಯ ಮತ್ತು ಅವನ ಸಹೋದರರು ಅತಿಶಯವಾದ ಸಂತೋಷವನ್ನು ತಳೆದು ಆ ರಾತ್ರಿ ಕೃಷ್ಣನೊಂದಿಗೆ ಷಡ್ರಸಾನ್ನ ಭೋಜನ ಮಾಡಿ ರಾತ್ರಿ ಕಳೆದ ಅನಂತರ ಉಷಾಕಾಲವನ್ನು ಮೇಲಿನ ಪದ್ಯಗಳಲ್ಲಿ ವರ್ಣಿಸುತ್ತಾನೆ ಲಕ್ಷ್ಮೀಶ.

ಮೂಡಣವೆಲ್ಲ ಕೆಂಪು ಮೂಡಿತು, ನಕ್ಷತ್ರಗಳ ಕಾಂತಿ ಮರೆಯಾಗಿ ತಾವರೆಗಳು ಅರಳತೊಡಗಿದವು. ತಾವರೆ ಅರಳುತ್ತಿರಲು ಮಧುರವಾದ ಸುವಾಸನೆಯು ಸುತ್ತಲೂ ಹರಡಲು ತುಂಬಿಯ ದಂಡು ದಂಡೆತ್ತಿ ಬಂತು. ಚಕ್ರವಾಕ ಪಕ್ಷಿಗಳು ನೆರೆದವು. ನೈದಿಲೆಯ ಸೊಂಪು ಅಡಗಿತು. ರಾತ್ರಿಗೂಡಾರ ಹೂಡಿದ ಕತ್ತಲೆಯ ದಂಡು ಪಲಾಯನ ಮಾಡಿತು. ಅವನ್ನು ಕಣ್ಣಾರೆ ನೋಡಿ ತಿಳಿದುಕೊಳ್ಳೋಣ ಎಂದು ಸೂರ್ಯ ಮೂಡಣ ಬೆಟ್ಟದ ಕೋಡುಗಲ್ಲನೇರುತ್ತ ಉದಿಸಿ ಮೇಲಕ್ಕೆ ಬಂದನು ಎಂದು ಕವಿ ಕಾವ್ಯಾನುಭವವನ್ನು ತೋರಿದ್ದಾನೆ.

ರತ್ನಾಕರವರ್ಣಿಯು ತನ್ನ ಭರತೇಶ ವೈಭವದಲ್ಲಿ ಸೂರ್ಯೋದಯದ ವರ್ಣನೆಯನ್ನು ಬಲು ಸೊಗಸಾಗಿ ನಾಲ್ಕು ಮಾತುಗಳಲ್ಲಿ ಹೀಗೆ ವರ್ಣಿಸಿದ್ದಾನೆ:

ತಂಗಾಳಿ ತೀಡಿತು ತಾರಗೆ ಮುಸುಳ್ದುವು
ಹಿಂಗಿತು ಜಗದಂಧಕಾರಾ
ಮುಂಗಾರ ಮೊಳಗಿನಂದದಿ ಮೊಳಗಿದವು ವಾ
ದ್ಯಂಗಳು ಜಿನಗೃಹದೊಳಗೆ ॥

ಎಳಬಿಸಿಲಡರ್ದೇರಿ ಜಿನನಿಲಯ ರತ್ನ
ಕಳಸದೊಳ್ಮಾತಾಡೆ ಕಂಡು

ಪ್ರಾಚೀ ಮಾಣಿಕ್ಯ ತಾಟಂಕಮೊ ದಿವಸ ರಮಾಪಾಣಿ ಪಂಕೇಜಗ ವ್ಯಾ
ಕ್ರೋಚ ಸ್ವರ್ಣಾಬ್ಜಮೋ ಪುಷ್ಕರ ಮುರಹರ ಹಸ್ತಾಬ್ಜ ವಿನ್ಯಸ್ತ ಚಂಪ ।
ದ್ರೋಚಿಶ್ಚ್ರೀಚಕ್ರಮೊ ಮೇಣ್ಮಲಯ ಶಿಖರಿ ಬಂಧೂಕಮೋ ದೇಪೇಳೆಮೆಂಬಂ
ತಾಚಾಂತ ಧ್ವಾಂತ ವಾರಾಕರಮೆಸೆದುದಳುಂಬಂ ದಿನಾಧೀಶ ಬಿಂಬಂ ॥

- ಬಸವಪ್ಪ ಶಾಸ್ತ್ರಿ

"ಸೂರ್ಯನ ಈ ವರ್ಣನೆಗಳನ್ನು ಚೆನ್ನಾಗಿ ತಿಳಿದು ಅವುಗಳಲ್ಲಿರುವ ಸ್ವಾದುತ್ವವನ್ನು ಸವಿನೋಡಬೇಕಾದರೆ ಊಹಾಬಲವನ್ನು ಸ್ವಲ್ಪ ವಿಸ್ತರಿಸಬೇಕಾಗುತ್ತದೆ. ಈಗ ಕಮಲಭವನ ವರ್ಣನೆಯನ್ನು ತೆಗೆದುಕೊಳ್ಳೋಣ. ಸೂರ್ಯಬಿಂಬವು ಪೂರ್ವದಿಕ್ಕೆಂಬ ವನಿತೆಯ ಕೊರಳಲ್ಲಿರುವ ಕಂಠಿಕೆಯೆಂಬ ಆಭರಣದ ಕೆಂಪುರತ್ನದ ಹಾಗೂ ಪೂರ್ವದಿಕ್ಕೆಂಬ ಅರಮನೆಯ ರತ್ನಮಯವಾದ ಕಳಶದ ಹಾಗೂ ಐರಾವತವೆಂಬ ಆನೆಯ ಸಿಂಧೂರ ಲಿಪ್ತವಾದ ಕುಂಭ ಸ್ಥಳದ ಹಾಗೂ ಕೆಂಪು ಬಣ್ಣವನ್ನು ಹೊಂದಿ ಉದಯವಾಯಿತು. ಹೀಗೆಯೇ ಸ್ಥೂಲವಾಗಿ ಷಡಕ್ಷರಿ ಸೋಮರಾಜಾದಿಗಳ ವರ್ಣನೆಗಳೂ ಕೂಡ. ಕಮಲಾಭವನ ವರ್ಣನೆಯಲ್ಲಿ "ತರಳ ಮಾಣಿಕ್ಯ" ವೆಂದು ಸೂರ್ಯನಿಗೆ ವಿಶೇಷಿಸಿ ಹೇಳಿರುವುದರಿಂದ ಉದಯ ಕಾಲದ ಸೂರ್ಯನಲ್ಲಿ ಕ್ಷಣಕ್ಷಣಕ್ಕೂ ಬೇರೆ ಬೇರೆಯಾಗಿ ತೋರಿಬರುವ ಸೊಗಸುಗಳು ಜ್ಞಾಪಕಕ್ಕೆ ಬರುತ್ತವೆ. ಷಡಕ್ಷರಿಯ "ಚಂಚದ್ವೃಕ್ಷದಂಬಂ" ಎಂಬ ಮಾತುಗಳಲ್ಲಿಯೂ ಕೂಡ ಅದೇ ಭಾವವು ಮನಸ್ಸಿನಲ್ಲಿ ಉಂಟಾಗುವುದು. ಸೂರ್ಯಬಿಂಬವನ್ನು ನೋಡುತ್ತಲೆ ನಮ್ಮ ಕವಿಗಳಿಗೆ ಅತಿಶಯವಾದ ಉತ್ಸಾಹವೂ ಅಥವಾ ಮನೋರಂಜನೆಯೂ ಉಂಟಾಗಿದ್ದಿತೆಂಬುದು "ನೋಡು ನೋಡಿಂತಿದು ಪೂರ್ವಾಶಾಂಗನಾ ಮಂಗಳ ಮಧೂರಿ ಸೀಮಂತ ಮಾಣಿಕ್ಯಮೋ" ಎಂಬ ಮಾತುಗಳಲ್ಲಿ ಸೂಚಿತವಾಗಿದೆ. ಗುಣವರ್ಮನಿಗೆ ಮಾತ್ರ ಸೀಮಂತ ಸೂರ್ಯನು, "ಅರುಣನರುಣಕಿರಣ ಪ್ರಸರ" ವುಳ್ಳವನಾಗಿದ್ದನು. ಆಧುನಿಕರಾದ ಬಸವಪ್ಪಶಾಸ್ತ್ರಿಗಳ ವರ್ಣನೆಯಲ್ಲಿ ಸೂರ್ಯನು "ಮಲಯ ಶಿಖರಿ ಬಂಧೂಕಮೋ" ಎಂಬ ಹಾಗೆ ಇದ್ದನು. ಈ ಮಾತುಗಳು ಭೋಜರಾಜನ "ಬಂಧೂಕಸ್ತಬಕ ಸುಂದರ ಬಂಧುರಾಗೇಣ ಪ್ರಾಚೀಮುಖೇನ" ಎಂಬ ಮಾತುಗಳಲ್ಲಿ ಅಡಕವಾಗಿರುವ ಚಿತ್ರವನ್ನು ಮನಸ್ಸಿನ ಮುಂದೆ ತರುವುವು[೩].

"ಪ್ರಾಚೀನ ಕವಿಗಳ ಸೂರ್ಯೋದಯದ ವರ್ಣನೆಯು ವಿಶಿಷ್ಟ ಲಕ್ಷಣ ಕಾಣಬರುವುದಿಲ್ಲ. ಸ್ಥಳ, ಕಾಲಮುಂತಾದವುಗಳು ಕೂಡ ತಿಳಿದುಬರುವುದಿಲ್ಲ. ಸೂರ್ಯೋದಯದ ಅನಂತರ ಬಹಿರ್ಷಟನೆಗೆತೋರಿದ ಪ್ರತಿಕ್ರಿಯೆ ಎಂದು ಹೇಳುವುದು ಶಶವಿಷಾಣ ಶೋಧನೆಯೆ ಸರಿ[೪] ".

೩ ಡಿ. ಎಲ್. ನರಸಿಂಹಾಚಾರ್, ಪೀಠಿಕೆಗಳು ಲೇಖನಗಳು, ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೭೧, ಪು.೩೬೦
೪. ಎಸ್ ವಿ. ಪರಮೇಶ್ವರಭಟ್ಟ, ರಸಋಷಿ ಕುವೆಂಪು, ಪ್ರಸಾರಾಂಗ, ೧೯೮೫, ಪು.೫೨

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೂರ್ಯೋದಯ

೧೯ನೆಯ ಶತಮಾನದ ಕೊನೆಯಲ್ಲಿ ಕನ್ನಡ ಸಾಹಿತ್ಯದಲ್ಲಿ ಒಂದು ಹೊಸ ಘಟ್ಟ ಆರಂಭವಾಯಿತು. ಇದು ಪಾಶ್ಚಾತ್ಯ ಎಂದರೆ ಮುಖ್ಯವಾಗಿ ಇಂಗ್ಲಿಷ್ ಸಾಹಿತ್ಯ ಮತ್ತು ವಿಚಾರ ಇವುಗಳ ಪ್ರಭಾವದಿಂದ ಆರಂಭವಾದ ಕಾಲ "ಪಾಶ್ಚಾತ್ಯ ವಿಚಾರಗಳ ಮಹಾಪ್ರಭಾವದಿಂದ ಕನ್ನಡ ಸಾಹಿತ್ಯವಾಹಿನಿ ಬಹಳ ಬದಲಾಯಿಸಿದೆ ಮತ್ತು ವಿಶಾಲವಾಗಿದೆ"[ ] ಎಂದು ಇ.ಪಿ.ರೈಸ್ ಹೇಳಿದ್ದಾರೆ.

"ಪರಿವರ್ತನೆ, ನಿತ್ಯ ನೂತನೆಯಾದ ಕಾವ್ಯಕನ್ನಿಕೆಯ ಚಿರಂತನ ಲಾವಣ್ಯದ ಒಂದು ಹೃದಯ ರಹಸ್ಯ. ಅನುಭವ ಸ್ಥವಿರೆಯಾದರೂ ಸರ್ವದಾ ಪ್ರಗತಿಶೀಲೆ : ಸಂಪ್ರದಾಯ ಸುಸ್ಥಿರೆಯಾದರೂ ನಿರಂತರ ಕ್ರಾಂತದರ್ಶಿನಿ: ಪ್ರಾಚೀನೆಯಾದರೂ ನಿತ್ಯನೂತನೆ; ಸಾಹಿತ್ಯ ಲಕ್ಷ್ಮಿ ಸ್ವಭಾವತಃ ನವನವೋನ್ಮೇಷಶಾಲಿನಿ[ ]".

"ಜನಜೀವನದ ನದಿ ಹರಿದ ಮೇಲೆ ಸಿದ್ಧವಾಗುವ ನದೀಪಾತ್ರ ಮಾತ್ರದಂತಲ್ಲ ಸಾಹಿತ್ಯ; ನದಿಯ ನೀರನ್ನೂ ಸೃಜಿಸಿ, ಅದು ಹರಿಯುವ ದಿಕ್ಕನ್ನೂ ಹರಿಯಬೇಕಾದ ದಾರಿಯನ್ನೂ ನಿರ್ಣಯಿಸುವ ಚೇತನಶಕ್ತಿಯೂ ಹೌದು. ರಸರತಿ ಆ ಚೇತನಶಕ್ತಿ, ಸೃಷ್ಟಿಮೂಲವಾಗಿರುವುದರಿಂದ, ಅದು ಸೃಷ್ಟಿ ಹೃದಯದಲ್ಲಿ ಸದಾ ಸ್ಪಂದಿಸುತ್ತಿರುವುದರಿಂದ, ಸೃಷ್ಟಿ ದೇವಿಯಾಗಿ ಮಹಾಲಕ್ಷ್ಮಿಯಂತೆ ವಾಗ್ದೇವಿಯು ಮಹಾಸರಸ್ವತಿಯೂ ಯಾವಾಗಲೂ ಹೊಸ ಹೊಸದಾಗಿ ನವನವೀನ ಪ್ರಕಾರಗಳಲ್ಲಿ ಪ್ರವಾಹಲೋಲೆಯಾಗಿರುವ ನವನವೋನ್ಮೇಷಶಾಲಿನಿ ಮತ್ತು ಕ್ರಾಂತದರ್ಶಿನಿ"[ ].

ಕನ್ನಡ ಸಾಹಿತ್ಯ ನೂತನ ರೂಪುರೇಖೆಗಳನ್ನು ತಳೆಯಲು ನೂತನ ಪದಗಳಲ್ಲಿ ಸಾಹಸ ಯಾತ್ರೆಯನ್ನು ಕೈಗೊಳ್ಳಲು ಪಾಶ್ಚಾತ್ಯ ಪ್ರಭಾವವೇ ಪ್ರಮುಖವಾದ ಪ್ರೇರಕಶಕ್ತಿಯಾಯಿತು. ಹಲವು ಶತಮಾನಗಳಷ್ಟು ದೀರ್ಘಕಾಲ ಈ ದೇಶ ರಾಜಕೀಯವಾಗಿ, ಆರ್ಥಿಕವಾಗಿ ಘೋರ ವಿಪತ್ಪರಂಪರೆಗಳನ್ನು ಎದುರಿಸಬೇಕಾಗಿ ಬಂದುದಕ್ಕೆ ಎಷ್ಟೇ ಉಗ್ರವಾಗಿ ಇಂಗ್ಲಿಷರನ್ನು ಟೀಕಿಸಿದರೂ ಅನ್ನ ಪ್ರಾಣ ಮನೋಮಯಗಳಲ್ಲಿ ನಡೆದ ಒಂದು ಅಮೋಘವಾದ ಕ್ರಾಂತಿಗಾಗಿ ಅವರನ್ನು ಅಭಿವಂದಿಸಬೇಕಾಗುತ್ತದೆ. ಇಂಗ್ಲಿಷ್ ಸಾಹಿತ್ಯ ಪಾಶ್ಚಾತ್ಯ ಸಾಹಿತ್ಯದ ಕಾಮಧೇನುವನ್ನು ಕರೆಯುವ ಕೆಚ್ಚಲು ಆಗಿ, ಪರಿಣಮಿಸಿತು ಭಾರತಕ್ಕೆ. ಪಾಶ್ಚಾತ್ಯ ಸಾಹಿತ್ಯದ ವಸ್ತು ರೀತಿಗಳ ವೈವಿಧ್ಯವನ್ನು ಕಂಡು ದೇಶಭಾಷೆಗಳು ಮೊದಲು ಮುಗ್ಧವಾದರೂ, ಬಳಿಕ ಧೈರ್ಯವಾಗಿ ಸಖ್ಯ ಬೆಳೆಸಿ ಕ್ರಮಕ್ರಮವಾಗಿ ತಮ್ಮವನ್ನಾಗಿ ಮಾಡಿಕೊಂಡು ಕೊನೆಗೆ ಅಂತರ್ಗತವನ್ನಾಗಿಯೂ ಅಡಗಿಸಿಕೊಂಡವು. ಈ ಶತಮಾನದ ಆದಿಯ ದೇಶಭಾಷೆ ಚರಿತ್ರೆಯೆಂದರೆ ನವಲಾವಣ್ಯವತಿಯಾದ ಪಶ್ಚಿಮದ ಕಾವ್ಯ ಕನ್ಯೆಗೆ ಸೀರೆಯುಡಿಸಿ, ಮಾಂಗಲ್ಯ ತೊಡಿಸಿ ಭಾರತೀಯವಾದ ಆತ್ಮವನು ನೀಡಿದುದು[ ]"!

ಬಿ.ಎಂ.ಶ್ರೀ ಅವರ "ಇಂಗ್ಲಿಷ್ ಗೀತಗಳು" ಆಧುನಿಕ ಕನ್ನಡ ಕಾವ್ಯ ಪ್ರಪಂಚಕ್ಕೆ ಹೊಸದೊಂದು ಹೆದ್ದಾರಿಯನ್ನು ತೆರೆದು ಚಿರಂಜೀವವಾದ ಕೃತಿಯಾಯಿತು. ಈ ದಾರಿಯನ್ನೇ ಹಿಡಿದ ಅನಂತರದ ಕವಿಗಳು ಆಂಗ್ಲ ಸಾಹಿತ್ಯದ 'ಲಿರಿಕ್'

---

೬. ಎಸ್. ಅನಂತನಾರಾಯಣ, 'ಹೊಸಗನ್ನಡ ಕವಿತೆಯ ಮೇಲೆ ಇಂಗ್ಲಿಷ್ ಕಾವ್ಯದ ಪ್ರಭಾವ', ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೭೬, ಪುಟ. ೪

೭. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ.ಮೂರ್ತಿ, ಪ್ರಕಾಶನ, ಮೈಸೂರು, ೧೯೬೬, ಪು.೧೬

೮. ಕುವೆಂಪು, 'ಇಂದಿನ ಹೊಸಗನ್ನಡ ಕವಿತೆ ಮತ್ತು ಅದರ ಮುಂದಿನ ನಡೆ', ವಿಭೂತಿಪೂಜೆ, ಪು. ೧೯

೯. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ.ಮೂರ್ತಿ, ಪ್ರಕಾಶನ, ಮೈಸೂರು, ೧೯೬೬, ಪು.೯೬, ೯೪

ಅನ್ನು ಬಳಸಿಕೊಂಡು ಕನ್ನಡದಲ್ಲಿ 'ಭಾವಗೀತೆ'ಗಳನ್ನು ರಚಿಸತೊಡಗಿದರು. ಈ ಕ್ಷೇತ್ರದಲ್ಲಿ ಕುವೆಂಪು, ಪು.ತಿ.ನ., ಬೇಂದ್ರೆ, ಕೆ.ಎಸ್.ನ ಜಿ.ಎಸ್.ಎಸ್. ಮೊದಲಾದವರನ್ನು ಹೆಸರಿಸಬಹುದು.

ಪ್ರಸ್ತುತ ಪ್ರಬಂಧವು ಸೂರ್ಯೋದಯಕ್ಕೆ ಸಂಬಂಧಿಸಿದರಿಂದ ಆಧುನಿಕ ಕವಿಗಳ ಕವನಗಳಲ್ಲಿ ಸೂರ್ಯೋದಯ ಸಂಬಂಧವಾದ ಕೆಲವು ಕವನಗಳನ್ನು ನೋಡೋಣ. ಕುವೆಂಪು ಪು.ತಿ.ನ., ಬೇಂದ್ರೆಯವರ ಕವನಗಳಲ್ಲಿ ಸೂರ್ಯೋದಯ ಕವನಗಳು ವಿಪುಲವಾಗಿ ಇರುವುದನ್ನು ಮುಂದೆ ನೋಡಬಹುದು. ಈ ಮೂವರಲ್ಲದೆ ಇತರ ಆಧುನಿಕ ಕವಿಗಳು ಕೂಡ ಸೂರ್ಯೋದಯದ ಕವನಗಳನ್ನು ರಚಿಸಿದ್ದಾರೆ. ಪ್ರಸ್ತುತ ಜಿ.ಎಸ್.ಶಿವರುದ್ರಪ್ಪ, ಶಾ. ಬಾಲುರಾವ್, ಶ್ರೀಕೃಷ್ಣಆಲನಹಳ್ಳಿ, ಕೆ.ಎಸ್.ನಿಸಾರ್‌ಅಹಮದ್, ಚೆನ್ನವೀರ ಕಣವಿ, ಸಿ.ಪಿ.ಕೃಷ್ಣಕುಮಾರ್, ಪಿ.ಕೆ.ರಾಜಶೇಖರ ಅವರುಗಳ ಕವನ ಸಂಕಲನಗಳಿಂದ ಒಂದೊಂದು ಕವನಗಳನ್ನು ಈ ಮುಂದೆ ನೀಡಲಾಗಿದೆ.

ಮಬ್ಬಿನಿಂದ .ಮಬ್ಬಿಗೆ ('ದೀಪದ ಹೆಜ್ಜೆ')

ಶ್ರೀ ಜಿ. ಎಸ್. ಶಿವರುದ್ರಪ್ಪನವರ 'ದೀಪದ ಹೆಜ್ಜೆ' ಕವನ ಸಂಕಲನದ ಒಂದು ಕವನ. ಮಬ್ಬಿನಿಂದ ಮಬ್ಬಿಗೆ ಕವನವು, 'ಮಾನವ ಮತ್ತು ಕಾಲ'ದ ಗುಂಪಿಗೆ ಸೇರಿರುವ ಕವನ. ಮುಂಜಾವಿನ ಆರು ಘಂಟೆಯಿಂದ ಸಂಜೆಯ ಏಳು ಘಂಟೆಯ ವರೆಗೆ ನಡೆದ ದಿನಮಾನ ಚೈತ್ರ, ಆಷಾಢ ಶ್ರಾವಣ, ಮಾಘ ಮೊದಲಾದವುಗಳಿಂದ ಸೂಚಿತವಾಗುವ ಋತುಮಾನ.

ಕಾಲಕಾಲಕ್ಕನುಗುಣವಾಗಿ ಬದುಕು ಮಜಲುಮಜಲುಗಳನ್ನು ಏರಿ ಮಜಲು ಮಜಲುಗಳನ್ನು ಇಳಿದು ಬರುತ್ತದೆ. ಕಾಲಗತಿಯ ತಾಳಕ್ಕನುಗುಣವಾಗಿ ಈ ಬದುಕಿನ ಗತಿ ಬದಲಾಗುತ್ತದೆ. ಒಮ್ಮೊಮ್ಮೆ ಈ ಬದುಕು ತನ್ನತನದ ಅರಿವಿನಿಂದ ಕಾಲವನ್ನು ಹಿಂದಕ್ಕೆ ತಿರುಗಿಸಲು ಒದ್ದಾಡುತ್ತದೆ:

ಆರು ಘಂಟೆಯ ಮೊಳಗು
ಮೂಡಣದ ಹೆರಿಗೆಮನೆಯಲ್ಲಿ ಸಡಗರವೊ ಸಡಗರ
ಕತ್ತಲಿನ ಬಸಿರು ಬೆಸಲಾದ ಬಂಗಾರ ಮೋರೆಯ ಕುವರ
ಬಂದ,
ಉಲ್ಲಾಸಗಳ ತಂದ.

ಸೂರ್ಯೋದಯ, ಕವನದ ನಾಯಕನ ಜನನ ಆಗಿರುವುದನ್ನು ಸೂಚಿಸಲಾಗಿದೆ. ಮಗು ಹುಟ್ಟಿದ ಮೇಲೆ

ಜೋಯಿಸರು ಪಂಚಾಂಗವನು ತಿರುವಿ,
ಸಕಲ ಗ್ರಹಬಲ ಸ್ಥಿತಿಯ ನೋಡಿ, ಕುಂಡಲಿ ಬರೆದು
ಮರಳಿದರು ಮನೆಗೆ.

ಜಾತಕರ್ಮ ಕ್ರಿಯೆಯಾಯಿತು.

ಅಂಬೆಗಾಲಿಟ್ಟು ಹೊಸಿಲು ದಾಟಿತು ಬಿಸಿಲು
ಬಾಗಿಲು ಹಾಲ್‌ಕರೆವ ಹಸುಕೊರಳ ಘಂಟೆದನಿ
ತುಂಬು ಕೆಚ್ಚಲಿನಲ್ಲಿ ಮೊಗವಿಟ್ಟ ಮುದ್ದುಕರು,
'ಕಾ' ಎನ್ನುವ ಕಾಗೆ ಚಿಲಿಪಿಲಿ ಗುಬ್ಬಿ, ಬಾಲವಾಡಿದ ನಾಯಿ,
ಸೋಜಿಗದ ಹೊನಲು.

"ಅಂಬೆಗಾಲಿಟ್ಟು ಹೊಸಿಲು ದಾಟಿತು ಬಿಸಿಲು" ಎಂಬುದು ಸೂರ್ಯನ ಬಿಸಿಲು ಕ್ರಮವಾಗಿ ಏರುತ್ತಿರುವುದೂ ಮಗು ಅಂಬೆಗಾಲಿಟ್ಟು ಹೊಸಿಲು ದಾಟುವವರೆಗೆ ಬೆಳೆದಿರುವುದೂ ಸೂಚಿತವಾಗಿದೆ. "ಬಾಗಿಲಲಿ ಹಾಲ್ ಕರೆವ ಹಸುಕೊರಳ ಘಂಟೆದನಿ, ತುಂಬ ಕೆಚ್ಚಲಿನಲ್ಲಿ ಮೊಗವಿಟ್ಟ ಮುದ್ದುಕರು", 'ಕಾ' ಎನ್ನುವ ಕಾಗೆ, ಚಿಲಿಪಿಲಿ ಗುಬ್ಬಿ, ಬಾಲವಾಡಿಪ ನಾಯಿ' ಬಾಹ್ಯ ಪ್ರಪಂಚದ ಎಲ್ಲ ವ್ಯಾಪಾರಗಳೂ ಮಗುವಿಗೆ 'ಸೋಜಿಗದ ಹೊನಲು'. ಪ್ರಾತಃಕಾಲದ ಸಹಜ ವ್ಯಾಪಾರಗಳೂ ಈ ಮೂಲಕ ಚಿತ್ರಿತವಾಗಿವೆ.

ಏಳು ಗಂಟೆಯ ಮೊಳಗು
ಏಳರಿಂದ ಎಂಟರ ತನಕ ಸದಾ
ಮಲ್ಲಿಗೆಯ ಮಳೆಗರೆವ ಕಣ್ಣು ಎರಡೇ ಎರಡು
ಮೇಲ್ ಮುಗಿಲಲ್ಲಿ
ಕೆಳಗೆ ಹಸುರು ಸೆರಗಿನ ಮೆತ್ತೆ,
ಈ ನಡುವೆ ಬಾಯಿ ಬಿಟ್ಟು ಸೀಪಿದಾಗೆಲ್ಲ ಹಾಲನು ಸುರಿವ
ಚಂದ್ರಕುಂಭಗಳೆರಡು
ಎಂದು ಯಾವಾಗಲೂ ನಿಂತು ಕೈಕೊಡದ ನಲ್ಲಿ
ತುಟಿಯ ಬಟ್ಟಲಿನಲ್ಲಿ !

ಮಗು ತಾಯ ಮೊಲೆ ಹಾಲನ್ನ ಕುಡಿಯುತ್ತಿರುವ ಚಿತ್ರ "ಮೇಲ್‌ಮುಗಿಲಲ್ಲಿ" 'ಕೆಳಗೆ ಹಸುರು ಸೆರಗಿನ ಮೆತ್ತೆ' ಇವುಗಳ ಮೂಲಕ ಮೇಲಿನ ಮುಗಿಲು ಮತ್ತು ನೆಲದ ಹಸಿರ ಸಿರಿ ಇವನ್ನು ಸೂಚಿಸುವುದರ ಜೊತೆಗೆ ಸೂರ್ಯನ ಪರವಾದ ಇನ್ನೊಂದು ಅರ್ಥವನ್ನು ಧ್ವನಿಸಲು ಪ್ರಯತ್ನಪಟ್ಟಂತಿದೆ. 'ಚಂದ್ರ ಕುಂಭಗಳೆರಡು' ತಾಯಿದೆಯನ್ನು ಅದರ ತಣ್ಪನ್ನೂ ಧ್ವನಿಸುತ್ತದೆ. ತಾಯಿಯ ಕೋಮಲ, ವೈಶಾಲ್ಯ ಆಕೆಯ ಹಸುರು ಸೀರೆಯ ಸೆರಗು ಎಂದೂ ಕೈ ಕೊಡದ ತಾಯಿದೆಯ ನಿರಂತರ ಧಾರೆಯಾಗಿ ಹರಿವ ಒಲವು - ಭಾವನೆಗಳನ್ನು ಧ್ವನಿಸುತ್ತವೆ.

ಎಂಟು ಘಂಟೆಗೆ ಅದಿಗೊ ಉಗುರು ಬೆಚ್ಚಗೆ ಬಿಸಿಲು
ಸುತ್ತ ಮರಗಿಡಗಳು ಲಾಲಿ ಹಾಡುವ ಹಕ್ಕಿ
ಮರದ ಬೊಂಬೆಗೋ ಜೀವ ಬಂದಿದೆ, ಕಲ್ಲು ಹರಳುಗಳಲ್ಲಿ
ಚಿನ್ನ - ರನ್ನ !

ಅ, ಅಗೊ ಕರೆಯುತಿದೆ ಪಾಠಶಾಲೆಯ ಘಂಟೆ

ಸ್ಲೇಟು ಪುಸ್ತಕವನ್ನು ಹೆಗಲಿಗೇರಿಸು, ಹೊರಡು

'ಎಂಟು ಗಂಟೆಗೆ ಅದಿಗೊ ಉಗುರು ಬೆಚ್ಚಗೆ ಬಿಸಿಲು-ಬಿಸಿಲು ಇನ್ನೂ ಮೇಲೇರಿರುವುದರ ಜೊತೆಗೆ ಮಗುವೂ ಬೆಳೆದಿರುವುದನ್ನು ಸೂಚಿಸುತ್ತದೆ. 'ಮರದ ಬೊಂಬೆಗೂ ಜೀವ ಬಂದಿದೆ' ಕಲ್ಲು ಹರಳುಗಳೆಲ್ಲ ಚಿನ್ನ-ರನ್ನ ಅಚೇತನವಾದ ಮರದ ಬೊಂಬೆಯೂ ಅದಕ್ಕೆ ಸಚೇತನ ವಸ್ತುವಿನಷ್ಟು ಸತ್ಯ.

ಹೀಗೆ 'ಮಬ್ಬಿನಿಂದ ಮಬ್ಬಿಗೆ' ಬದುಕಿನ ಯಾತ್ರೆಯನ್ನ ಸೂರ್ಯನ ಉದಯದ ಪ್ರತಿಮೆಯಿಂದ ತಂದಿರುವುದು ವೈಶಿಷ್ಟ್ಯಪೂರ್ಣವಾದ ಕಾವ್ಯ ಪ್ರಯೋಗವಾಗಿದೆ.

ಸೂರ್ಯ ಇವನೊಬ್ಬನೆ

"ಇದು ಕೇವಲ ಒಂದು ಕವನವಾಗದೆ ಸೂರ್ಯನನ್ನೆ ಕುರಿತು ನಲವತ್ತೆಂಟು ಕಲ್ಪನೆಗಳನ್ನು -ತಂದಿರುವ ಚಿಕ್ಕ ಪುಸ್ತಕ. ಇದರಲ್ಲಿ ನಲವತ್ತೆಂಟು 'ಕಲ್ಪನೆಗಳು' ಇವೆ. ಇವುಗಳಲ್ಲಿ ಕೆಲವು ಸ್ಪಷ್ಟವಾಗಿ ಕವಿತೆಗಳು ಮತ್ತೆ ಕೆಲವು ಚಿತ್ರಗಳು, ಪ್ರತಿಮೆಗಳು; ಒಂದೆರಡು ಗಾದೆ, ಒಗಟುಗಳಂತೆ ಚೇಷ್ಟೆಗಳು, ಕೊನೆಯಲ್ಲಿ ಒಂದು ಪುಟ್ಟ ರೂಪಕವೂ ಇದೆ[೧೦].

ಕೆಲವು ಪದ್ಯಗಳನ್ನು ಮಾತ್ರ ಇಲ್ಲಿ ಉದಾಹರಿಸಬಹುದು.

ಜಗದ ಸೂರೇರಿ ಕುಳಿತ
ಎಂತಲೇ ಇವ ಸೂರ್ಯ.
ಇದೂ ನಿಷ್ಪತ್ತಿ

ಬಾಲುರಾವರ ಕಾಯಕಲ್ಪನೆಯ ಪ್ರಕಾರ ಜಗದ ಸೂರನ್ನ ಏರಿ ಕುಳಿತಿರುವುದರಿಂದ ಸೂರ್ಯನಿಗೆ ಸೂರ್ಯ ಎಂದು ಹೆಸರಾಯಿತು. ಈ ಕಲ್ಪನೆಯ ನಿಷ್ಪತ್ತಿ ನಿಜಕ್ಕೂ ತಮಾಷೆಯದು, ಅರ್ಥಪೂರ್ಣವಾದ್ದೂ ಆಗಿದೆ.

ಸೂರ್ಯನನ್ನು 'ಜಾಡಮಾಲಿ' ಯನ್ನಾಗಿ ವರ್ಣಿಸಿರುವ ಮತ್ತೊಂದು ಪದ್ಯ ಹೀಗಿದೆ:

ಮುಂಜಾನೆ
ನಾವು ನೀವೇಳುವ ಮೊದಲೇ ಎದ್ದು
ಕೋಟಿಕಡ್ಡಿಗಳ ಕಸಬರಿಕೆ ಹಿಡಿದು
ಆಕಾಶದುದ್ದಕ್ಕೂ ಹಾದಿ ಬೀದಿಗಳಲ್ಲಿ
ಮಂಜು ಧೂಳನ್ನು ಗುಡಿಸಿ
ಬೆಳಕು ನೀರನ್ನು ಸಿಂಪಡಿಸಿ

---

೧೦. ಹಾ.ಮಾ.ನಾಯಕ, 'ಸಂಪದ' ಅಪರ್ಣಾ ಪ್ರಕಾಶನ, ಮೈಸೂರು , ೧೯೮೧, ಪು. ೧೧೧

ಇದೊ, ಜರ್ಬಾಗಿ ಎಲೆ ಅಡಿಕೆ ಜಗಿಯುತ್ತ
ನಿಂತಿದ್ದಾನೆ ನೋಡಿ
ಜಾಡಮಾಲಿ.

ಸೂರ್ಯನು ಜಾಡಮಾಲಿಯಂತೆ ತನ್ನ ಕಿರಣಗಳೆಂಬ ಕಸಬರಿಕೆಯಿಂದ ಲೋಕವನ್ನು ಶುದ್ಧಿ ಮಾಡುವ ಜಗದ ತೋಟಿಗನಾಗಿದ್ದಾನೆ.

ದಿನವೂ ಮುಂಜಾನೆ ಹುಟ್ಟಿ
ಸಂಜೆ ಸಾಯುವುದು
ಇವನ ವಿಚಿತ್ರ ಅಮರತ್ವ

ಸೂರ್ಯನೊಬ್ಬನಿಗೆ ಮಾತ್ರ ಈ ಶಕ್ತಿ ಇರುವುದು. ಬೆಳಗೆ ಹುಟ್ಟಿ ಸಂಜೆ ಸತ್ತು ಮತ್ತೆ ಹುಟ್ಟುವ ಅಮರತ್ವವನ್ನ ಹೊಂದಿದ್ದಾನೆ ಎಂದು ಹೇಳುವ ಕವಿಯ ಜಾಣ್ಮೆ ಮೆಚ್ಚುವಂಥದ್ದು.

ಮಾಗಿಯ ಮುಸ್ಸಂಜೆ
ಪಶ್ಚಿಮ ಘಟ್ಟದಲ್ಲಿ
ಇವನ ಹೆಣ
ಸುಟ್ಟು ಬೂದಿಯಾಗುತ್ತಿದೆ
ಆ ಇಳಿ ಬೆಂಕಿಯಲ್ಲೇ
ಮೈ ಕಾಯಿಸಿಕೊಳ್ಳುತ್ತ ಕುಳಿತಿದ್ದಾರೆ
ಮನೆ ಮನೆಯ ಜಗಲಿಯ ಮೇಲೆ
ಮುದುಕ ಮುದುಕಿಯರು.

ಈ ಚಿತ್ರದ ಒಂದೊಂದು ಹೋಲಿಕೆಯಲ್ಲಿ ವಿಲಕ್ಷಣತೆಯ ಸೊಗಸಿದೆ. ಜಗತ್ತಿನ ಸೂರ್ಯ ಸಾಹಿತ್ಯವನ್ನು ಸಾರುವ ಪುಸ್ತಕಗಳಲ್ಲಿ 'ಸೂರ್ಯ ಇವನೊಬ್ಬನೆ' ಎಂಬ ಪುಸ್ತಕವು ಸೇರುವಂತದ್ದು.

ಬೆಳಗು (ಶ್ರೀ ಕೃಷ್ಣ ಆಲನಹಳ್ಳಿ, 'ಆಲನಹಳ್ಳಿ ಕವಿತೆಗಳು'- ೧೯೮೫, ಪು.೩)

ನವ್ಯ ಸಾಹಿತ್ಯದಲ್ಲೂ ಸೂರ್ಯ ಕವನಗಳು, ಚಿತ್ರಗಳು, ಪ್ರತಿಮೆಗಳು ಕಾಣುತ್ತವೆ. ಪ್ರಾತಿನಿಧಿಕವಾಗಿ ನವ್ಯ ಕವಿ ಆಲನಹಳ್ಳಿ ಕೃಷ್ಣರ ಒಂದು ಕವನ ನೋಡಬಹುದು. ಅವರ ಒಂದು ಪದ್ಯದ ಆರಂಭ ಹೀಗಿವೆ.

ಇರುಳ ಚೆತ್ತಲೆ ತಕ್ಕೆ ಬಿಡಿಸಿಕೊಂಡೆದ್ದ
ಸೂರ್ಯ ಜೆಬರೆಗಣ್ಣೊರಸುತ್ತಾಕಳಿಸಿ
ಕೊಬ್ಬಿದಾಡು, ಕುರಿ, ಕೋಳಿ ಸಿಗಿದು ಸೀಳಿ
ಕಂದು, ನೀಲಿ, ಬಿಳಿ, ಕೆಂಪು ಖಂಡಗಳು ತೂಗಿಟ್ಟು

ಬಣ್ಣ ಬಣ್ಣದ ಮೂಡಣದ ಮಾಂಸದಂಗಡಿ ತೆರೆದಾಗ
ನಮ್ಮೂರಿನಲ್ಲಿ ಬೆಳಗಾಯಿತು.

ಕವಿಗೆ 'ಮೂಡಣವೇ ಮಾಂಸದಂಗಡಿ'. ಆ ಅಂಗಡಿಯ ಮಾಲಿಕ ಸೂರ್ಯ. ಆತ ಬೆಳಬೆಳಗೆ ಇರುಳ ತೆಕ್ಕೆಯಿಂದ ಬಿಡಿಸಿಕೊಂಡು ಏಳುವನಂತೆ. ಅಲ್ಲಲ್ಲಿ ಬಣ್ಣಗಟ್ಟಿರುವ ಮೋಡಗಳೇ ಕವಿಗೆ ಕೊಬ್ಬಿದಾಡು, ಕುರಿ, ಕೋಳಿ, ಹಂದು ಸೀಳಿ ಕಂದು, ನೀಲಿ, ಬಿಳಿ, ಕೆಂಪು ಖಂಡಗಳ ಪ್ರಾಣಿಗಳ ದೇಹದಂತೆ ಕಂಡು ಬಂದಿದೆ. ಒಟ್ಟಿನಲ್ಲಿ ಸೂರ್ಯ ಮಾಂಸ ಮಾರುವ ಕಟುಕನಾಗಿ ಕವಿಗೆ ಹೊಸ ರೀತಿಯಲ್ಲಿ ಕಂಡಿದ್ದಾನೆಃ

ಮೈನೆರೆದೇಳುವರುಷವಾದರಿನ್ನೂ ಒಬ್ಬಂಟಿ
ಕತ್ತಲಸೆರೆಯೊಳಗೆ ಕೀಲು ನೋವಿಗತ್ತು ನರಳುವ
ನಮ್ಮೂರ ವೈದಿಕರ ಮಗಳ
ಬಿಡುಗಡೆಗೆಂದು ಕಾದಿದ್ದ ಗಾಳಿ
ಹಿತ್ತಲಕದತಟ್ಟಿ ಪಿಸುಪಿಸುಗುಟ್ಟಿ ಕದ್ದು ನಡೆದಾಗ
ನಮ್ಮೂರಿನಲ್ಲಿ ಬೆಳಗಾಯಿತು.

ಧಗಧಗನುರಿವ ಹದಿನೆಂಟರ ಕೆನ್ನಾಲಿಗೆ ಚಾಚಿ
ಸೀಳುನಾಯಾಗಿ ನಿಂತ ಗೌಡರ ಹುಡುಗ
ಮುಗಿಲಾಚೆ ಬಾನೆತ್ತರಕೆ
ಬಯಕೆ ಯದೆ ತಿದಿಯೊತ್ತಿ
ಹತ್ತಿ ಹೊರಟಾಗ ಬೆಂಕಿ - ಹೂವಿನ ಹಡಗ
ನಮ್ಮೂರಿನಲ್ಲಿ ಬೆಳಗಾಯಿತು.

ಕಿಲುಬಿಡಿದ ಹಳೆಯ ಕವಿಸಮಯಗಳ
ಥಳಥಳಿಸಿ ಹೊಳೆಯಲೆಂದುಜ್ಜಿ ಬೆಳಗಲು
ಹೊಳೆಯ ಕಡೆ ಹೊರಟಾಗ -
ಹಡೆದೆ ಹೂಮರಿಗಳ ಬಿಟ್ಟೋಡಲಾಗದಯೆ
ಲಂಟಾನ ಪೊದೆಯೊಳಗೆ ಪತರುಗುಟ್ಟುವ
ಬೆಳ್ಳಿ ಮೊಲವ
ನನ್ನ ಮನೆ ಧಾಂಡಿಗ ನಾಯಿ ಗಬಕ್ಕನೆ
ಕಚ್ಚಿ ಕಿತ್ತೆಳೆದೊಡನೆ ರಕ್ತ ಚೆಲ್ಲಿಂದಾಗ
ನಮ್ಮೂರಿನಲ್ಲಿ ಬೆಳಗಾಯಿತು.

ಹೀಗೆ ಪದ್ಯ ಸಾಗುತ್ತಾ ಹೋಗುತ್ತದೆ. ಸೂರ್ಯೋದಯವು ಪ್ರಕೃತಿಯ ಮೇಲೆ ಉಂಟು ಮಾಡುವ ಪರಿಣಾಮವನ್ನೆ ನಮ್ಮ ಕವಿಗಳು ಹೆಚ್ಚು ವರ್ಣಿಸಿರುವುದು. ಆದರೆ ಈ ಕವನದಲ್ಲಿ ಸೂರ್ಯೋದಯದೊಂದಿಗೆ ಗ್ರಾಮೀಣ ಜೀವನ ತೆರೆದುಕೊಂಡಿದೆ.

ಪ್ರಾತಃಕಾಲ (ನಿತ್ಯೋತ್ಸವ - ೧೯೭೬)

ಕೆ. ಎಸ್. ಎನ್. ವಿರಚಿತ ಪ್ರಾತಃಕಾಲ ಕವನವು ಸೂರ್ಯೋದಯದ ಪ್ರಾತಃ ಕಾಲದ ಸುಖಸ್ಪರ್ಷದಿಂದ ಪ್ರಕೃತಿಯಲ್ಲಿ ಆಗುವ ಚಟುವಟಿಕೆಯನ್ನು ಬಿಂಬಿಸುತ್ತದೆ ಈ ಕವನಃ

ಆಹ! ಪ್ರಾತಃ ಕಾಲದ ಸ್ಪರ್ಶಕೆ
ನೆಲವೆದೆ ಜುಮ್ಮನೆ ಪುಲಕಿಸಿದೆ
ಮಿಲನ ಮುಹೂರ್ತದ ಹರ್ಷೋತ್ಕರ್ಷಕೆ
ಗಾಳಿಯೊ ಉಸಿರಂತೇದುತಿದೆ

ಸೂರ್ಯನ ಮೊದಲ ಸ್ಪರ್ಶಕ್ಕೆ ನೆಲದ ಎದೆ ಜುಮ್ ಎಂದು ಪುಲಕಿಸಿದೆ. ಈ ಸಂಲಗ್ನದ ಮುಹೂರ್ತದಲ್ಲಿ ಗಾಳಿ ಹರ್ಷೋತ್ಕರ್ಷಗೊಂಡು ಮಂದಾನೀಲವಾಗಿ ತೇಲುತಿದೆ.

ಮೋಹಕ ವರ್ಣದ ಚೆಲುವಿನ ತೊಟ್ಟಿಲು
ಲೋಕದ ಹಸುಳೆಯು ತೂಗುತಿದೆ ;
ಸುರಸಮ್ಮೋಹಕ ಮೂಡಲ ಬಟ್ಟಲು
ಮುಂಬೆಳಕಿನ ರಸವುಕ್ಕುತಿದೆ
ಆಹ ! ಪ್ರಾತಃಕಾಲದ ಸ್ಪರ್ಶಕೆ

ಹಕ್ಕಿಯ ಕೊರಳಿನ ಬೆಸುಗೆಯು ಬಿಚ್ಚಲು
ಚಿಟ್ಟನೆ ಚಿಲಿಪಿಲಿ ಜಾರುತಿವೆ
ಲೋಕವೆ ಮರಳಿನ ಕನಸಿನ ಕೆಚ್ಚಲು -
ಕಿವಿ, ಮನ ದಣಿಯದೆ ಹೀರುತಿವೆ
ಆಹ ! ಪ್ರಾತಃ ಕಾಲದ ಸ್ಪರ್ಶಕೆ

ಸ್ವರ್ಗವೆ ಇಲ್ಲಿದೆ, ನಿಸರ್ಗದಲ್ಲಿ
ನೆಮ್ಮದಿ ಮನಸಿನ ಉಲ್ಲಾಸ ;
ಅನಂತವಡಗಿದೆ ಈ ಕ್ಷಣದಲ್ಲಿ
ಭುವಿಗವತರಿಸಿದೆ ಕೈಲಾಸ
ಆಹ ! ಪ್ರಾತಃಕಾಲದ ಸ್ಪರ್ಶಕೆ

ಅರುಣೋದಯದಿಂದ ಎಲ್ಲವೂ ಬಣ್ಣಗಟ್ಟಿ ಲೋಕವೆ ತೊಟ್ಟಿಲಂತಾಗಿ ಆ ತೊಟ್ಟಿಲು ಎಲ್ಲರೂ ಹಸುಳೆಗಳಾಗಿ ಜೀವಿಸುತ್ತಿದ್ದಾರೆ. ಹಕ್ಕಿಯ ಕೊರಳಿಂದಲೂ ಪ್ರಾತಃಸ್ಪರ್ಶದ ಸುಖ ಉಕ್ಕುತಿದೆ. ಇಂತಹ ಸೊಬಗಿನ ಬೀಡನ್ನು ನೋಡಲು ಕೇಳಲು ಮನಸ್ಸಿಗೆ ದಣಿವೇ ಆಗದೆ ಚೇತೋಹಾರಿಯಂತಾಗಿದೆ. ಒಟ್ಟಿನಲ್ಲಿ ಭೂಮಿಗೆ ಸ್ವರ್ಗ ಇಳಿದು

ಬಂದಿದೆ ಯೋ! ಎಂಬಂತಾಗಿ ನಿಸರ್ಗಸ್ವರ್ಗವಾಗಿ ಕೈಲಾಸಮಯವಾಗಿದೆ. ಪ್ರಾತಃಕಾಲದ ಸ್ಪರ್ಶದಿಂದ ಎಂದು ನಿಸಾರ್ ಅಹಮದ್ ಈ ಕವನದಲ್ಲಿ ಹೇಳಿದ್ದಾರೆ.

ಉಷಾ (ಕಾವ್ಯಾಕ್ಷಿ ೧೯೪೯)

ಚೆನ್ನವೀರಕಣವಿಯವರು ಕೂಡ ಅನೇಕ ಸೂರ್ಯೋದಯ ಸಂಬಂಧಿ ಗೀತೆಗಳನ್ನು ಕೃಷಿಗೈದಿದ್ದಾರೆ. ಅವುಗಳಲ್ಲಿ ಕಾವ್ಯಾಕ್ಷಿ ಸಂಕಲನದಿಂದ 'ಉಷಾ' ಎಂಬ ಕವನವನ್ನ ಇಲ್ಲಿ ಉದ್ಧರಿಸಲಾಗಿದೆಃ

ಜಗದ ನಿದ್ರಾಲೋಲ ಮೊಗದ ಮೇಲುದವೆತ್ತಿ
ಇರುಳ ಸವಿಗನಸಿನಾಮೋದದಲಿ ಮೈಮರೆದು
ಮೆಲ್ಲಮೆಲ್ಲನೆ ಲಲ್ಲೆಗೈದು ಕಣ್ಣೆವೆದೆರೆದು
ಹೂ ತುಟಿಗೆ ಮುತ್ತಿಟ್ಟು, ಹಕ್ಕಿಗಳನೆದೆಗೊತ್ತಿ
ಮೈದಡವಿ, ಮಂಗಳದ ಗೀತೆಗಳನುಕ್ಕಿಸುತ
ತಂಬೆಲರಿನುಸಿರ ನರುದಂಬುಲವ ಸ್ವೀಕರಿಸಿ
ತುಂಬಿಗಳ ಜುಮ್ಮೆನಿಪ ಗುಂಗಿನಲಿ ಸಂಗಳಿಸಿ,
ಚಿಗುರು ಚೆಂಗುಡಿಗಳಿಗೆ ಪನ್ನೀರ ಚಿಮುಕಿಸುತ
ಮೂಡಣದ ಹೊಸತಿಲಿಗೆ ಹೊಬಣ್ಣ ನೀರಿನಲಿ
ಸಾರಣೆಯ ಕಾರಣೆಯುಗೈದು ಕುಂಕುಮದಿಂದ
ಬೊಟ್ಟಿಟ್ಟು ತಳತ್ಥಳಿಸಿ, ಸಂತಸ ಶುಭೋದಯದ
ಝಣಿಝಣಿರು ಚಕಮಕಿತ ಭೂನಭೋರಂಗದಲಿ
ಉನ್ಮತ್ತರಾಗಿಣಿಯು, ಜಗದುದಯ ಕಾರಿಣಿಯು
ಚೆಲುವೆ, ಶುಭದರ್ಶಿನಿಯು ಹೋ! ನರ್ತಿಸಿದಳುಷೆಯು

ಇದೊಂದು ಸಾನೆಟ್. ಸೂರ್ಯೋದಯದ ಸಂದರ್ಭದಲ್ಲಿ ಪ್ರಕೃತಿಯಲ್ಲಿ ಆಗುವ ಪ್ರಕ್ರಿಯೆಗಳನ್ನು ಚಿತ್ರಿಸುತ್ತದೆ. ಚೆಂಗುಡಿಗಳಿಗೆ ಪನ್ನೀರನ್ನು ಚಿಮುಕಿಸಿ ಮೂಡಣದ ಹೊಸತಿಲಿಗೆ ಹೊಂಬಣ್ಣ ನೀರಿನಲ್ಲಿ ಸಾರಣೆಕಾರಣೆ ಮಾಡಿದಂತೆ ಇದ್ದು ಕುಂಕುಮ ಬೊಟ್ಟಿನಂತೆ ಮೇಲೆದ್ದು, ಭೂಮಿ ಮತ್ತು ಆಕಾಶದಲ್ಲೆಲ್ಲಾ ಜಗಮಗಿಸುವಂತೆ ಮಾಡುವಳು ಉಷೆ ಎಂದು ಈ ಸಾನೆಟ್‌ನಲ್ಲಿ ಸೊಗಸಾಗಿ ಹೇಳಿದ್ದಾರೆ. ಈ ಸಾನೆಟ್ ಛಂದೋಬದ್ಧವಾಗಿದ್ದು ಗೇಯತೆಯುಳ್ಳ ಹದಗಿದ್ದು ಓದುಗರನ್ನ ಆಕರ್ಷಿಸುವ ಅದ್ಭುತಕವನವಾಗಿದೆ.

ಸೂರ್ಯೋದಯ (ತಾರಾಸಖಿ-೧೯೬೦)

ಸಿ.ಪಿ.ಕೃಷ್ಣಕುಮಾರ್ ಅವರ ತಾರಾಸಖಿ ಕವನಸಂಕಲನದಿಂದ ಸೂರ್ಯೋದಯ ಎಂಬ ಕವನವನ್ನ ಉದಾಹರಿಸಲಾಗಿದೆ.

ವರ್ಣಶಿಲ್ಪಿಯದಾರು ಕುಂಚವನು ಹಿಡಿದಿಹನೊ
ನೋಡು, ಮೂಡಣ ಬಾನು ಕಲಾಶಾಲೆ !

ನಭದ ನೀಲಿಗೆ ನೂರು
ವಜ್ರ ವೈಢೂರ್ಯ ರತ್ನಗಳ ಮಾಲೆ
(ರಚನೆಗೈದವನಾವ ಅಕ್ಕಸಾಲೆ ?)

ಕವಿಗೆ ಮೂಡಣ ದಿಕ್ಕೇ ಒಂದು ಕಲಾಶಾಲೆಯಂತೆ ಕಂಡು ಬಂದು, ಯಾರು ಆ ವರ್ಣಗಳಲ್ಲಿ ಎಂದು ತಮಗೆ ತಾವೇ ಪ್ರಶ್ನೆ ಮಾಡಿಕೊಳ್ಳುತ್ತಿದ್ದಾರೆ.

ಬಂತದೋ ರವಿರಾಜನೇಳು ಬಣ್ಣದ ತೇರು
ಹೊರಹೊರಟರೋ ಕಿರಣಯೋಧರು ಸಹಸ್ರಾರು
ಲೋಕಲೋಕಗಳ ದಿಗ್ವಿಜಯಕ್ಕೆಂದು !
ಮಣ್ಣು ಹೊನ್ನಾಗಿಹುದು
ಈ ಪ್ರಪಂಚವೇ ಬೆಳಕಿನೊಂದು ಸಿಂಧು !

ಸೂರ್ಯೋದಯದಿಂದ ರವಿರಾಜನು ತಮರಾಜನೊಡನೆ ಯುದ್ಧಕ್ಕೆ ಏಳು ಬಣ್ಣದ ತೇರನ್ನೇರಿ ಹೊರಟು ಅವನ ಕಿರಣಯೋಧರು ಲೋಕಲೋಕಗಳನ್ನೆಲ್ಲ ಗೆದ್ದು ದಿಗ್ವಿಜಯದ ಪತಾಕೆಯನ್ನು ಹಿಡಿದು ಬರುತ್ತಿರುವ ಕವಿಯ ಸೈನ್ಯ ಕಲ್ಪನೆ ಅದ್ಭುತವಾದದ್ದು. ರವಿರಾಜನ ಸಂಸ್ಪರ್ಶದಿಂದ ಮಣ್ಣು ಹೊನ್ನಾಗಿಹುದು ಪ್ರಪಂಚವೇ ಬೆಳಕಿನ ಸಿಂಧುವಾಗಿಹುದು.

ಉಲ್ಲಸದಿ ಕಂಪಿಸಿದೆ ತಂಗಾಳಿಕಡಲು
ಹೊರಟಿಹುವು ಮರಮರದ ದ್ವೀಪದಲಿ ತಂಗಿದ್ದು
ಮಿಶ್ರಮಿಸಿಕೊಂಡ ಹಕ್ಕಿಗಳ ಹಡಗು,
ಏನು ಬೆಡಗು !
ಪ್ರತ್ಯಕ್ಷವಾದನದೋ ಜಗದ ಕಣ್ ತೆರೆಯಿಸುವ
ಮಂತ್ರವಾದಿ;
(ಕತ್ತಲೆಯ ಮೊತ್ತ ತತ್ತರಿಸಿ ಬಿಟ್ಟಿತೋ ಹಾದಿ !)
ಪಕ್ಷಿಗಳ ಚಿಲಿಪಿಲಿಯ ಮಂತ್ರ ಪಠಿಸಿ
ಜಡತನಕೆ ಜೀವರಸವನು ಸಿಂಪಿಸಿ

ಸ್ವಾಗತಿಸುವರು ಸಸ್ಯಕೋಮಲಾಂಗಿಯರೆಲ್ಲ
ಹೂವಿನಾರತಿಯನೆತ್ತಿ
ಭಾನು ದಯಾಮಾಡಿದನು
ಕಮಲಗಳ ತುಟಿಗೊಲುಮೆ ಮುತ್ತನೊತ್ತಿ !

ಸೂರ್ಯನು ಜಗದ ಕಣ್ ತೆರೆಯಿಸುವ ಮಂತ್ರವಾದಿ. ಇವನ ಈ ಪವಾಡಕ್ಕೆ ಸಸ್ಯ ಕೋಮಲಾಂಗಿಯರು ಮಂತ್ರಮುಗ್ಧರಾಗಿ ತಾವೇ ಕೈಯಾರೆ ಹೂವಿನಾರತಿಯನೆತ್ತಿ ಸ್ವಾಗತಿಸುವ ಚಿತ್ರ ಸೊಗಸಾಗಿದೆ.

ನಿತ್ಯ ಜೀವನದ ನಾಟಕದ ರಂಗಸ್ಥಳಕೆ
ಇವನದೇ ಸೂತ್ರಧಾರನ ಪ್ರವೇಶ
ಪಾತ್ರಗಳ ಅಭಿನಯವ
ಅವಲೋಕಿಸುವನಿವನು ನಿರ್ನಿಮೇಷ !

ನಿಷೆಯ ಮಾಯೆಯಲ್ಲಿ ಪ್ರಜ್ಞಾಹೀನವಾಗಿರುವ
ಬುವಿಗೆ ಚೈತನ್ಯವನು ದಾನ ಕೊಡಲು
ಮೂಡಿತಗೋ ನೇಸರಿನ ಅಮೃತಬಿಂಬ
ಇನ್ನು ಪ್ರಾಣದ ಸೃಷ್ಟಿ ಮತ್ತೆ ಪ್ರಾರಂಭ

ಹೀಗೆ ಜೀವನದ ನಾಟಕಸೂತ್ರಧಾರನಾಗಿ, ಬುವಿಗೆ ಚೈತನ್ಯವನ್ನು ದಾನ ಮಾಡುವ ದಾಸಿಗನಾಗಿ ಈ ಕವನದಲ್ಲಿ ಸೂರ್ಯ ಕಾಣಿಸಿಕೊಂಡಿದ್ದಾನೆ.

ಸುರಸೌಂದರ್ಯ (ನಾನಲ್ಲದ ನಾನು - ೨೦೦೧)

ಪಿ.ಕೆ.ರಾಜಶೇಖರವರ ನಾನಲ್ಲದ ನಾನು ಎಂಬ ಕವನಸಂಕಲನದಲ್ಲಿ ಸೂರ್ಯೋದಯ ಸಂಬಂಧಿಯಾದ ಸುರಸೌಂದರ್ಯ ಕವನ ಇಂತಿದೆಃ

ಚಿನ್ನದ ಹೊಗೆಯೆದ್ದಾಗಸವೆಲ್ಲ
ನಿಗಿನಿಗಿ ನಿಗಿನಿಗಿ ಮಿರುಗಿತ್ತು
ಯಜ್ಞ ಕುಂಡದಿಂದಗ್ನಿಯೆದ್ದನೆನೆ
ಹೊಂಗದಿರನ ಮುಖ ಮೆರೆದಿತ್ತು

ಸೂರ್ಯೋದಯವಾದಾಗ ಆಕಾಶದಲ್ಲೆಲ್ಲ ಚಿನ್ನದ ಹೊಗೆಯು ಎದ್ದು ಸೂರ್ಯನು ನಿಗಿನಿಗಿಯಾಗಿ ಮಿನುಗುತ್ತ ಮಿರುಗುತ್ತ ಯಜ್ಞಕುಂಡದಿಂದ ಅಗ್ನಿಯೇ ಎದ್ದನೋ ಎನ್ನುವಹಾಗೆ ಹೊಂಗದಿರು (ಸೂರ್ಯ) ನ ಮುಖ ಮೆರೆದಿತ್ತು. ಈ ಮೂಡಣದ ಸಿರಿಯನು ಮುಡಿದುಕೊಳ್ಳಲು ಸರೋವರಗಳ ತವಕ ಹೀಗಿದೆಃ

ಮೂಡಣ ಸಿರಿಯನು ಮೂಡಿಸಿಕೊಳ್ಳಲು
ಸರಸ್ಸಿನೆದೆ ತವಕಿಸುತ್ತಿತ್ತು
ಬಂಗಾರದ ಅಲೆಅಲೆಗಳ ನೆವದಲಿ
ತಂಗಾಳಿಯ ಸೆರಗಾಡಿತ್ತು

ಗಿಡಮರಗಳು ಸಡಗರಗೊಂಡವೊ ಎನೆ
ಒಡಲೊಡಲೆಲ್ಲಾ ಹೂತಿತ್ತು
ಹಸಿರೇ ಉಸಿರನು ಬಿಟ್ಟಂತೊಮ್ಮೆಗೆ
ಗಿಳಿಬಳಗವು ಬಾನ್ಗೇರಿತ್ತು

ಗಿಡಮರಗಳು ಸಡಗರಗೊಂಡು ತಮ್ಮ ಹಸಿರಿನ ಒಡಲುಗಳಿಂದ ಉಸಿರು ಬಿಟ್ಟಾಗ ಕವಿಯ "ಗಿಳಿಬಳಗವು ಬಾನ್ಗೇರಿತ್ತು" ಎಂಬ ಕಲ್ಪನೆಯೂ ಕೂಡ ಕವಿಯ ಜಾಣ್ಮೆಯನ್ನು ಸೂಚಿಸುವಂತದ್ದು.

ಮನೆಯಂಗಳದಲಿ ಮಂಗಳೆ ಬಿಡಿಸಿದ
ರಂಗೋಲಿಯ ಬೆಡಗೆಸೆದಿತ್ತು
ಅಂಬರದೆದೆಯಲಿ ಹಂಬಲವರಳುತ
ತುಂಬಿದ ಬೆಳಕಾಗೆರಚಿತ್ತು

ಮೊದಲರಾತ್ರಿ ಪಡೆದನುಪಮ ಅನುಭವ
ಹೆಣ್ಣಿನ ಕಣ್ಣಲಿ ಮಿಂಚಿತ್ತು
ಸೂರ್ಯೋದಯ ಸುರಸೌಂದರ್ಯವೆಲ್ಲ
ಲಜ್ಜೆಯ ಸವಿ ನಗೆಯಲ್ಲಿತ್ತು

ಸೂರ್ಯೋದಯ ಸುರಸೌಂದರ್ಯ, ಮೊದಲರಾತ್ರಿ ಪಡೆದನುಪಮದ ಅನುಭವವು ಹೆಣ್ಣಿನ ಮುಖದಲ್ಲಿ ಕಾಣುವಂತೆ ಸೂರ್ಯನ ಸೌಂದರ್ಯ ಕಾಣುತ್ತಿತ್ತು. ಹೀಗೆ ಈ ಪ್ರಕೃತಿ ಕವನ ನವೋದಯದ ಭಾವಜಗತ್ತಿನ ಗತವೈಭವವನ್ನು ಮರುಗೊಳಿಸುವಂತೆ ಮಾಡಿದೆ. ಹೀಗೆ ಪ್ರಾಚೀನ ಕನ್ನಡ ಸಾಹಿತ್ಯದಿಂದ ಹಿಡಿದು ಆಧುನಿಕ ಕನ್ನಡಸಾಹಿತ್ಯದವರೆಗೂ ನಿರಂತರವಾಗಿ ಸೂರ್ಯನ ವರ್ಣನೆ ಬರುತ್ತದೆ. ಪ್ರಾಚೀನ ಕವಿ ಪಂಪನಿಂದ ಹಿಡಿದು ಆಧುನಿಕ ಕವಿಗಳ ಕಾವ್ಯದಕ್ಕೂ ಸೂರ್ಯ ಕಾವ್ಯ ಪ್ರೇರಕನಾಗಿ ಬಂದಿದ್ದಾನೆ.

ಅಧ್ಯಯನ ಸ್ವರೂಪ

ಪ್ರಸ್ತುತ ನಿಬಂಧದಲ್ಲಿ ಹೊಸಗನ್ನಡ ಕವಿತೆಯ ಮೂವರು ಮುಖ್ಯ ಕವಿಗಳಾದ ಕುವೆಂಪು, ಪು.ತಿ.ನ., ಬೇಂದ್ರೆಯವರುಗಳ ಸೂರ್ಯೋದಯ ಕವನಗಳನ್ನು ಸಮೀಕ್ಷಿಸಲು ಪ್ರಯತ್ನಿಸಿದೆ. ಈ ಮೂವರು ಹೊಸಗನ್ನಡ ಸಾಹಿತ್ಯದ ರತ್ನತ್ರಯರು. ಆಧುನಿಕ ಕನ್ನಡ ಸಾಹಿತ್ಯಕ್ಕೆ ಬಣ್ಣ, ಬೆಳಕು ತುಂಬಿದವರು. ನಮ್ಮ ಸಾಹಿತ್ಯದ ಎತ್ತರ ಬಿತ್ತರಗಳಿಗೆ ಕಾರಣರಾದ ಕವಿಶ್ರೇಷ್ಠರು. (ಈ ಮೂವರು ತಮ್ಮ ಕಾವ್ಯಗಳಲ್ಲಿ ಸೂರ್ಯೋಪಾಸನೆಯನ್ನು ಕೈಗೊಂಡವರು. ಸೂರ್ಯೋದಯ, ಸೂರ್ಯಾಸ್ತ ಇವರ ಪ್ರಕೃತಿ ಕವನಗಳಲ್ಲಿ ಪ್ರಧಾನವಾಗಿ ಕಾಣಿಸಿಕೊಳ್ಳುತ್ತದೆ. ಇವರ ಸಾಹಿತ್ಯಕ್ಕೆ ಅದು ಹಿನ್ನಲೆಯೂ, ಪ್ರೇರಕಶಕ್ತಿಯೂ ಆಗಿ ಕೆಲಸ ಮಾಡಿರುವುದು ಸ್ಪಷ್ಟ. ಹೀಗಾಗಿ ಸೂರ್ಯೋದಯ ಕವನಗಳ ಬಗ್ಗೆ ಈ ಮೂವರ ದೃಷ್ಟಿ ಧೋರಣೆಗಳನ್ನು ಕುರಿತು ಈ ನಿಬಂಧದಲ್ಲಿ ವಿವೇಚಿಸುವ ಪ್ರಯತ್ನ ಮಾಡಿದ್ದೇನೆ.

ಪ್ರಸ್ತುತ ನಿಬಂಧದ ಅಧ್ಯಯನ ಸ್ವರೂಪದಲ್ಲಿ ಐದು ಅಧ್ಯಾಯಗಳಿವೆ. ಅಧ್ಯಾಯ ಒಂದರಲ್ಲಿ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಸೂರ್ಯೋದಯ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸೂರ್ಯೋದಯ ಎಂಬ ಎರಡು ಭಾಗಗಳನ್ನಾಗಿ ಮಾಡಿಕೊಂಡು ಪ್ರಾಚೀನ ಕನ್ನಡ ಕಾವ್ಯದಲ್ಲಿ ಹಾಗೂ ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಂದರೆ ಪಂಪನಿಂದ ಹಿಡಿದು ಆಲನಹಳ್ಳಿ ಕೃಷ್ಣರ ವರೆವಿಗೆ ಸೂರ್ಯೋದಯ ಕವನವನ್ನ ವಿವೇಚಿಸಲಾಗಿದೆ. ಕುವೆಂಪು ಕವನಗಳಲ್ಲಿ ಸೂರ್ಯೋದಯ ಎಂಬ ಎರಡನೆಯ ಅಧ್ಯಾಯದಲ್ಲಿ ಕುವೆಂಪು ಕನನಗಳನ್ನ ಪ್ರಾಕೃತಿಕ ಚಟುವಟಿಕೆಯ ಸೂರ್ಯೋದಯ ಕವನಗಳು. ಋತುಮಾನ ಬದಲಾವಣೆಯ ಸೂರ್ಯೋದಯ ಕವನಗಳು, ನಿರ್ದಿಷ್ಟ ಸಂದರ್ಭದ ಸೂರ್ಯೋದಯದ ಕವನಗಳು ಎಂಬ ಮೂರು ಭಾಗಗಳಾಗಿ ಮಾಡಿಕೊಂಡು ಅವುಗಳ ಸ್ವರೂಪವನ್ನು ವಿವರಿಸಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಪು.ತಿ.ನ ಅವರ ಕಾವ್ಯಗಳಲ್ಲಿ ಕಂಡು ಬಂದ ಏಳೆಏಳು ಸೂರ್ಯೋದಯ ಕವನಗಳನ್ನು ವಿಶ್ಲೇಷಿಸಲಾಗಿದೆ. ಅಧ್ಯಾಯ ನಾಲ್ಕರಲ್ಲಿ ಬೇಂದ್ರೆ ಕವನಗಳಲ್ಲಿ ನಾನು ಗಮನಿಸಿದ ಕೆಲವು ಸೂರ್ಯೋದಯ ಕವನಗಳನ್ನ ನಿರೂಪಿಸಲಾಗಿದೆ. ಅಧ್ಯಾಯ ಐದರಲ್ಲಿ ಸೂರ್ಯೋದಯ ಕವನಗಳಲ್ಲಿ ಮೂವರ ದೃಷ್ಟಿಧೋರಣೆಗಳನ್ನ ತೌಲನಿಕ ದೃಷ್ಟಿ, ಒಟ್ಟು ನೋಟ ಎಂಬ ಶೀರ್ಷಿಕೆಯಡಿಯಲ್ಲಿ ಸಮರೋಪಿಸಲಾಗಿದೆ.

ಅಧ್ಯಾಯ - ಎರಡು

ಕುವೆಂಪು ಕವನಗಳಲ್ಲಿ ಸೂರ್ಯೋದಯ

* ಪ್ರಾಕೃತಿಕ ಚಟುವಟಿಕೆಯ ಸೂರ್ಯೋದಯ ಕವನಗಳು
* ಋತುಮಾನ ಬದಲಾವಣೆಯ ಸೂರ್ಯೋದಯ ಕವನಗಳು
* ನಿರ್ದಿಷ್ಟಸ್ಥಳ ಸಂದರ್ಭದ ಸೂರ್ಯೋದಯದ ಕವನಗಳು

ಅಧ್ಯಾಯ ಎರಡು

ಕುವೆಂಪು ಕವನಗಳಲ್ಲಿ ಸೂರ್ಯೋದಯ

ಇಂಗ್ಲಿಷಿನ ರೋಮ್ಯಾಂಟಿಕ್ ಕಾವ್ಯದ ಪ್ರೇರಣೆ ಪ್ರಭಾವಗಳಿಂದ ನಿಂತ ನೀರಿನಂತಾಗಿದ್ದ ಕನ್ನಡ ಕಾವ್ಯಕ್ಕೆ ಹೊಸ ನೀರು ಹರಿದು ಅದು ಹೊಸ ಚೈತನ್ಯ ಪ್ರವಾಹಗಳಿಗೆ ಕಾರಣವಾಯಿತು. ಈ ಹಳೆಯ ಮತ್ತು ಹೊಸ ನೀರುಗಳು ಒಂದಾಗಿ ಬೆರೆತು ವಿವಿಧ ಲಯಗತಿಗಳ ಛಂದೋವಿನ್ಯಾಸದಲ್ಲಿ ಹರಿದು ಹೊಸ ಕಾವ್ಯ ನಳನಳಿಸುವಂತೆ ಮಾಡಿದವು.

"ನಿಸರ್ಗವು ಬರೀ ತೆರೆ ಎನ್ನುವ ಭಾವನೆ ಹಿಂದೆ ಸರಿಯಿತು. ಮಾನವನ ಮನಸ್ಸು ಮತ್ತು ನಿಸರ್ಗ ಮೊದಲ ಬಾರಿಗೆ ಕನ್ನಡದಲ್ಲಿ ಮುಖಾಮುಖಿಯಾದವು. ಪ್ರಕೃತಿ ಎನ್ನುವುದು ಶುದ್ಧ ಐಂದ್ರಿಕ ಅನುಭವ ಹಾಗೂ ತಾತ್ವಿಕ ಶೋಧನೆ ಎರಡಕ್ಕೂ ಅದ್ಭುತವಾದ ಮಾಧ್ಯಮವಾಯಿತು".[೧೧]

"ನವೋದಯ ಕಾವ್ಯದ ನಿಸರ್ಗ ದೃಷ್ಟಿ ಅರಿಯಬೇಕಾದರೆ ಹತ್ತೊಂಬತ್ತನೆ ಶತಮಾನದ ಇಂಗ್ಲಿಷ್ ರೋಮ್ಯಾಂಟಿಕ್ ಕಾವ್ಯ ಹಾಗೂ ಕನ್ನಡದಲ್ಲಿ ನವೋದಯಕಾವ್ಯ ಇವುಗಳ ಸಾಮ್ಯವನ್ನು ಗುರುತಿಸಬೇಕಾಗುತ್ತದೆ.

ಇಂಗ್ಲೆಂಡಿನಲ್ಲಿ ನಡೆದ ತೀವ್ರ ಹಿಂಸೆ ಘರ್ಷಣೆಗಳಿಂದ ಉಗಮವಾದ ಬಂಡವಾಳಶಾಹಿ ವ್ಯವಸ್ಥೆ ವಿನಾಶಕಾರಿ ದಾಳಿ ನಡೆಸಿತು. ಬುದ್ಧಿಜೀವಿಗಳು ನಿರಾಶರಾದರು. ಅಂದಿನ ಕ್ರೂರ, ಕರಾಳ, ಪರಿಸರದ ವಿರುದ್ಧ ಕಾಣಿಸಿಕೊಂಡ ನೋವು, ನಿರಾಸೆ, ದಣಿವು, ಸಿಟ್ಟು, ಪಲಾಯನದ ಹಂಬಲ ಈ ಎಲ್ಲವುಗಳಿಂದ ರೋಮ್ಯಾಂಟಿಕ್ ಕಾವ್ಯದ ಚೌಕಟ್ಟು ರೂಪುಗೊಂಡಿತು"[೧೨]. ರೊಮ್ಯಾಂಟಿಕ್ ಕಾವ್ಯದ ಸುಂದರ ಪ್ರಕೃತಿಯ, ನಿಸರ್ಗದ ಆರಾಧನೆಯ ಹಿಂದೆ ಇರುವುದು ನೋವು, ನಿರಾಶೆ ತುಂಬಿದ ಮನಸ್ಸುಗಳೇ ಆಗಿವೆ. ಇಂಥ ಒಂದು ಯಾತನಾಮಯ ಸ್ಥಿತಿಯನ್ನು ಮರೆಯುವುದಕ್ಕಾಗಿ ಅವರು ಪ್ರಕೃತಿಯ ಕಡೆಗೆ ತಿರುಗಿದರು.

ಕನ್ನಡ ನವೋದಯದಲ್ಲಿ ಅತ್ಯಂತ ಮುಖ್ಯವಾದ ಅಂಶವೆಂದರೆ ಪ್ರಕೃತಿ ದೈವೀಕರಣ. ಪ್ರಕೃತಿಯ ಪ್ರತಿಯೊಂದು ವಿಲಾಸವೂ, ವಿದ್ಯಮಾನವೂ, ಮತ್ತಾವುದೋ ಶಕ್ತಿಯ, ದೈವೀಶಕ್ತಿಯ ಸಾಕ್ಷಾತ್ಕಾರದಂತೆ ಕಾಣುತ್ತದೆ. ಒಂದಲ್ಲ ಒಂದು ರೀತಿಯ ಪರಿವರ್ತನೆ ಪ್ರಕೃತಿ ದರ್ಶನದ ಅಂತಿಮ ಹಂತ. ಕುವೆಂಪು ಅವರ "ಆನಂದಮಯ ಈ ಜಗಹೃದಯ" ಈ ವಿಚಾರವನ್ನು ತತ್ವೀಕರಿಸಿ ಹೇಳುತ್ತದೆ."

ನವೋದಯದಲ್ಲಿ ವಸ್ತುನಿಷ್ಠ ಮಹಾಕಾವ್ಯ ಪದ್ಧತಿಯಿಂದ ವ್ಯಕ್ತಿ ನಿಷ್ಠವಾದ ಭಾವಗೀತೆಯ ಪದ್ಧತಿಗೆ ಕವಿಯ ಮನೋಧರ್ಮ ಬದಲಾಯಿತು.

ನವೋದಯ ಕಾವ್ಯವನ್ನು ಕಟ್ಟಿದವರಲ್ಲಿ ಕುವೆಂಪು, ಪು.ತಿ.ನ ಹಾಗೂ ಬೇಂದ್ರೆ ಈ ರತ್ನತ್ರಯರುಗಳೇ ಪ್ರಧಾನರು. ಇವರು ಚಿತ್ರಿಸಿರುವ ಪ್ರಕೃತಿವರ್ಣನೆ ಕನ್ನಡ ಸಾಹಿತ್ಯದಲ್ಲಿಯೇ ವಿಸ್ಮಯ ಉಂಟು ಮಾಡುತ್ತದೆ. ನಾನು ಈ ಪ್ರಬಂಧದಲ್ಲಿ ಆ ಮೂವರು ಚಿತ್ರಿಸಿರುವ ಪ್ರಕೃತಿಯ ವಿವಿಧ ಲಾಸವಿಲಾಸಗಳನ್ನು ವರ್ಣಿಸಲು ಹೋಗದೆ, ಅದರ ಭಾಗವಾಗಿ ಇರುವ ಸೂರ್ಯೋದಯವನ್ನು ಮಾತ್ರ ಇಲ್ಲಿ ಮಂಡಿಸಲಾಗುತ್ತದೆ.

ಅಡಿಟಿಪ್ಪಣಿಗಳು

೧೧. ಡಿ. ಆರ್. ನಾಗರಾಜ್, ಶಕ್ತಿ ಶಾರದೆಯಮೇಳ, ಪು. ೧೬

೧೨. ಲತಾ ರಾಜಶೇಖರ್, ಕುವೆಂಪು ಕಾವ್ಯದಲ್ಲಿ ಪ್ರಕೃತಿ ಒಂದು ಅಧ್ಯಯನ, ಸಹ್ಯಾದ್ರಿ ಪ್ರಕಾಶನ - ೨೦೦೩, ಪುಟ. ೭೫

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಕುವೆಂಪು ಅವರದು ಬಹುದೊಡ್ಡ ಹೆಸರು. "ರಾಷ್ಟ್ರಕವಿ" ಎಂಬ ಬಿರುದಿಗೆ ಪಾತ್ರರಾಗಿರುವ ಅವರ ಸಾಹಿತ್ಯ ಬೃಹತ್ತು ಮತ್ತು ಮಹತ್ತುಗಳಿಂದ ಕೂಡಿದೆ. ಇವರ ಕಾವ್ಯಕ್ಕೆ ನೂರಾರು ಮುಖ, ನೂರಾರು ಸ್ವರ; ನೂರಾರು ದಾರಿ ; ಒಂದೊಂದು ಮುಖದಲ್ಲಿಯೂ, ಒಂದೊಂದು ದಾರಿಯಲ್ಲಿಯೂ ಒಂದೊಂದು ರೀತಿಯ ವಿಶಿಷ್ಟಾನುಭವ. ಅದು ದರ್ಶನಾರ್ಥಿಗಳ ಹೃದಯವನ್ನು ತುಂಬುವಂತಹದ್ದು. ಆದರೆ ಅದನ್ನು ತಮ್ಮದಾಗಿಸಿಕೊಳ್ಳುವ ತಾಳ್ಮೆ ಬೇಕಷ್ಟೆ.

ಮಲೆನಾಡಿನ ಸಿರಿಯೊಡಲಿನ ಸುಂದರ ಸೊಬಗಿನ ನೆಲೆವೀಡಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಕುವೆಂಪು ಅವರ ಜನ್ಮಸ್ಥಳ. ತಾಯಿ ಸೀತಮ್ಮ, ತಂದೆ ವೆಂಕಟಪ್ಪಗೌಡರು. ತಾಯಿ ಸೀತಮ್ಮ ಹಿರೇಕೊಡಿಗೆಯ ಹಿರಿಮನೆತನದ, ಹಿರಿ ಮನಸ್ಸಿನ, ಸಹನಶೀಲತೆ ಮತ್ತು ಸ್ನೇಹ ಮಮತೆಗಳ ಸುಸಂಸ್ಕೃತ ಹೆಣ್ಣು ಮಗಳು. ಇವರ ಹಿರಿಮಗನಾಗಿ ಹಿರೇಕೊಡಿಗೆಯಲ್ಲಿ ಕುವೆಂಪು ೨೯-೧೨-೧೯೦೪ ರಂದು ಜನ್ಮ ತಾಳಿದರು. ಹಿರೇಕೊಡಿಗೆ ಕರ್ನಾಟಕಕ್ಕೆ, ಕನ್ನಡ ಸಾಹಿತ್ಯಕ್ಕೆ, ಭಾರತೀಯ ಸಾಹಿತ್ಯಕ್ಕೆ ಹಾಗೂ ವಿಶ್ವಸಾಹಿತ್ಯಕ್ಕೆ ಹಿರಿದಾದಂತಹ ಕೊಡುಗೆಯೊಂದನ್ನು ನೀಡಿ ತನ್ನ ಹೆಸರನ್ನು ಸಾರ್ಥಕಪಡಿಸಿಕೊಂಡಿತು.

ಚಿಕ್ಕಂದಿನಿಂದಲೂ ಕುವೆಂಪು ಅವರಿಗೆ ಓದಿನಗೀಳು ಅಪಾರವಾಗಿತ್ತು. ಕೈಗೆ ಯಾವ ಪುಸ್ತಕ ಸಿಕ್ಕಿದರೂ ಅವರು ಓದಿ ಮುಗಿಸದೆ ಮೇಲೇಳುತ್ತಿರಲಿಲ್ಲ. ತೀರ್ಥಹಳ್ಳಿಯಲ್ಲಿ ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಪ್ರಾರಂಭ ಮಾಡಿ ಮೈಸೂರಿನ ಹಾರ್ಡ್ವಿಕ್ ಶಾಲೆಯಲ್ಲಿ ಹೈಸ್ಕೂಲ್ ವಿದ್ಯಾಭ್ಯಾಸ ಮಾಡಿ, ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಎಂ.ಎ. ಮುಗಿಸಿ ಅದೇ ವಿಶ್ವವಿದ್ಯಾನಿಲಯದ ಅಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ ಹಾಗೂ ಕುಲಪತಿಗಳಾಗಿ ಸಾರ್ಥಕವಾದ ಸೇವೆಯನ್ನು ಸಲ್ಲಿಸಿದ್ದಾರೆ.

ಪಾಶ್ಚಾತ್ಯ ಸಾಹಿತ್ಯಾಭ್ಯಾಸದಿಂದ ಕನ್ನಡದಲ್ಲಿ ಕಾಣಿಸಿಕೊಂಡ ಸಣ್ಣಕಥೆ, ನಾಟಕ, ಕಾದಂಬರಿಗಳೇ ಮೊದಲಾದ ಸಾಹಿತ್ಯ ಪ್ರಕಾರಗಳಿಂದ ಹಿಡಿದು ಮಹಾಕಾವ್ಯ ಖಂಡಕಾವ್ಯ ಕಥನಕಾವ್ಯ ಭಾವಗೀತೆಯೇ ಮೊದಲಾದ ಪ್ರಕಾರಗಳಲ್ಲಿ ಕುವೆಂಪು ಅವರು ಸಾಹಿತ್ಯ ರಚನೆ ಮಾಡಿದ್ದಾರೆ. ವಿಮರ್ಶೆಯ ಕ್ಷೇತ್ರದಲ್ಲಿಯೂ ಅವರದು ಗಮನಾರ್ಹ ಹೆಸರು.

"ಮೂಡ-ಪಡುವಣ, ಹಳತು-ಹೊಸತು, ದ್ಯಾವಾ-ಪೃಥಿವಿಗಳ
ಬೆಸೆದ ಸಮನ್ವಯ ಧೀರ
ಸರ್ವೋದಯ ದ್ರಷ್ಟಾರ"[೧೩]

ಎಂಬ ಮಾತುಗಳು ಅವರ ಜ್ಞಾನ ದರ್ಶನಗಳಿಗೆ ಹಿಡಿದ ಕನ್ನಡಿಯಾಗಿದೆ.

ಕುವೆಂಪು ಅವರ ಒಟ್ಟು ಇಪ್ಪತ್ತೆರಡು ಕವನಸಂಕಲನಗಳು ಪ್ರಕಟಗೊಂಡಿವೆ. ಆ ಕವನಗಳನ್ನ ಪ್ರಕೃತಿ ಕವನಗಳು, ಪ್ರೇಮಕವನಗಳು, ಕೌಟುಂಬಿಕ ಕವನಗಳು, ದೇಶಪ್ರೇಮ ಕವನಗಳು, ಭಾಷಾಪ್ರೇಮ ಕವನಗಳು, ವಿಡಂಬನ ಗೀತೆಗಳು ಕಥನಕವನ, ಶಿಶುಗೀತೆ ಹೀಗೆ ವಿಭಾಗಿಸಬಹುದು.

೧೩. ಸಿ.ಪಿ.ಕೆ. ಕವಿಗಳು ಕಂಡ ಕುವೆಂಪು ಅವರ ತ್ರಿವಿಕ್ರಮ ಕವನ, ೧೯೭೬, ಪು. ೪೦

ಕುವೆಂಪು ಅವರು ಕಾಡಿನಕವಿ ಅನಂತರ ನಾಡಿನ ಕವಿಯಾದವರು 'ಕಾಡು' ಎಂಬುವುದು ಇಲ್ಲಿ ಪ್ರಕೃತಿಯನ್ನು ಸೂಚಿಸುವಂತದ್ದು. ಬಹುಶಃ ಕುವೆಂಪು ಅವರಂತೆ ಪ್ರಕೃತಿಯನ್ನು ಹೀರಿ ಬೆಳೆದವರು ಇನ್ನೊಬ್ಬರಿಲ್ಲ ಎನ್ನಬಹುದು ಹಾಗೆಯೇ ಪ್ರಕೃತಿಯ ರಮ್ಯತೆಯನ್ನು, ಭೀಕರತೆಯನ್ನು ಅವರಂತೆ ಗ್ರಹಿಸಿ ಅಭಿವ್ಯಕ್ತಿಸಿದವರಿಲ್ಲ. ಅಲ್ಲದೆ ಅದ್ಭುತ ಸೌಂದರ್ಯದ ಅನೇಕ ಪರಿಗಳನ್ನ, ಋತುಋತುವಿಗೂ ಬದಲಾಗುವ ಅದರ ವರ್ಣವಿಲಾಸಗಳನ್ನು ಕುವೆಂಪು ಅವರು ಸಾಚಾತನವಾಗಿ ವರ್ಣಿಸಿದ್ದಾರೆ. ಅದರಲ್ಲೂ ಕುವೆಂಪು ಅವರಿಗೆ 'ಸೂರ್ಯ' ಎಂದರೆ ಚೈತನ್ಯ. ಈ ಚೈತನ್ಯಭಗವಾನನ್ನು ಇವರಂತೆ ಚಿತ್ರಿಸಿದವರು ಕನ್ನಡ ಸಾಹಿತ್ಯದಲ್ಲಿ ವಿರಾಳಾತಿ ವಿರಳ ಎನ್ನಬಹುದು. 'ಸೂರ್ಯೋದಯ' ಪದ್ಯಗಳಿಗೆ ಇವರ ಸಾಹಿತ್ಯದಲ್ಲಿ ವಿಶಿಷ್ಟವಾದ ಸ್ಥಾನವಿದೆ. ಕೆಲವು ಸಂಕಲನಗಳಂತು ಸೂರ್ಯೋದಯ, ಸೂರ್ಯಾಸ್ತಕ್ಕೆ ಮೀಸಲಾಗಿವೆ.

ಸೂರ್ಯೋದಯವನ್ನೇ ಕುರಿತಿರುವ ಕುವೆಂಪು ಅವರ ಕವನಗಳ ಪಟ್ಟಿ ಅಕಾರಾದಿಯಲ್ಲಿ ಹೀಗಿವೆ.

ಅರುಣಗೀತೆ (ನವಿಲು - ೧೯೩೪), ಆನಂದಮಯ ಈ ಜಗಹೃದಯ (ಪಕ್ಷಿಕಾಶಿ - ೧೯೪೬), ಆಷಾಢ ಸೂರ್ಯೋದಯ (ಕಿಂಕಿಣಿ-೧೯೪೬) ಇಂತಹ ಸುಂದರ ಪ್ರಾತಃಕಾಲಾದಿ (ಪಕ್ಷಿಕಾಶಿ ೧೯೪೬) ಇಂದ್ರದಿಗಂತದಿ (ಪಕ್ಷಿಕಾಶಿ -೧೯೪೬), ಉಷೆಯು ನಿಶೆಯ ಚುಂಬಿಸಿ (ಕಲಾಸುಂದರಿ-೧೯೨೪) ಉಷೆ (ಕಲಾಸುಂದರಿ-೧೯೩೪) ಉದಯಗಾನ (ಜೇನಾಗುವಾ-೧೯೪೬) ' ಉದಯರವಿಯಲ್ಲಿ ಸರ್ವೋದಯ' (ಅನುತ್ತರಾ ೧೯೬೩) ಉದಯ (ಕೊಳಲು-೧೯೩೦) ಎಳೆಬಿಸಿಲು (ಮೇಘಪುರ - ೧೯೪೭) ಒಂದು ಪ್ರಾತಃಕಾಲ (ಪಕ್ಷಿಕಾಶಿ - ೧೯೪೬)ಕವಿಶೈಲ-೨-೩.(ಕೃತ್ತಿಕೆ - ೧೯೪೬) ಕವಿಶೈಲದಿಂದ ಕುಂದಾದ್ರಿ (ಅನಿಕೇತನ-೧೯೬೩) ದಿಗಂತದೇವ(ಕಿಂಕಿಣಿ-೧೯೪೬) ನವೀನ (ನವಿಲು-೧೯೩೪) ನವಿಲುಕಲ್ಲಿನಲ್ಲಿ ಉಷಃ ಕಾಲ (ಕೃತ್ತಿಕೆ -೧೯೬೬) ನವಿಲುಕಲ್ಲಿನಲ್ಲಿ ಸೂರ್ಯೋದಯ (ಪಕ್ಷಿಕಾಶಿ-೧೯೪೬) ನವಿಲುಕಲ್ಲಿನಲ್ಲಿ ಮತ್ತೊಮ್ಮೆ (ಅನಿಕೇತನ ೧೯೬೩) ಪ್ರಾತಃಕಾಲ (ನವಿಲು-೧೯೩೪) ಫಾಲ್ಗುಣಸೂರ್ಯೋದಯದಲ್ಲಿ (ಕೃತ್ತಿಕೆ ೧೯೪೬) ಬಾ ಫಾಲ್ಗುಣ ರವಿದರ್ಶನಕೆ (ಪಕ್ಷಿಕಾಶಿ-೧೯೪೬) ಭಾದ್ರಪದದ ಸುಪ್ರಭಾತ(ಪಕ್ಷಿಕಾಶಿ - ೧೯೪೬) ಮುಸ್ಸೋಸರು (ನವಿಲು-೧೯೩೪) ಮಾಗಿಯ ಹಗಲು (ಪಕ್ಷಿಕಾಶಿ-೧೯೪೬)ಮಾಗಿಯ ಹೊತ್ತಾರೆ ಶ್ರೀಚಾಮುಂಡಿ (ಅನಿಕೇತನ-೧೯೬೩) ರವಿಗೆ ಕವಿಯ ಸರಸನಿಂದೆ (ಜೇನಾಗುವಾ ೧೯೩೨), ವನನಾಯಕ (ಕಲಾಸುಂದರಿ-೧೯೩೪), ಶರತ್ಕಾಲದ ಸೂರ್ಯೋದಯದಲಿ (ಪಕ್ಷಿಕಾಶಿ-೧೯೪೬), ಶಾಂತಿ ಬರುವಳು (ನವಿಲು-೧೯೩೪) ಶಿವರಾತ್ರಿಯ ಸೂರ್ಯೋದಯ (ಅನಿಕೇತನ-೧೯೬೩), ಸಹ್ಯಾದ್ರಿ ಶೃಂಗದಲಿ(ನವಿಲು-೧೯೩೪) ಹಿಮಮಣಿ(ಪಕ್ಷಿಕಾಶಿ-೧೯೪೬)

ಈ ಕವನಗಳನ್ನ ಅಧ್ಯಾಯನದ ಶಿಸ್ತಿಗಾಗಿ ಮೂರು ಭಾಗಗಳನ್ನಾಗಿ ಮಾಡಿಕೊಂಡು ಅಭ್ಯಾಸಿಸಬಹುದು.

೧. ಪ್ರಾಕೃತಿಕ ಚಟುವಟಿಕೆಯ ಸೂರ್ಯೋದಯ ಕವನಗಳು

೨. ಋತುಮಾನ ಬದಲಾವಣೆಯಲ್ಲಿ ಸೂರ್ಯೋದಯ ಕವನಗಳು

೩. ನಿರ್ಧಿಷ್ಟಸ್ಥಳ ಸಂದರ್ಭದ ಸೂರ್ಯೋದಯ ಕವನಗಳು

೧. ಪ್ರಾಕೃತಿಕ ಚಟುವಟಿಕೆಗಳಲ್ಲಿ ಸೂರ್ಯೋದಯ

ಸೂರ್ಯೋದಯದ ಕಾಲದಲ್ಲಿ ಪ್ರಕೃತಿಯಲ್ಲಿ ಕೆಲವು ಬದಲಾವಣೆಗಳಾಗಿ ಸೌಂದರ್ಯಯುಕ್ತವಾದ ವಾತಾವರಣ ಉಂಟಾಗುವುದು. ಆ ವಾತಾವರಣ ಕುರಿತು ಹೇಳುವ ಕವನಗಳಲ್ಲಿ 'ಪ್ರಾಕೃತಿಕ ಚಟುವಟಿಕೆಗಳಲ್ಲಿ ಸೂರ್ಯೋದಯ ಶೀರ್ಷಿಕೆಗೆ ಒಳಪಡುತ್ತವೆ.

ಉದಯ (ಕೊಳಲು - ೧೯೩೦)

೧೯೩೦ರಲ್ಲಿ ಪ್ರಕಟವಾದ ಕೊಳಲು ಕವನಸಂಕಲನದಲ್ಲಿ 'ಉದಯ' ಎಂಬ ಕವನದಲ್ಲಿ ಸೂರ್ಯೋದಯವಾದಾಗ ಪ್ರಕೃತಿಯಲ್ಲಿ ಆಗುವ ಚಟುವಟಿಕೆಯನ್ನ ಕುವೆಂಪು ಚಿತ್ರಿಸಿದ್ದಾರೆ. ಇಲ್ಲಿ ಉಯದ ಎಂದರೆ ಯಾವ ಉದಯ ? ಯಾರ ಉದಯ ? ಎನಿಸುವುದು ಸಹಜ. ಒಂದರ್ಥ ಸೂರ್ಯೋದಯ ಮತ್ತೊಂದರ್ಥ 'ಕವಿಯ ಉದಯ' 'ಅರುಣನ ಬಂಗಾರದ ಕಿರಣದಿಂದ ಮೂಡಲದಿಕ್ಕು ಬಂಗಾರವಾಗಿ ಅವನ ಕಿರಣವು ಮೈಗೆ ಸೋಕಿದಾಗ ಕವಿಯ ಮನ ಕುಣಿಯುವುದು ಹರ್ಷದಾಳುವುದನ್ನು ನೋಡಬಹುದು.

ಸೂರ್ಯನಿಗೆ ಎಲ್ಲರು ಒಂದೆ. ಎಲ್ಲರನ್ನ ಗೆಳೆಯರಂತೆಯೇ ಕಾಣುವನು. 'ಮನೆಗೆ ಬಂದ ಗೆಳೆಯರಂತೆ' ಪ್ರತಿಯೊಬ್ಬರ ಮನ ಮನೆಗೂ ಗೆಳೆಯ ಬಂದಂತೆ ಬರುವನು. ಭೂಮಿ ಸೂರ್ಯನ ಗೆಳತಿ. ಗೆಳೆಯ ಬಂದಾಗ ಹೇಗೆ ನಡಾವಳಿಗಳು ಮಾನವಲೋಕದಲ್ಲಿ ನಡೆಯುತ್ತವೋ ಹಾಗೆಯೇ ನಿಸರ್ಗ ಲೋಕದಲ್ಲಿಯೂ ನಡೆಯುವವು ಎಂಬ ಕವಿಯ ಬಾವನೆ.

ರವಿಯ ಕಿರಣಗಳನು ಧರೆಯು
ಉಪಚರಿಸುತಲಿರುವಳು ;
ವಿಹಗಕೋಟಿಯುಲಿಯ ಬೀರಿ
ಮುಗುದತನವ ತರುವುವು !

ಊರಿಗೆ ಮುಖ್ಯ ಅತಿಥಿ ಬರುವರು ಎಂದು ಗೊತ್ತಾದಾಗ ಹೇಗೆ ಮೊದಲೇ ಸಿದ್ಧತೆಯ ತರಾತುರಿಯಲ್ಲಿ ಇರುವರೋ, ಹಾಗೆಯೇ ಪಕ್ಷಿಲೋಕವು ಕೂಡ ತಮ್ಮ ಇಂಪಾದ ಧ್ವನಿಯಿಂದ ಹಾಡುತ್ತ ನಲಿಯುತ್ತ ಸೂರ್ಯನಿಗೆ ಕಾಯುವವು.

ಪ್ರತಿಯೊಬ್ಬ ಗೆಳೆಯನಿಗೂ ತಮ್ಮ ಆತ್ಮೀಯ ಗೆಳೆಯನನ್ನ ಹೇಗೆ ಕಳಿಸಿಕೊಡಲು ಬೇಸರವಾಗುವುದೋ ಅದೇ ರೀತಿ ಇಲ್ಲಿಯೂ ಆಗಿದೆ.

ಪಸರಿಸಿರುವ ಪಸಲೆಯಿಂದ
ತಳಿತು ನಲಿವ ಬನಗಳಿಂದ
ತೆರಳದಿರೆಲೆ ಉದಯವೆ
ಇಹಕೆ ಬರುವ ಪರದ ಸೊಬಗ
ತೊರೆಯದಿರೆಲೆ ಹೃದಯವೆ !

ಎಂದು ಯಾವಾಗಲೂ ಜೊತೆಯಲ್ಲಿಯೇ ಇರಬೇಕು ಎಂದು ಕವಿಯ ಮನೋಭಿಲಾಷೆ. "ಇಹಕೆ ..... ಪರದ ಸೊಬಗ ತೊರೆಯದಿರು" ಎಂಬಲ್ಲಿ ಇಹ-ಪರಗಳನ್ನು ಸಮನ್ವಯಿಸುವ ಕವಿದೃಷ್ಟಿ ಲಕ್ಷ್ಯಾರ್ಹ.

ಉಷೆಯು ನಿಶೆಯ ಚುಂಬಿಸೆ (ಕಲಾಸುಂದರಿ - ೧೯೨೪)

"ಉಷೆಯು ನಿಶೆಯ ಚುಂಬಿಸೆ" ಎಂಬಲ್ಲಿ ಕವಿ ಕವಿಶೈಲದಲ್ಲಿ ಕಂಡ ಅರುಣೋದಯವನ್ನ ಸೌಂದರ್ಯೋಪಾಸಕರಾಗಿ ಚೆಲುವನ್ನು ಸವಿದು ತಾದಾತ್ಮ್ಯಾನುಭವದಿಂದ ಚಿತ್ರಿಸಿದ್ದಾರೆ.

"ಕವಿ ಧ್ಯಾನಲೀನನಾಗಿ ಕವಿಶೈಲಶಿಲಾಪೀಠದಿ" ಯಲ್ಲಿ ಕುಳಿತು ತನಗಾದ ಅನುಭವವನ್ನು ಕೃತಿಯಾಗಿಸಿದ್ದಾರೆ.

"ತಿಮಿರ ವಸನ ಧಾರಿಣಿ ನಿಶೆ ಮೆಲ್ಲಮೆಲ್ಲನೆಸ್ತಮಿಸೆ" ಎಂದು ಪ್ರಾರಂಭವಾಗುತ್ತದೆ. ಕತ್ತಲ ವಸನಧಾರಿಯಾದ ಧಾರಿಣಿಯು ಹಾಗೂ ತರುಣ ಅರುಣ ರಾಗಿಣಿಯು ಸೇರುವ ಸಮಯದಲ್ಲಿ ಸಹಜವಾಗಿ ಪ್ರಕೃತಿಯಲ್ಲಿ ಬದಲಾಗುವ ಚಿತ್ರಣ. ತರುಣ ಅರುಣ ರಾಗಿಣಿ ಉಷೆ ಪೂರ್ವದಲ್ಲಿ ವಿರಾಜಿಸಿದಾಗ ಸಹಜವಾಗಿ ಬಿದಿರವನಗಳ ತುದಿಗಳು ಕಾನನದ ಶಿಖರವು ಅದರ ಹಸುರಿನಿಂದ "ಹಸುರು ಕಡಲುಗಳ" ತೆರೆಯೋ ಏಳುತ್ತವೆಯೋ ಎನಿಸುತಿದೆ. ಪ್ರಾತಃಕಾಲದ ಬಿಸಿಲು ಜೀವನಿರೋಧಕ ಚೈತನ್ಯದ ಬಿಸಿಲು ಇಂತಹ ಸಂಜೀವಿನಿಯನ್ನು ಕವಿ "ಹಸುಳ ಬಿಸಿಲು" ಎಂದು ಟಂಕಿಸಿರುವುದು ಅದ್ಭುತವಾಗಿದೆ.

ಇಂತಹ ಹಸುಳೆ ಬಿಸಿಲು ಹಸಿರಿನ ತಬ್ಬುಗೆಯಿಂದ ಹಸರಾಗಿದೆ. ಇಂತಹ ಕಳೆಯ ಜಲದಲ್ಲಿ ಮೀಯಬೇಕಾದರೆ ಬೆಟ್ಟಗುಡ್ಡದ ತುದಿಗೆ ಬನ್ನಿ ಎಂದು ಕರೆಕೊಡುತ್ತಿರುವರು. ಅಲ್ಲಿ ಈ ಜಂಜಾಟವನ್ನು ಮರೆತು ಪ್ರಕೃತಿಯ ಚೆಲುವಿನಲ್ಲಿ ಆ ಮೈಮರೆಯಿರಿ -

ಮಲೆಯ ತುದಿಗೆ ಮನವೆ ನಡೆ;
ಮೈಯ ಮರೆವ ಮುದವ ಪಡೆ

ಉಷೆಯ ಚುಂಬನದಿಂದ ಸ್ಫೂರ್ತಿಗೊಂಡು ಮೊಗ್ಗಿನ ಮಲ್ಲಿಗೆ ಹೂ ಅರಳಿ ಅವುಗಳ ಮೇಲೆ ಸಮೀರು ನಾಟ್ಯವಾಡಿ ಆ ಹಸಿರು ಎಲೆಗಳನ್ನು ಕವಿ "ಎಲೆಯ ಹಸುರು ತೊಟ್ಟಿಲು" ಎಂದು ಕರೆದು ಅಲ್ಲಿ ಹಸುಳೆಯನ್ನು ತೂಗಿ ನಲಿಯುತ್ತಿರುವಳು ಇಲ್ಲಿ "ಹಸುಳೆ" ಯನ್ನು "ಹನಿಯ ಹಸುಳೆ" ಎಂಬ ಶಬ್ದವು ಅದ್ಭುತವಾದ ಶಬ್ದವಾಗಿದೆ. ಹಾಗೆಯೇ ಮುಂದಿನ ಈ ಕವಿಕಲ್ಪನೆ ಸೊಗಸಾಗಿದೆ.

ರಮಣಿ ಕದಳಿ ಅವನತ ಮುಖಿ
ಮಣಿಯ ಪತಿಚರಣದಲಿ
ಕೌಂಗು ರಮಣನುನ್ನತ ಶಿಖಿ
ಕುಣಿಯ ನಭೋಂಗಣದಲಿ

ರಮಣಿಯಾದ ಕದಳಿಯು ರಮಣನಾದ ಕೌಂಗು ಎಂದರೆ ನಿಂತ ಅಡಕೆಗೆ. ಬಾಗಿದ ಬಾಳೆ ರಮಣಿಯಾದ ಕದಳಿಯು ಕೌಂಗಿನ ಪದತಳಕ್ಕೆ ನಮಿಸುವ ಚಿತ್ರವು ಕೂಡ ಸೊಗಸಾದ ದಾಂಪತ್ಯದ ಚಿತ್ರಣವಾಗಿದೆ. ಇದನ್ನೆಲ್ಲ ಅನುಭವಿಸಿದ ಕವಿಯ ಮನಕ್ಕೆ "ಶುಭ್ರಮೇಘಸ್ವಪ್ನರಾಶಿ ಅಭ್ರಮನದಿ ಬರಲು" ಆಗ ಕವಿಗೆ ಅವನ ಪ್ರತಿಭಾಜ್ವಾಲೆ ಹೊಸ ಕಾವ್ಯ ಛಂದಸ್ಸನ್ನ ಹಿಡಿಯುತ್ತದೆ.

ಈ ಪ್ರಕೃತಿ ಚಿತ್ರಣವನ್ನ ಕವಿ ಕವಿಶೈಲದಲ್ಲಿ ಕಂಡ ಚಿತ್ರಣವಾಗಿದೆ. ಅಷ್ಟೆಲ್ಲ ಈ ಪದ್ಯದಲ್ಲಿ ಕವಿ ಅನೇಕ ಹೊಸಹೊಸ ಪದಗಳನ್ನು ಟಂಕಿಸಿ ಕನ್ನಡ ಶಬ್ದಕೋಶದ ಶ್ರೀಮಂತಿಕೆಯನ್ನ ಹೆಚ್ಚಿಸಿದ್ದಾರೆ. ಉದಾಹರಣೆಗೆ 'ಹಸುರು ಕಡಲು', 'ಹಸುಳೆ ಬಿಸಿಲು', 'ಹನಿಯ ಹಸುಳೆ' ಇವುಗಳು ಅದ್ಭುತವಾದ ಹೊಸಸೃಷ್ಟಿಗಳು.

ಒಟ್ಟಿನಲ್ಲಿ ಉದಯಿಸಿ ಬರೆ ಬಾಲರವಿ

ಉದಯಗಿರಿ ಲಲಾಟದಿ

ಬಾಲರವಿಯು "ಐದಲೆಲ್ಲ ವಿಸ್ಮೃತಿ"ಯಾಗಿ ರೂಪರಹಿತಭಾವಬಿಂದು ಎಂದು ವಿಶ್ವರೂಪಿಯ ಓಂಕಾರಸ್ಫೂರ್ತಿಯಾಗಿ ಬುದ್ಧನ ಶಾಂತತ್ವ ಉಂಟಾಗುವುದು.

ಕಾವ್ಯಕ್ಕಿಂತ ಹೆಚ್ಚು ಆಧ್ಯಾತಕಸಿದ್ಧಿ; ರಸಾನಂದಕ್ಕಿಂತ ಬ್ರಹ್ಮಾನಂದಸಿದ್ಧಿ ಔನತ್ಯವಾದುದು ಎಂಬ ಸಂದೇಶವ[illegible] ಕೂಡ ಈ "ಉಷೆಯ ನಿಶೆಯ ಚುಂಬಿಸೆ" ಕವನ ನಿದರ್ಶಿಸುತಿದೆ.

ಉಷೆ (ನವಿಲು - ೧೯೩೪)

'ಉಷೆ' ಎಂಬ ಕವಿತೆಯು ಕೂಡ ಸೂರ್ಯೋದಯದ ವರ್ಣನೆಯಾಗಿದೆ. ಬೆಳಗಾದಾಗ ಅದು ಹೇಗೆ ಆಗುವುದು ಎಂಬುದನ್ನು ಕವಿ ಈ ಕವಿತೆಯಲ್ಲಿ ಚಿತ್ರಿಸಿದ್ದಾರೆ. 'ಉಷೆಯು ನಿಶೆಯ ಚುಂಬಿಸೆ' ಎಂಬ ಕವಿತೆಯಲ್ಲಿ ಚೆಲ್ವ[illegible] ಹುಡುಗಿಯಾಗಿ ಕವಿಯ ಮನಕ್ಕೆ ಕಾಣಿಸುವುದು ವಿನೂತನಃ

ಮೂಡುದೆಸೆಯೊಳಾಡಿಯಾಡಿ ಮೂಡಿ ಬರುವಳು
ನಲಿದಾಡಿ ಬರುವಳು
ಮೆಲ್ಲಮೆಲ್ಲನೆ ಮೇಲೇರುತ ನೋಡು ಬರುವಳು
ಉಷೆ ಮೂಡಿ ಬರುವಳು

ಎಂಬ ಸಾಲುಗಳು ಉಷೆಯ ಚುರುಕುತನವನ್ನು ಬಿಂಬಿಸುತ್ತದೆ. ಹೇಗೆ ಮೆಲ್ಲಮೆಲ್ಲನೆ ನೇಸರು ಮೂಡುವುದೋ ಹಾಗೆಯೇ ಕವನವೂ ಕೂಡ ಅಷ್ಟೆ ಮೆಲ್ಲಗೆ ಸಾಗುತ್ತದೆ.

ಅವಳು ಬಂದಾಗ "ಕುರುಡಿರುಳಿನ ಕರಿಹೊದಿಕೆ" ಯನ್ನು ಮೆಲ್ಲಮೆಲ್ಲಗೆ ತೆಗೆದು ಕಿರಣಾಂಶುವಿನಲ್ಲಿ ಮಿಂಚಿ ಅನಂತರ ಬನಕ್ಕೆ ಹಸುರು ಬಟ್ಟೆ ಉಡಿಸಿ, ಹಿಮಮಣಿಗಳನ್ನು ಮೈಯಾಭರಣವಾಗಿ ತೊಡಿಸಿ ನಲಿಯುವಳು. ಅವಳು ಬಂದಾಗ "ಮಧುಪಾನದಿ ಮೈಮರೆತಿಹಳೋ ಎಂಬಂತೆ ಕಾಣುತಿಹಳು ಎಂದಿದ್ದಾರೆ. ಕೊನೆಯ ಸಾಲಿನಲ್ಲಿ ತಿರೆಯು ಸದಾ ಸೊಗಸು ಇರಬೇಕಾದರೆ ಈ ಉಷೆಯ ಬರುವಿಕೆ ಅವಶ್ಯ ಎಂದಿದ್ದಾರೆ.

"ಸಂತಸದಲಿ ತಿರೆಯು ಉಷೆಗೆ ಸೊಗದ ಬರವ ಬಯಸುತಿಹುದು"! ಈ ಕವನದಂತೆ ಇದೇ ಕವನ ಸಂಕಲನದಲ್ಲಿ (ನವಿಲು - ೧೯೩೪ರಲ್ಲಿ) ಇದೇ ಛಂದಸ್ಸು ಪದ್ಯದ ಓಘ "ಶಾಂತಿ ಬರುವಳು" ಎಂಬ ಕವಿತೆಯೂ ಹೊಂದಿದೆ.

ಮೂಡುದೆಸೆಯ ಬೆಟ್ಟದುದಿಯನೇರಿ ನೇಸರೆಸೆವ ಮುನ್ನ,
ಬೆಳಕು ತಿಳಿಯ ಬಾನಿನಿಂದ ತುಳುಕಿ ಭೂಮಿಗಿಳಿವ ಮುನ್ನ

ಎಂಬ ಸಾಲುಗಳನ್ನು ನೋಡಬಹುದು. 'ಉಷೆ' ಕವಿತೆಯಲ್ಲಿ "ಶಾಂತಿ ಚಿಮ್ಮಿ ಬರುವಳು" ಎಂದಾಗಿದೆ. [illegible] ಕೂಡ ಪ್ರಕೃತಿಯಲ್ಲಿ ಆದ ಬದಲಾವಣೆಯನ್ನು ಸಾರುವ ಕವನಳಾಗಿವೆ.

ಮಂಗಳಾರತಿ (ಅಗ್ನಿಹಂಸ - ೧೯೪೬)

೧೯೪೬ರಲ್ಲಿ ಪ್ರಕಟವಾದ ಅಗ್ನಿಹಂಸ ಕವನ ಸಂಕಲನದಲ್ಲಿ 'ಮಂಗಳಾರತಿ' ಎಂಬ ಕವಿತೆಯಲ್ಲಿ ಕು[illegible] 'ಸೂರ್ಯ'ನನ್ನು ಹಣತೆಯ ಹಿನ್ನೆಲೆಯಲ್ಲಿ ಸೃಷ್ಟಿಸಿದ್ದಾರೆ.

ಮೇರೆಯೆ ಇರದಾಕಾಶ ಸಮುದ್ರದಿ
ಸೂರ್ಯನ ಜ್ಯೋತಿರ್ಮೂರ್ತಿಯ ಸುತ್ತಿ
ಶಾಶ್ವತ ಮಂಗಳದಾರತಿಯೆತ್ತಿ
ತೇಲುತ್ತಿದೆ ಭೂಮಿಯ ಹಣತೆ ! ಎಂದಿದ್ದಾರೆ.

ನಿಜವಾದ ಶಾಶ್ವತವಾದ ಭೂಮಿಯ ಹಣತೆಯೆ ದಿಟ ಈ ಸೂರ್ಯ ಇಲ್ಲಿ ಭೂಮಿಯನ್ನು ಹಣತೆಯೆಂದೂ ಸೂರ್ಯನನ್ನು ಅದರ ಕುಡಿಯೆಂದೂ ಪರಿಭಾವಿಸುವುದು ಅದ್ಭುತ ಕಲ್ಪನೆಯಾಗಿದೆ.

ಅರುಣಗೀತೆ (ನವಿಲು - ೧೯೩೪)

೧೯೩೪ರಲ್ಲಿ ಪ್ರಕಟವಾದ 'ನವಿಲು' ಕವನ ಸಂಕಲನದಲ್ಲಿ 'ಅರುಣಗೀತೆ' ಎಂಬ ಕವಿತೆಯಲ್ಲಿ ನಾಡಗೀತೆ, ರಾಷ್ಟ್ರಗೀತೆಯಂತೆ, ಅರುಣನಶಿವಮಯವನ್ನು ಸಾರುವ ಅರುಣಗೀತೆಯಾಗಿ ಹೊರಹೊಮ್ಮಿದೆ.

ಪ್ರಕೃತಿಯಲ್ಲಿ ಭಗವಂತನನ್ನು ಕಾಣುವ ದೃಷ್ಟಿ ಕುವೆಂಪು ಅವರ ಕವನಗಳಿಗೆ ಹೆಚ್ಚಿನ ಜೀವಕಳೆಯನ್ನು ತಂದು ಕೊಟ್ಟಿದೆ. ಅಂತಹ ಕವಿತೆಗಳಲ್ಲಿ ಇದು ಒಂದು.

ದೇವರ ಮಕ್ಕಳೆ ಎಲ್ಲರು ಏಳಿ ?
ಬೆಳ್ಳಗೆ ಬೆಳಗಾಯಿತು ಬೇಗೇಳಿ ! ಎಂದು

ಎಲ್ಲರೂ ಮಾನ್ಯರು ಯಾರಿಗೆ ಯಾರು ಕಡಿಮೆಯಲ್ಲ ;ಯಾರಿಗೆ ಯಾರು ಹೆಚ್ಚಲ್ಲ' ಎಂಬ ಭ್ರಾತೃತ್ವಪ್ರೇಮದಿಂದ 'ಅಮೃತಪುತ್ರರೀರ' ಎಂದು ಸಂಬೋಧಿಸಿ ಜಾಗೃತಿ ಮೂಡಿಸುತ್ತಿದ್ದಾರೆ ಕವಿ. ಸೂರ್ಯ ಪ್ರತಿ ದಿನ ಹೊಸಹೊಸ ರೀತಿಯಲ್ಲಿಯೇ ಕಾಣುವನು ಎಂಬ ಸತ್ಯವನ್ನು ಸಾರುತ್ತ 'ದೇವರ ಗುಡಿಯಿದೆ ನಿಮ್ಮೊಡಲಲ್ಲಿ' ಎಂದು ಎಚ್ಚರಿಸುತ್ತ ಈ ಗುಡಿಯನ್ನ ಯಾವಾಗಲು ಜಾಗರವಿದ್ದು ಕಾಯಬೇಕು ಎಂಬ ವಿಶ್ವಸಂದೇಶವನ್ನು ಸಾರುವ ಕವಿತೆಯಾಗಿದೆ.

ಪ್ರಾತಃಕಾಲ (ನವಿಲು - ೧೯೩೪)

ಪ್ರಾತಃಕಾಲದಲ್ಲಿ ಅರುಣೋದಯದಿಂದ ನಾಕವೇ ಇಳೆಗೆ ಕಳಚಿ ಬಿದ್ದಿದಿಯೋ ಎನಿಸುತಿದೆ. ಇಲ್ಲಿನ ಬಣ್ಣಬಣ್ಣದ ಲೋಕ ಕವಿಗೆ ನಾಕವಲ್ಲದೆ ಮತ್ತೇನು ? ಎಲ್ಲರೂ ಆ ನಾಕವನ್ನು ಕಾಣಲು ಹಾಗೂ ಅನುಭವಿಸಲು ಕರೆಗೊಡುತ್ತಿದ್ದಾರೆ

ಆ !ನಾಕವೆ ನಮ್ಮ ಲೋಕೆ
ಕಳಚಿ ಬಿದ್ದಿದೆ ಬನ್ನಿರಿ !
ತುಂಬಿಕೊಳ್ಳಲು ನಿಮ್ಮ ಹೃದಯದ
ಹೊನ್ನ ಬಟ್ಟಲ ತನ್ನೀರಿ
ಬೇಗ ಬನ್ನಿ ! ಬೇಗ ಬನ್ನಿ !
ಕರಗಿ ಹೋಗುವ ಮುನ್ನ ಬನ್ನಿ
ತಡವ ಮಾಡದೆ ಓಡಿ ಬನ್ನಿ
ಸ್ವರ್ಗ ಹರಿಯುತಿದೆ
ಇಳೆಯ ಮಕ್ಕಳನ್ನೆಲ್ಲ ಕೇಳಿರಿ
ಕೂಗಿ ಕರೆಯುತಿದೆ !

ಎಂದು ಪ್ರಾತಃಕಾಲದ ಗೀತೆಯಲ್ಲಿ ಸಾರಿದ್ದಾರೆ. ಕವಿಗೆ ಯಾವಾಗಲೂ ಪ್ರಾತಃಕಾಲ ಒಂದೆ ಎನಿಸಿಲ್ಲ. ಅದು ಬೇರೆ ಬೇರೆ ತೆರನಾಗಿ ನೂರಾರು ಪ್ರಾತಃಕಾಲಗಳಾಗಿ ಕಂಡು ಬರುತ್ತದೆ. ಪ್ರಾತಃಕಾಲ ಗೀತೆಯಂತೆಯೇ "ಇಂತಹ ಸುಂದರ ಪ್ರಾತಃಕಾಲದಿ" ಮತ್ತು "ಒಂದು ಪ್ರಾತಃಕಾಲ" ಎಂಬ ಅದ್ಭುತವಾದ ಕವನಗಳಿವೆ. ಮೂರು ಕವನಗಳು ಕೂಡ ಭಿನ್ನವಿಭಿನ್ನವಾಗಿವೆ.

ಇಂತಹ ಸುಂದರ ಪ್ರಾತಃಕಾಲದಿ (ಪಕ್ಷಿಕಾಶಿ - ೧೯೪೬)

'ಇಂತಹ ಸುಂದರ ಪ್ರಾತಃಕಾಲದಿ' ಎಂಬ ಕವನ ಕೂಡ ಸೂರ್ಯೋದಯದ ಸಾರ್ಥಕ ಮುಹೂರ್ತವನ್ನು ಚಿತ್ರಿಸುತ್ತದೆ. ಮಳೆಯಲ್ಲಿ ಮಿಂದು ಕಳಕಳಿಸುವ, ಹಸುರು ಬಯಲು, ಹೊಂಬಿಸಿಲು ಬಣ್ಣಬಣ್ಣಗಳಲ್ಲಿ ಹೊಳೆಯುವ ಹಿಮಮಣಿ, ಸ್ಫಟಿಕದೋಪಾದಿಯ ವಯುಮಂಡಲ, ನೀಲಾಕಾಶ, ಅಲ್ಲಲ್ಲಿ ತೇಲುವ ಮುಗಿಲಪಟ ಇವೆಲ್ಲವು ಕವಿಗೆ-

ಕಳಕಲಿಸುವ ಹಸುರ್ಬಯಲು ಇಂದು
ಹೊಂಬಿಸಿಲು ಉರಿದಿರೆ ಜಲ ಬಂದು
ಸತ್ತಲೊ ಊರ್ವಶಿ ಸ್ವರ್ಗದಲಿ !
ಗಾಳಿಯ ಮಂಡಲ ಸ್ಫಟಿಕದವೋಲಿದೆ ;
ನಭವೋ ನೀಲವಿತಾನವ ಹೋಲಿದೆ ;
ಅಲ್ಲಲ್ಲಿಯೆ ಮುಗಿಲಪಟ ತೇಲಿದೆ
ವೈಕುಂಠವಿದೆ ನಿಸರ್ಗದಲಿ !

ಮನುಷ್ಯನಿಗೆ ಇಂತಹ ಪ್ರಾತಃಕಾಲದಲ್ಲಿ ಓಡಾಡುವುದೇ ಒಂದು ಸೌಭಾಗ್ಯ. ಇದರಿಂದ ಆಗುವ ಆನಂದ ಇನ್ನಾವುದರಲ್ಲಿದೆ ಎಂದೆನಿಸಿ

ಇಂತಹ ಸುಂದರ ಪ್ರಾತಃಕಾಲದಿ
ಜೀವಿಸುವುದಕ್ಕಿಂತಲೂ ಬೇರೆಯ ಗುರಿ
ಜೀವಕ್ಕೆ ಬೇಕಿಲ್ಲ :

ಎಂಬ ಭಾವ ಮೂಡಿಸಿವೆ. ಸೃಷ್ಟಿಯ ಜಡಚೇತನಗಳೆಲ್ಲ ಈ ಸೊಬಗನ್ನ ಸವಿಯುತ್ತಲಿವೆ.

ದನಕರುಗಳು ಬಯಲಲಿ ಮೇಯುತ 'ಇವೆ'
ಗಿಡತರುಗಳು ಬದುಕನು ಸವಿಯುತ 'ಇವೆ'
ಅರಿವಾಸೆಯ ಮಾಯೆಗೆ ಬೀಳದೆ 'ಇವೆ'
ಇರುವಿಕೆಯಾನಂದದಿ ನಲಿಯುತ 'ಇವೆ'
ಇರುವಿಕೆಗಿಂತಲು ಹೆಚ್ಚಿನ ಗೋಜಿಗೆ ಹೋಗದಿವೆ !

ಇಲ್ಲಿನ 'ಇವೆ' ಎಂಬ ಪದಪ್ರಯೋಗ ಆನಂದವನ್ನು ತಾದಾತ್ಮ್ಯದಿಂದ ಅನುಭವಿಸುವಿಕೆಯನ್ನು ಒತ್ತಿ ಹೇಳುತ್ತವೆ. ಒಟ್ಟಿನಲ್ಲಿ ಸೃಷ್ಟಿ ರಹಸ್ಯವನ್ನೂ ಬೇಧಿಸಲು ಹೊರಡುವ ಬೌದ್ಧಿಕಗಿಂತಲೂ ಅದರ ಸೊಬಗ

ಸವಿಯುವ ಮುಗ್ಧ ಬದುಕು ಸಾರ್ಥಕ ಎಂಬ ತತ್ತ್ವ ಹೊಳೆಯುತ್ತದೆ. ಬದುಕನ್ನು 'ಸವಿಯದೆ, ರಹಸ್ಯ' ಭೇದಿಸತೊಡಗುವ ಬುದ್ಧಿಜೀವಿಗೆ ದೊರಕುವುದು ಅತೃಪ್ತಿ ಮತ್ತು ಅಶಾಂತಿ. ಆದರೆ ಅದೇ ಬದುಕನ್ನು ಯಥಾವತ್ತಾಗಿ ಸ್ವೀಕರಿಸಿ ಅನುಭವಿಸುವವರಿಗೆ ದೊರೆಯುವುದು ತೃಪ್ತಿ ಮತ್ತು ಆನಂದ. ಆದುದರಿಂದ

'ಅರಿವಾ'ಸೆಯೆ ಮಾಯಾ ಬಂಧ
ಇರುವುದೆ ಮುಕ್ತಿಯ ಆನಂದ ।
ಅರಿವಾಸೆಯಬಿಡು ; 'ಇರು' ವಾಸೆಯ ತೊಡು ।
ಇಂತಹ ಸಮಯದಿ 'ಇರುವಿಕೆ'ಗಿಂತಲೂ
ಹೆಚ್ಚಿನ 'ಅರಿವಿಲ್ಲ' ।
ಇಂತಹ ದಿವ್ಯ ಪ್ರಭಾತ ಕಾಲದಿ
ಜೀವಿಸುವುದಕ್ಕಿಂತಲು ರಸಜೀವಿಗೆ
ಬೇರೆಯ ಗುರಿಯಿಲ್ಲ ।

ಎಂದು ವಾಚ್ಯವಾಗಿಯೇ ಹೇಳಿಬಿಡುತ್ತಾರೆ.

ಒಂದು ಪ್ರಾತಃಕಾಲ (ಪಕ್ಷಿಕಾಶಿ - ೧೯೪೬)

'ಒಂದು ಪ್ರಾತಃಕಾಲ' ವು ಕವಿಗೆ ಸ್ವರ್ಗದಂತಾಗಿದೆ. ಈ ಸ್ವರ್ಗವನ್ನು ನೋಡಲು ಸಹೃದಯಿಯ ರಸಿಕರಿಗೆ ಕರೆಕೊಡುತ್ತಿದ್ದಾರೆ.

"ಓಡು ಹೊರಗೆ, ಓಡು ನೋಡು" ಎಂದು ಮೂಡುತಿರುವ ದಿನಮಣಿಯನ್ನ ಭೂಮಿಯ ಹಸಿರಿನ ಮೇಲೆಲ್ಲ ಮುತ್ತಿನಂತೆ ಬಿದ್ದಿರುವ ಹಿಮಮಣಿಯನ್ನ ನೋಡಿ ಸ್ವರ್ಗವೇ ಕಳಚಿ ಹುಡಿಹುಡಿಯಾಗಿ ಭೂಮಿಯ ಮೇಲೆ ಬಿದ್ದಿದೆಯೋ ಎನಿಸುವಂತೆ ಆ ಪ್ರಾತಃಕಾಲ ಶ್ರೀಮಂತಿಕೆಯಿಂದ ರಸಸಿದ್ಧಿಯಿಂದ ತುಂಬಿ ತುಳುಕಿದೆ ಎಂದು ನಿದ್ದೆ ಹೋಗಿರುವವರನ್ನು ಎಚ್ಚರಿಸುತ್ತಾರೆ. ಉದ್ವೇಗದಲ್ಲಿ ಏನೂ ಹೇಳಲಾರದವರಾಗಿ ಈ ಪುಟ ಪದ್ಯದಲ್ಲಿ ಭಾವವನ್ನು ಹುದುಗಿಸಿದ್ದಾರೆ.

ಓಡು ಹೊರಗೆ, ಓಡು ನೋಡು
ಮೂಡುತಿಹನು ದಿನಮಣಿ
ಹಚ್ಚನೆ ಹಸುರ ಬಯಲು ಮೇಲೆ
ಮಿರುಗುತಿಹವು ಹಿಮಮಣಿ
ಸಗ್ಗದ ಸಿರಿಯೆ ನೆಲಕೆ ಬಿದ್ದು
ಹುಡಿ ಹುಡಿ ಹುಡಿಯಾಗಿದೆ !

ಕವಿಯ ಪಾಲಿಗೆ

ಬುವಿಯ ಬಾಳು ಸಂತೋಷಕೆ
ಕಿಡಿ ಕಿಡಿ ಕಿಡಿಹೋಗಿದೆ !

ಇಂದ್ರದಿಗಂತದಿ (ಪಕ್ಷಿಕಾಶಿ - ೧೯೪೬)

'ಇಂದ್ರ ದಿಗಂತದಿ' (ಪಕ್ಷಿಕಾಶಿ - ೧೯೪೬) ಎಂಬ ಕವಿತೆ ಸೂರ್ಯೋದಯ ಆಗುವ ಮುಂಚೆ ಪೇಗೆ ಪೂರ್ವದಿಕ್ಕು ಇಂದ್ರದಿಗಂತದಂತೆ ಕಂಡು ಸ್ವರ್ಗದ ದ್ವಾರದಂತೆ ಕಾಣುವುದು. ಲೋಕಕ್ಕೆ ಈ ಅರುಣನು ಓಕುಳಿಯ ಎರಚಿ ಎಲ್ಲರು ಲೋಕವನ್ನು ಮೋಹಿಸುವಂತೆ ಮಾಡಿದ್ದಾರೆ.

ಇಂದ್ರ ದಿಗಂತದಿ ದೂರಾದ್ದುರಂ
ಪ್ರಾತಃ ಸ್ವರ್ಗದ ಸ್ವರ್ಣದ್ವಾರಂ
ನೋಡದೊ ತೆರೆಯುತಿದೆ
ಲೋಕದ ನಯನಕ್ಕೋಕುಳಿಯೆರಚುತೆ
ಮೋಹಿಸಿ ಕರೆಯುತಿದೆ

ಮೂಡುವಾಗ ಮುಗಿಲಿನ ಬೂದಿಯ ಬಣ್ಣವನ್ನು ಅಳಿಸಿ ಕುಂಕುಮ ಬಣ್ಣವನ್ನು ಲೇಪಿಸುತ್ತ ('ಮಳೆಬಿಲ್' ಎಂಬುದು ಕುವೆಂಪು ಅವರು ಕಾಮನಬಿಲ್ಲಿಗೆ ಸಂವಾದಿಯಾಗಿ ಟಂಕ್ಕಿಸಿರುವ ಹೊಸ ಸೃಷ್ಟಿ) ಈ ಕಾಮನಬಿಲ್ಲನ್ನು ನೇಯುತ್ತ, ಹೊನ್ನಿನತೊರೆಯನ್ನ ಹರಿಸುತ್ತ ಆ ತೊರೆಯಲ್ಲಿ ಮಿಂದು ತನ್ನ ಮೈಯನ್ನು 'ಕಾಸಿದ ಚಿನ್ನದ ಪುತ್ಥಳಿ' ಯಂತೆ ಮಾಡಿಕೊಂಡು ಬರುವಾಗ ಕವಿಯು ಮೈಮರೆಯುತ್ತಾನೆ. ಕವಿಗೆ ಈ ದೃಶ್ಯ ಪ್ರತಿದಿನವೂ ಹೊಸ ಹೊಸದಾಗಿಯೇ ಕಾಣುತ್ತದೆ.

ಉಷೆಯೀ ವೈಭವ ದೃಶ್ಯವ ಹೀರಿ
ಸಂದಿಹನೆನಿತೊ ಸಾವಿರಸಾರಿ
ಚೆಂದುಟಿ ಜೇನಂತೆ
ನಲಿದುಹುದದೆ ಇಂತೇ ಪ್ರತಿಸಲವೂ

ಅದೆ ಮೊದಲೆಂಬಂತೆ ಹೊಸ ಹೊಸ ಅನುಭವವಾಗುತ್ತಿರುವುದರಿಂದ ಕವಿಗೆ ಈ ರೀತಿ ಅನ್ನಿಸಲು ಕಾರಣವಾಗಿದೆ.

ಪ್ರಕೃತಿ ಉಪಾಸನೆ (ಪಕ್ಷಿಕಾಶಿ - ೧೯೪೬)

ಸೂರ್ಯೋದಯವಾಗುವುದಕ್ಕಿಂತ ಮುಂಚೆ ಕವಿಯೇ ಉದಯವನ್ನ ಕಾಣಲು "ಪ್ರಿಯನೆ ಪ್ರೇಯಸಿನಿಡುಬಯಸು ವಂದದಲಿ" ಕಾಯುತ್ತ ನಿಂತಂತೆ ನಿಲ್ಲುತ್ತಾರೆ.

ಬೆಟ್ಟದುದಿಯಲಿ ಗುಡಿಯ ಗೋಪುರಂ ನಿಂತಂತೆ
ನಿಂತೆ ನಾಂ ನೀರ್ಮನೆಯ ದಿಬ್ಬದಲಿ ದೃಷ್ಟಿಯಿಂ
ಸೃಷ್ಟಿಯಂ ತಬ್ಬಿ, ಮೇಣಾತ್ಮಭಾವದಿ ಹಬ್ಬಿ
ಭೂವ್ಯೋಮವೆಲ್ಲಮಂ

ಕವಿಯ ಮನೋಧರ್ಮದ ಅಲೌಕಿಕತೆಯು ಗೋಚರವಾಗುತ್ತದೆ.

"ದೇವೇಂದ್ರ ದಿಕ್ಕು" ಎಂಬ ಮಾತು ಸೂರ್ಯೋದಯದ ಮಹೋಜ್ವಲವರ್ಣ ವೈಭವವನ್ನೆಲ್ಲ ಧ್ವನಿಸುತ್ತದೆ. ಇಂದ್ರ ದಿಕ್ಕೆಂದರೆ ಪೂರ್ವವೆಂಬುದು ಶಬ್ದಕೋಶದಲ್ಲಿರುವ ವಾಚ್ಯಾರ್ಥ. ಆದರೆ ಅದನ್ನು ದ್ವನಿಪೂರ್ವಕವಾಗಿ

ಸಾರ್ಥಕವಾಗಿರುವ ಕುವೆಂಪು ಎರಡು ಮೂರು ಕಡೆ ಬಳಸಿಕೊಂಡಿದ್ದಾರೆ. ಮೂಡುವಾಗ ಅವನ ವೈರವಾಸ್ತವ್ಯವನ್ನು ಬಹಳ ಚೆನ್ನಾಗಿ ಗುರುತಿಸಿದ್ದಾರೆ. ಕಿರಣವಿಲ್ಲದ ಅರ್ಧಬಿಂಬದ ದಿವಾಕರಂ ಕುಂಕುಮದ ಹೊಳೆಯಿಂದ ಮಿಂದು ಬಂದಂತೆ ಮೈಯ್ಯಾನು ಮೈ ಕೆಂಪುಗಟ್ಟಿದೆ. ಬರಿ ಕುಂಕುಮದ ಹೊಳೆಯಿಂದ ಮಿಂದು ಬರುವುದಷ್ಟೇ ಅಲ್ಲ ಯಜ್ಞಕುಂಡದಿಂದ ಎದ್ದ "ಕೆಂಡದೇವತೆ" ಅಗ್ನಿದೇವನಂತೆ ಬರುವನು. ಕಮ್ಮಾರನ ಕುಲುಮೆಯಲ್ಲಿ ಕಾದು ಕಬ್ಬಿಣದ ಉಂಡೆಯ ಚೆಂಡಿನಂತೆ ಕತ್ತಲಲ್ಲಿ ಕತ್ತರಿಸಿದುರಿಯ ವರ್ತುಲದಂತೆ ಎಂಬ ಉಪಮೇಯು ಸರಿಯಾಗಿ ಹೊಂದಿಕೆಯಾಗಿದೆ. ಇಂತಹ ದೃಶ್ಯವನ್ನು ನೋಡುತ್ತಾ ಕುಳಿತ ಕವಿ ಮೈಮರೆತು ಪರವಶರಾಗಿ

ಮಿಂಚು ಹರಿದಂತೆ ನೆತ್ತರು ಚಿಮ್ಮಿ ದೇಹದಲಿ
ತೇಜಸ್ವಿಯಾದೆ ನಾಂ ಸೂರ್ಯನಂತೆ

ಎಂದು ಕವಿಯೇ ಸೂರ್ಯನಂತಾಗಿದ್ದಾರೆ. ಅಷ್ಟೇ ಅಲ್ಲ ಸೂರ್ಯನ ದಿಕ್ಕು ಕವಿಗೆ ದೇಗುಲದಂತಾಗಿ ಸೂರ್ಯನೇ ಭಗವಂತನಾಗಿ ಗೋಚರನಾಗುತ್ತಾನೆ. ಹಾಗಾಗಿ ಲೋಕದಲ್ಲೆಲ್ಲ ಸುಂದರವಾದ ಗುಡಿ ಈ ಸೂರ್ಯನಿರುವ ಗುಡಿ ಎಂದು ಎದೆ ತಟ್ಟಿ ಸಾರಿದ್ದಾರೆ.

ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ ? ಮೇಣಾವ
ವಿಗ್ರಹಂ ಮೀರಿರುವುದೀ ಚೈತ್ರ ಪಂಚಮಿಯ
ಪುಣ್ಯ ಪ್ರಭಾತದಲಿ, ದೂರದ ದಿಗಂತದಿಂ
ಪ್ರತ್ಯಕ್ಷವಾಗಿರುವ ಭವ್ಯ ಸುಂದರ ದಿವ್ಯ
ಸೂರ್ಯದೇವನಿಗೆ ?

"ಪ್ರಕೃತಿ ಉಪಾಸನೆ ಮಾಡ ಹೊರಟ ಕವಿ ಚೈತ್ರ ಪಂಚಮಿಯ ಸೂರ್ಯೋದಯವನ್ನು ಕಂಡೊಡನೆ ಇನ್ನಿತರರು ನನ್ನಂತೆಯೇ ಏಕೆ ಈ ಆನಂದದಲ್ಲಿ ಪಾಲ್ಗೊಳ್ಳಬಾರದು ಎಂದು ಕಾತರಿಸುತ್ತ ನಗರದ ಶ್ರೀಮಂತರು ಹಾಗೂ ಬಡವರ ನಿತ್ಯ ಜೀವನದ ಕಡೆಗೆ ಮನಸ್ಸು ಹರಿಸುತ್ತಾರೆ. ಅವರ ಹೇಸಿಕೆಯ ಬಾಳಿಗೆ ಅಸಹ್ಯಪಡುವ ಕವಿ ಇದ್ದಾಗ ದಿನ ಪ್ರಕೃತಿಯ ಮಡಿಲಿನಲ್ಲಿ ಸಂತೃಪ್ತಿಯ ಬಾಳುವೆ ನಡೆಸಬಾರದೇಕೆ ಎಂದು ಪ್ರಶ್ನಿಸಿದ್ದಾರೆ."[೧೪]

ಹಿಮಮಣಿ (ಪಕ್ಷಿಕಾಶಿ - ೧೯೪೬)

ಕವಿ ತನ್ನ ಜೊತೆಗೋರ್ವ ರಸಿಕನನ್ನ ಕರೆದುಕೊಂಡು ಸ್ವರ್ಗವನ್ನೇ ಬೇಟೆಯಾಡಲು ಹೊರಟರಂತೆ. ಹಿಂದಿನ ರಾತ್ರಿ ಮಳೆ ಹೊಯ್ದು ನೆಲ ತಂಪಾಗಿದ್ದಾಗ ಸೂರ್ಯನು ಸುಂದರ ಮರೀಚಿಯಲ್ಲಿ ಮಿಂದು, ಹುಲುಹಾಸಿಗೆಯ ಮೇಲೆಲ್ಲ ಸಾವಿರಾರು ಹಿಮಮಣಿಗಳನ್ನು ಚೆಲ್ಲಿದ್ದಾನೆ. ಅವುಗಳೆಲ್ಲ ಸಾವಿರಾರು ಹಣತೆಗಳಂತೆ ಸೂರ್ಯನ ಕಿರಣದ ಪ್ರತಿಬಿಂಬದಿಂದ ಗೋಚರಿತವಾಗುತ್ತಿವೆ.

---

೧೪. ಭೈರವಮೂರ್ತಿ, ಕವಿಶೈಲ, ಕನ್ನಡ ಸಂಘ, ಮಹಾರಾಜ ಕಾಲೇಜು, ಮೈಸೂರು, ಪುಟ. ೯೯

ಈ ದೃಶ್ಯವನ್ನು ತಾನೊಬ್ಬನೆ ಸವಿಯದೆ ಇತರರು ಕೂಡು ಇದರ ಸೌಂದರ್ಯವನ್ನು ಸವಿಯಬೇಕು ಎಂದು ಕವಿಯ ಮನೋಭಿಲಾಷೆ. ಹಾಗಾಗಿ ಕವಿ

ನಿಲ್ಲಲ್ಲಿ ದಮ್ಮಯ್ಯ ನಿಲ್ಲಲ್ಲಿ ! ಕಾಲವೋ
ದೇಶವೂ ಸಂಧಿಸುವ "ಈಗಿಲ್ಲಿ"ಸ್ವರ್ಗವೈ
ಈ ಸ್ಥಳ "ಈಗಿಲ್ಲಿ"! ನಿಂತಿಲ್ಲಿ ನಿಂತೀಗ ನೋಡಲ್ಲಿ.

ಎಂದು ಸೂರ್ಯಭಗವಾನ ಭವ್ಯತೆಯನ್ನ ಹಾಗೂ ಪ್ರಕೃಯೆಯಲ್ಲಿ ಆಗುವ ಬದಲಾವಣೆಗಳನ್ನು ಕಂಡು ಕವಿ ಹರ್ಷದಾಳಿರುವುದನ್ನ ಪ್ರಾಕೃತಿಕ ಚಟುವಟಿಕೆಗಳಲ್ಲಿ ಸೂರ್ಯೋದಯದ ಶೀರ್ಷಿಕೆಯಡಿಯಲ್ಲಿ ಕವನಗಳು ವ್ಯಕ್ತವಾಗಿರುವುದನ್ನ ಆಂಶಿಕವಾಗಿ ವಿವರಿಸಲಾಗಿದೆ.

ಋತುಮಾನ ಬದಲಾವಣೆಯ ಸೂರ್ಯೋದಯ ಕವನಗಳು

"ಬಾ ಫಾಲ್ಗುಣ ರವಿ ದರ್ಶನಕೆ (ಪಕ್ಷಿಕಾಶಿ ೧೯೪೬)

"ಬಾ ಫಾಲ್ಗುಣ ರವಿ ದರ್ಶನಕೆ" ಕುವೆಂಪು ಅವರ ಒಂದು ಅಪೂರ್ವಸಿದ್ಧಿ "ಬಾ ಫಾಲ್ಗುಣ ರವಿ ದರ್ಶನಕೆ" ಎಂಬ ಕವನ ಸೃಷ್ಟಿ. ಹದಿನಾಲ್ಕೇ ಪಂಕ್ತಿಗಳು ಕವನದಲ್ಲಿ. ಭಾವಗೀತೆಯ ಶಕ್ತಿ, ಸೌಂದರ್ಯಗಳನ್ನು ಪೋಷಿಸುವ ಒಂದು ಪ್ರಮುಖ ಲಕ್ಷಣವಾದ "ಅದೀರ್ಘತೆ" ಎಂಬುದು ಎಂತಹ ಅದ್ಭುತ ಪರಿಣಾಮವನ್ನು ಉಂಟುಮಾಡಬಲ್ಲದು"[೧೩೪]. ಕವನ ಹೀಗಿದೆ ಎಂಬುದನ್ನು ಈ ಕವನದಲ್ಲಿ ಕಾಣಬಹುದು.

ಶಿವಮಂದಿರ ಸಮ ವನ ಸುಂದರಸಮ ಶೃಂಗಾರದ ಗಿರಿಶೃಂಗಕೆ ಬಾ ;
ಬಾ ಫಾಲ್ಗುಣ ರವಿದರ್ಶನಕೆ !

ಕುಂಕುಮ ಧೂಳಿಯ ದಿಕ್ತಟ ವೇದಿಕೆಯೊಳೋಕುಳಿಯಲ್ಲಿ ಮಿಂದೇಳವನು ;
ಕೋಟವಿಹಂಗಮ ಮಂಗಲರವ ರಸನೈವೇದ್ಯಕೆ ಮುದ ತಾಳುವನು ;
ಚಿನ್ನದ ಚೆಂಡನೆ ಮೂಡುವನು ; ಹೊನ್ನಿನ ಹೊಯ್ ನೀರ್ ನೀಡುವನು
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆ ಹರಿಯಿಸಿ ರವಿ ದಯಮಾಡುವನು

ತೆರೆ ತೆರೆಯಾಗಿಹ ನೂರೆ ನೋರೆ ಕಡಲೆನೆ ನೋಡುವ ಕಣ್ನೋಡುವವರೆಗೆ
ಬನಸಿರಿ ತುಂಬಿದ ಕಣಿವೆಯ ಹಂಬಿರೆ ಧೂಳೀ ಸಮ ಹಿಮಬಾನ್ ಕರೆಗೆ
ಪ್ರತಿಭೆಯ ಹೋಮಾಗ್ನಿಯ ಮೇಲೆ ಕವಿಮನ ತಾನುರಿದುರಿದೇಳೆ
ಮರಗಿಡದಲಿ ಜಡೆಮೊಡಲಲಿ ಇದೆಕೋ ಸ್ಪಂದಿಸುತಿದೆ ಭಾವಜ್ವಾಲೆ

ವರ್ಣನದಿಂದ್ರಿಯ ನಂದನವನು ದಾಟುತೆ ದರ್ಶನ ಮುಕ್ತಿಯ ಸೇರಿ
ವ್ಯಕ್ತಿತೆ ಮೈಮರೆವುದು ಸೌಂದರ್ಯ ಸಮಾಧಿಯೊಳಾನಂದವ ಹೀರಿ
ಸರ್ವೇಂದ್ರಿಯ ಸುಖನಿಧಿ ಅಲ್ಲಿ, ಸರ್ವಾತ್ಮನ ಸನ್ನಿಧಿ ಅಲ್ಲಿ
ಸಕಲಾರಾಧನ ಸಾಧನ ಬೋಧನದನುಭವರಸ ತಾನಹುದಲ್ಲಿ !

"ಕುವೆಂಪುರವರ ಆತ್ಮೀಯ ಗುರುಗಳೂ ಕನ್ನಡ ಅಶ್ವಿನೀ ದೇವತೆಗಳಲ್ಲಿ ಒಬ್ಬರೂ ಆದ ಪ್ರಾಧ್ಯಾಪಕ ಟಿ. ಎಸ್. ವೆಂಕಣ್ಣಯ್ಯನವರು ಈ ಕವನವನ್ನು ಕುವೆಂಪು ಅವರಿಂದ ಓದಿಸಿ ಕೇಳಿ ಧಿಗ್ಗನೆ ಎದ್ದು ನಿಂತು ಭಾವಾವಿಷ್ಟರಾಗಿ "ಹೇಳಯ್ಯ ಪುಟ್ಟಪ್ಪ ಹೇಳು, ಜಗತ್ತಿನ ಯಾವ ಸಾಹಿತ್ಯದಲ್ಲಿದೆ. ಇಂಥ ಕವನ ಎಂದು ಗಟ್ಟಿಯಾಗಿ ಸವಾಲಿನ ರೀತಿಯಲ್ಲಿ ಹೇಳಿದರಂತೆ"[೧೩೫].

೧೩೪ ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೬೬ ಪು. ೨೩೯
೧೩೫ ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೬೬. ಪು. ೨೪೦

ಈ ಕವನ ಕವಿಯ ವಿಶಿಷ್ಟ ಪರಿಭಾವನೆಗೆ ಉತ್ತಮ ಉದಾಹರಣೆ. ಕತ್ತಲಿನಲ್ಲಿ ನಿಶ್ಚೇತನಗೊಂಡಿರುವ ಸಕಲ ಜೀವರಾಶಿಯ ಜಗತ್ತು ಸೂರ್ಯನ ಉದಯದಿಂದಾಗಿ ಚೇತನ ಪಡೆಯುತ್ತವೆ. ಈ ಅಂಶವನ್ನು "ಸೃಷ್ಟಿಯ ಹೃದಯಕ್ಕೆ ಪ್ರಾಣಾಗ್ನಿಯ ಹೊಳೆ" ಹರಿಯಿಸುವನೆಂಬ ಕಲ್ಪನೆ ಸಮರ್ಥವಾಗಿ ಹಿಡಿದಿಟ್ಟಿದೆ.

ಕವನದ ಎರಡನೆಯ ಭಾಗದಲ್ಲಿ ಯಜ್ಞದ ಪರಿಕಲ್ಪನೆಯಿದೆ. ದೃಷ್ಟಿ ಹರಿಯುವವರೆಗೆ, ಹರಡಿರುವ ಬನಸಿರಿಯು ಸಮುದ್ರದಂತೆಯು ಬೀಸುವ ಗಾಳಿಯಿಂದ ಅಲುಗುವ ರೆಂಬೆಕೊಂಬೆ ಎಲೆಹೂವುಗಳು ಸಮುದ್ರದಲ್ಲಿ ತೆರೆಗಳು, ಏಳುವಂತೆಯೂ ಭಾಸವಾಗುತ್ತಿದೆ. ಈ ಸೊಬಗನ್ನು ಕಂಡ ಕವಿಮನ "ಪ್ರತಿಭೆಯ ಹೋಮಾಗ್ನಿಯ ಮೇಲೆ" ಉರಿದೇಳುತ್ತದೆ. ಪ್ರಕೃತಿ ಸೌಂದರ್ಯ ಕವಿ ಪ್ರತಿಭೆಗೆ ಕಿಡಿ ಹೊತ್ತಿಸಿ ಇಡೀ ಕಾಡಿನ "ಮರಗಿಡದಲ್ಲಿ ಜಡದೊಡಲಲ್ಲಿ" "ಭಾವಜ್ವಾಲೆ" ಸ್ಪಂದಿಸುವಂತೆ ಮಾಡಿದೆ. ಇಂತಹ ಸೌಂದರ್ಯಾನುಭವ ಇಂದ್ರಿಯಾನುಭವಗಳನ್ನು ಮೀರಿ ಇಂದ್ರಿಯಾತೀತ ದರ್ಶನ ಮುಕ್ತಿಯನ್ನು ಸೇರಿ "ಸೌಂದರ್ಯ ಸಮಾಧಿಯೊಳಾನಂದವ" ಹೀರುವಂತೆ ಮಾಡಿದೆ. ಒಟ್ಟಿನಲ್ಲಿ ಪ್ರಸ್ತುತ ಪ್ರಬಂಧಕ್ಕೆ ಸಂಬಂಧಿಸಿದ್ದು ಮೇಲಿನಪಂಕ್ತಿಗಳಲ್ಲಿ ಹೆಚ್ಚು.

"ಸೂರ್ಯೋದಯವು ದಿವ್ಯಕ್ರಿಯೆಯ ಯಜ್ಞವೊಂದರ ಮಂಗಳ ಚಿತ್ರವನ್ನು ಮನಸ್ಸಿಗೆ ತರುತ್ತದೆ. ಕುಂಕುಮ ಧೂಳಿಯ ದಿಕ್ತಟವೇದಿ ಎನ್ನುವ ಮಾತಿನಲ್ಲಿ ಅದು ಧ್ವನಿತವಾಗುತ್ತದೆ. ಮುಂಬೆಳಕಿನ ಕೆಂಪು ದಿಗಂತವನ್ನು ವ್ಯಾಪಿಸಿ ಕುಂಕುಮ ಧೂಳಿಯನ್ನು ರಚಿಸಿದೆ. "ಆ ವೇದಿ"ಯಿಂದ ಓಕುಳಿಯಲ್ಲಿ ಮಿಂದ ಬಾಲರವಿ ಉದಯಿಸುತ್ತಿದ್ದಾನೆ. ಕೋಟ್ಯಂತರ ಪಕ್ಷಿಗಳ ಮಂಗಳಧ್ವನಿ ರವಿಯುದಯಕ್ಕೆ ಸಮರ್ಪಿತವಾದ ರಸನೈವೇದ್ಯ. ಆ ರಸನೈವೇದ್ಯವನ್ನು ಸ್ವೀಕರಿಸಿ ರವಿ ಮುದತಾಳಿದ್ದಾನೆ. ಹೊನ್ನನ್ನೇ ಹರಿಸಿ ಚಿನ್ನದ ಚೆಂಡಿನಂತೆ ರವಿ ಮೂಡುತ್ತಿದ್ದಾನೆ" [೧೭].

ಶರತ್ಕಾಲದ ಸೂರ್ಯೋದಯದಲಿ" (ಪಕ್ಷಿಕಾಶಿ - ೧೯೪೬)

ಶರತ್ಕಾಲದ ಒಂದು ಬೆಳಗಿನಲ್ಲಿ ಕವಿ ಪ್ರಕೃತಿಸೌಂದರ್ಯದ ಆಸ್ವಾದನೆಗೆ ಹೊರ ಹೊರಟಿದ್ದಾರೆ. ಹೊಂಗದಿರ್ಗಳ ಮಳೆ ಸುರಿದು, ಬಂಗಾರದ ಹೊಳೆ ಹರಿದು ಭೂಮಿ ಸ್ವರ್ಗದಂತೆ ಕವಿಗೆ ಭಾಸವಾಗಿದೆ. ಹಚ್ಚನೆಯ ಹಸಿರು, ಹಾಸಿಗೆಯಂತೆ ಹಾಸಿದ ಹುಲ್ಲಿನ ಮೇಲೆ ಬಿದ್ದ ಇಬ್ಬನಿರಾಶಿಯಲ್ಲಿ ಸೂರ್ಯ ಪ್ರತಿಬಿಂಬಿಸಿ "ಉಡಿ-ಕಿಡಿ, ಕಿಡಿ-ಉರಿ"ಯಂತೆ ಕಾಣುತ್ತಿದೆ. ಇದನ್ನು ಕವಿ ಸುಂದರವಾದ ಹೋಲಿಕೆಯೊಂದರಲ್ಲಿ ಹಿಡಿದಿಟ್ಟಿದ್ದಾರೆ.

ಪಚ್ಚನೆ ಪಚ್ಚನೆ ವೇದಿಕೆಯಲ್ಲಿ
ಸಾವಿರಗಟ್ಟಲೆ ಮುತ್ತನು ಚೆಲ್ಲಿ
ರನ್ನದ ಕಿರುಹಣತೆಗಳಲ್ಲಿ
ಶ್ಯಾಮಲ ತೈಲದಿ ಹೊನ್ನಿನ ಬತ್ತಿ
ಕಾಮನಬಿಲ್ಲಿನ ಬೆಂಕಿಯು ಹೊತ್ತಿ
ಸೊಡರುರಿಯುತ್ತಿವೆ ಅಲ್ಲಲ್ಲಿ !

೧೭. ಪ್ರಭುಶಂಕರ ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, ೧೯೬೬, ಪು. ೩೩೯

'ಉರಿ-ಕಿಡಿ, ಕಿಡಿ-ಉರಿ' ಯಂತೆ ಕಾಣುವ ದೃಶ್ಯ ಕವಿಯಲ್ಲಿ 'ಭಾವಾವೇಶ' ಮೂಡಿಸಿ ಹೃದಯದಲ್ಲಿ ರಸಮಯ ಚಿಂತೆ ಉರಿಯುವಂತೆ ಮಾಡಿದೆ. ಇದರಿಂದಾಗಿ ಕವಿಯೂ ಹಿಮಮಣಿಯಂತೆ 'ಉಡಿ-ಕಿಡಿ'ಯಿದ್ದಾರೆ. ಇಲ್ಲಿ ಪ್ರಕಾಶಿಸುವ ಸೂರ್ಯ, ಸೂರ್ಯನನ್ನು ಪ್ರತಿಫಲಿಸುವ ಇಬ್ಬನಿ, ಇಬ್ಬನಿಯ ಸೌಂದರ್ಯಕ್ಕೆ ಪ್ರತಿಕ್ರಿಯಿಸುವ ಕವಿ ಈ ಮೂವರೂ ಮುಖ್ಯರು. ಉರಿ-ಕಿಡಿಯುವ ಇಬ್ಬನಿಯ ಸೌಂದರ್ಯವನ್ನು ಆಸ್ವಾದಿಸುತ್ತ ಕವಿ ರಸಾನುಭವ ಹೊಂದಿ

ಕಲ್ಲಿನ ಯುಗಯುಗದಿರವೂ ಶೂನ್ಯ
ಹುಲ್ಲಿನ ಅರೆನಿಮಿಷದ ಹನಿ ಧನ್ಯ
ತಳತಳಪುದೆ ಸಾರ್ಥಕ ಪುಣ್ಯ!

ಎಂದು ಉದ್ಗಾರ ತೆಗೆಯುತ್ತಾರೆ. ಏಕೆಂದರೆ, ಇಲ್ಲಿ ಇಬ್ಬನಿಯದು ಸಾರ್ಥಕ ಬದುಕು. ಕಲ್ಲು ಯುಗಯುಗಗಳಿಂದ ಜಡವಾಗೇ ಇರುವುದರಿಂದ ; ಅದರ ಬದುಕು 'ಶೂನ್ಯ' ವಾಗಿಯೂ ಇಬ್ಬನಿ ಅರೆನಿಮಿಷವೇ ಇದ್ದರೂ ಚೈತನ್ಯ ಪಡೆದಿರುವುದರಿಂದ 'ಧನ್ಯ' ವಾಗಿಯೂ ಇಲ್ಲಿ ಪರಿಭಾವಿತವಾಗಿದೆ. ಭಾವುಕನಾದ ಕವಿ ಅನಂತರ ಚಿಂತನೆಗೆ ತೊಡಗಿ ಜೀವಿಗಳಲ್ಲಷ್ಟೇ ಅಲ್ಲ ಜಡದಲ್ಲಿಯೂ ಚೇತನವನ್ನು ಕಾಣುತ್ತಾರೆ.

ಕಲ್ಲಲಿ ಮಣ್ಣಲಿ ಹುಲ್ಲಲಿ, ಹುಡಿಯಲಿ
ನೀರಿನ ಹನಿಯಲಿ ಬೆಂಕಿಯ ಕಿಡಿಯಲಿ
ನನ್ನಲಿ ಎಲ್ಲಿಯು ಚೈತನ್ಯ !

ಎಲ್ಲೆಲ್ಲಿಯೂ ಇಂತಹ ಚೈತನ್ನ ತೋರುವುದಕ್ಕೆ ಮೂಲ ಕಾರಣ 'ಪ್ರೀತಿ' ಪ್ರಕೃತಿಯ ಸಮಸ್ತವೂ ಕವಿಯ ಪ್ರೀತಿಗೆ ಪಾತ್ರವಾಗಿವೆ.

ಹನಿಯನು ನಾನಭವಿಸುವ ಪ್ರೀತಿ
ಆ ಹನಿ ನನ್ನನ್ನು ರಮಿಸುವ ರೀತಿ

ಎಂಬ ಸಾಲುಗಳು ಪ್ರೇಮದ ಸಂಕೇತ. ಕಾಲಡಿಯನ್ನೂ ಸೋಂಕುತಿಹ ಹುಲ್ಲು, ಪ್ರೀತಿಯ ಮುತ್ತಿಗೆ ಹಾತೊರೆಯುವ ಪ್ರೇಯಸಿ, ಹೀಗೆ ಪ್ರೀತಿ ತುಂಬಿದ ಹೃದಯಕ್ಕೆ ಸಮಸ್ತವೂ ಚೇತನ ರೂಪವಾಗಿ, ಆನಂದಮಯವಾಗಿ, ಗೋಚರವಾಗುತ್ತದೆ ಎಂಬ ದರ್ಶನ ಕವಿಯದು.

"ಭಾದ್ರಪದ ಸುಪ್ರಭಾತ" (ಪಕ್ಷಿಕಾಶಿ - ೧೯೪೮)

ಭಾದ್ರಪದ ಮಾಸದ ಸೂರ್ಯೋದಯವನ್ನ ಕವಿ ಕುವೆಂಪು ಅವರು ಕವನಸಂಕಲನದಲ್ಲಿ ಹೀಗೆ ವರ್ಣಿಸಿದ್ದಾರೆ.

ದಿಗುತಟದಲ್ಲಿ ತೆರೆಯುತಿತ್ತು
ಹಗಲಿನಕ್ಷಿ
ಮುಗಿಲ ಗರಿಯ ಕಾಯಿಸಿತ್ತು
ಗಗನಪಕ್ಷಿ
ಪಚ್ಚೆಯಾಗಿ ಮೆರೆಯುತ್ತಿತ್ತು

ಬುವಿಯ ಮಣ್ಣು

ಪಸುರ ಸಿರಿಯ ಮೇಯುತ್ತಿತ್ತು

ಕವಿಯ ಕಣ್ಣು

ಆ ದೃಶ್ಯದ ಮೋಹಕತೆಯನ್ನು, ಸವಿಯನ್ನು ಕವಿ ಬಣ್ಣಿಸುತ್ತ, ಕವಿಯ ಕಣ್ಣು ಹಸುರುಸಿರಿಯನ್ನು ಮೇಯುತ್ತಿರುವ ರಸಮಯ ಸನ್ನಿವೇಶದ ಭಾದ್ರಪದ ಮಾಸದ ವರ್ಣನೆಯಿದೆ.

ಜೇನು ತುಪ್ಪದಲ್ಲಿ ತೊಯ್ದ

ಹಣ್ಣಿನಂತೆ

ಪೊಸ ಚೆಲ್ವಿನ ಬಲೆಯ ನೆಯ್ದ

ಹೆಣ್ಣಿನಂತೆ

ಜೇನುತುಪ್ಪ ಅದ್ದಿದ ಹಣ್ಣಿನಂತೆ, ಹೊಸ ಚೆಲುವಿನ ಬಲೆಯನ್ನು ನೆಯ್ದು ಹೆಣ್ಣಿನಂತೆ ಸವಿಗೆ ಮತ್ತಷ್ಟು ಸವಿಯ ಸಂಯೋಗ ನಡೆಸಿತ್ತು. ಭಾದ್ರಪದ ಮಾಸ ಸೂರ್ಯ ಎಂದು ಬಣ್ಣಿಸುತ್ತಾರೆ. ಈ ಮಾಸವು "ಕವಿಗೆ ಕವಿಯ ತೋರಿಸಿತ್ತು ಸುಪ್ರಭಾತ" ಎಂದು ಕವಿಪ್ರಜ್ಞೆ ಎಚ್ಚರಗೊಳ್ಳುತ್ತದೆ. ಕವಿಯ ಸುಪ್ತಪ್ರಜ್ಞೆ ಹೊರಹೊಮ್ಮುತ್ತದೆ.

ನಿರ್ದಿಷ್ಟಸ್ಥಳ ಸಂದರ್ಭದ ಸೂರ್ಯೋದಯ ಕವನಗಳು

"ಸೂರ್ಯನ ಉದಯವು ಕವಿಯ ಹೃದಯದಲ್ಲಿ ಮೂಡಿಸಿದ ಭಾವದ ಅನುಕರಣನವೆಂತಹುದೆಂಬುದು ನಮಗೆ ಸ್ಪಷ್ಟವಾಗುತ್ತದೆ. ಮಲೆನಾಡಿನಲ್ಲಿ ನವಿಲುಕಲ್ಲಿನಲ್ಲಿ ಕಂಡ ಸೂರ್ಯೋದಯದ ಅನುಭವವೇ ಬೇರೆ. ಬಯಲುಸೀಮೆಯಲ್ಲಿ ಮೈಸೂರಿನ ಒಂಟಿಕೊಪ್ಪಲಿನ ನೀರ್ಗಿಬ್ಬದ ಮೇಲೆ ನಿಂತಾಗ ಕವಿ ಕಂಡ ಉಷಃಕಾಲದ ಕಾಣ್ಕೆಯೆ ಬೇರೆ. ಆಗ ಆದ ಅನುಭವವೇ ಬೇರೆ. ಸ್ಥಳದಿಂದ ಸ್ಥಳಕ್ಕೆ ಹೇಗೆ ಕಾಣ್ಕೆಯಲ್ಲಿ ಅಂತರವಿದೆ"[೧೮] ಎನ್ನುವುದನ್ನು ಕಾಣಬಹುದು.

ಶಿವಮೊಗ್ಗದ ತೀರ್ಥಹಳ್ಳಿಯ ಬಳಿಯ "ನವಿಲು ಕಲ್ಲಿನಲ್ಲಿ" ಕಂಡ ಬೆಳಗನ್ನ ಕುವೆಂಪು ಅವರು ಎರಡು ಕವಿತೆಗಳಲ್ಲಿ ಚಿತ್ರಿಸಿದ್ದಾರೆ. ಒಂದು "ನವಿಲುಕಲ್ಲಿನಲ್ಲಿ ಉಷಃಕಾಲ" ಮತ್ತೊಂದು "ನವಿಲುಕಲ್ಲಿನಲ್ಲಿ ಸೂರ್ಯೋದಯ" ಎರಡರ ವರ್ಣನೆಯು ಭಿನ್ನಭಿನ್ನವಾಗಿಯೇ ಇದೆ.

"ನವಿಲುಕಲ್ಲಿನಲ್ಲಿ ಉಷಃಕಾಲ" (ಕೃತ್ತಿಕೆ-೧೯೪೬) ಎಂಬ ಕವಿತೆಯಲ್ಲಿ

ದತ್ತುರಿಯ ಹೂವು, ತಾವರೆ, ಕಿತ್ತಳೆಯ ಹಣ್ಣು,
ಕೇಸರಿ, ಗುಲಾಬಿ, ಕುಂಕುಮರಂಗು ತರತರದ
ಫಲಕುಸುಮ ಸಮ ರತ್ನರಾಗ ಸುಮನೋಹರದ
ಭೋಗ ಮಂದಾಕಿನಿಯ ಪ್ರವಹಿಸುತೆ ಉಷೆವೆಣ್ಣು
ಮೂಡತಿಹಳದೊ ದೂರ ದಂತುರ ದಿಗಂಗದಲಿ

ದತ್ತುರಿಯ ಹೂವು ತಾವರೆ ಕಿತ್ತಳೆಯ ಹಣ್ಣು, ಕೇಸರಿ, ಗುಲಾಬಿ, ಕುಂಕುಮದ ಮರ ಬಣ್ಣಗಳನ್ನು ಸೂರ್ಯನ ಹೊಂಗದಿರು ಮುಡಿಸುತ್ತಿದೆ ಎಂಬ ಕಲ್ಪನೆಯೇ ಮನೋಹರವಾಗಿದೆ. ಉಷೆಯನ್ನು ಭೋಗ ಮಂದಾಕಿನಿ ಎಂದು ಪರಿಭಾವಿಸಿರುವುದು ಅರ್ಥಪೂರ್ಣವಾಗಿದೆ.

ನವಿಲುಕಲ್ಲಿನಲ್ಲಿ ಸೂರ್ಯೋದಯ (ಪಕ್ಷಿಕಾಶಿ - ೧೯೪೬)

ಶಿವಮೊಗ್ಗ ಜಿಲ್ಲೆಯಲ್ಲಿರುವ ನವಿಲುಕಲ್ಲಿನಲ್ಲಿ ಕಂಡ ಸೂರ್ಯೋದಯವು ಕವಿಗೆ ಭೂಮಿ ಮತ್ತು ವ್ಯೋಮ ಸೇರುವ ಸಂಧಿಕಾಲ ಎಂದೆನಿಸುತ್ತದೆ.

ಕತ್ತಲೆಯ ಬಸಿರಿಂದೆ ಮೆಲ್ಲಮೆಲ್ಲನೆ ಪೊರಗೆ
ಪೊಣ್ಮುತಿದೆ ಶಿಖರಕಂದರಮಯಂ ಸಹ್ಯಾದ್ರಿ
ಸ್ಪಷ್ಟತರವಾಗುತಿರೆ ಭೂವ್ಯೋಮಗಳ ಸಂಧಿ

---

೧೮. ಎಸ್. ವಿ. ಪರಮೇಶ್ವರಭಟ್ಟ, ರಸಋಷಿ ಕುವೆಂಪು, ಪ್ರಸಾರಾಂಗ, ಮೈ.ವಿ.ವಿ. ೧೯೯೫, ಪು.೫೦

ಇದನ್ನು ಕಂಡು ಕವಿ ರಸಾನುಭೂತಿಯಿಂದ ಭಾವ ಜಲಪಾತಕ್ಕೆ ಧುಮುಕಿದ್ದಾರೆ. ಭಾವದ ಜಲಪಾತದ ಆವೇಶವೇ ಅಧಿಕವಾಗಿರುವಾಗ ಕವಿಯ ವಾಣಿ ನಿಂತಿದೆ. ಕವಿ ಮೂಕನಾಗಿ ಸೌಂದರ್ಯದ ಆರಾಧಕರಾಗಿದ್ದಾರೆ. ಬಣ್ಣಬಣ್ಣಗಳ ದಿಬ್ಬಣದಲ್ಲಿ ಅಪ್ಸರಿಯರೊಡಗೂಡಿ ದೇವತೆಗಳೆಲ್ಲರೂ ಸೇರಿರುವ ಆ ದಿಬ್ಬಣವನ್ನ ನೋಡಿ ಕವಿ ಪರವಶರಾಗಿ

ಹೃದಯ ಪ್ರತಾಪಕ್ಕೆ ಧುಮುಕುತಿದೆ ರಸದ ಧುನಿ
ಭಾವಜಲಪಾತದಿಂದ ಮೌನವೆ ಮಹಾಸ್ತೋತ್ರಂ
ಈ ಭೂಮ ಭವ್ಯ ಸೌಂದರ್ಯಧಾರಾಧನೆಗೆ

ಈ ಸೌಂದರ್ಯ ಮಾತಿಗೆ ನಿಲುಕದು ಅದನ್ನು ಏನಿದ್ದರೂ ನೋಡಿ ಕಣ್ ತುಂಬಿಕೊಂಡು ಮೌನದಿಂದ ಆರಾಧಿಸು ಎನ್ನುತ್ತಿದ್ದಾರೆ.

ನೋಡು, ಸುಮ್ಮನೆ ನೋಡು,
ದೃಶ್ಯದಲಿ ತಲ್ಲೀನನಪ್ಪನ್ನೆಗಂ ನೋಡು!

ಈ ಸಂದರ್ಭದಲ್ಲಿ ಅದರೊಳೊಂದಾಗುವುದೆ ಪರಮ ರಸಿಕತೆ ಎಂಬ ಭಾವ ತಳೆಯುತ್ತಾರೆ.

ಹೀಗೆ ಮಲೆಯನಾಡಿನಲ್ಲಿ ನವಿಲುಕಲ್ಲಿನಲ್ಲಿ ಕಂಡ ಸೂರ್ಯೋದಯದ ಅನುಭವ ಬೇರೆ. ಬಯಲುಸೀಮೆಯಲ್ಲಿ ಮೈಸೂರಿನ ಒಂಟಿಕೊಪ್ಪಲಿನ ನೀರ್ಬಿಬ್ಬದ ಮೇಲೆ ನಿಂತಾಗ ಕವಿ ಕಂಡ ಉಷಃಕಾಲದ ಕಾಣ್ಕೆಯೇ ಬೇರೆ. ಆಗ ಆದ ಅನುಭವವೇ ಬೇರೆ. ಸ್ಥಳದಿಂದ ಸ್ಥಳಕ್ಕೆ ಹೀಗೆ ಕಾಣ್ಕೆಯಲ್ಲಿ ಅಂತರವಿದೆ.

ನವೀನ (ನವಿಲು - ೧೯೩೪)

ಕವಿ ಕುವೆಂಪು ಅವರು ಸೂರ್ಯೋದಯವನ್ನ ಬಳಸಿಕೊಂಡು ನವೀನ ಎಂಬ ಮತ್ತೊಂದು ಜಾಗೃತಿಗೀತೆಯನ್ನ ರಚಿಸಿದ್ದಾರೆ.

ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ

ಹೊಸರಾಷ್ಟ್ರದ ಉದಯವನ್ನು ಸೂರ್ಯೋದಯದ ಮುಖೇನ ಸಾರುತ್ತಿದ್ದಾರೆ. ಹಳೆಯಕಾಲ ಕಳೆದು, ಅರಸೊತ್ತಿಗೆ ಬಿದ್ದು ಪ್ರಜಾಪ್ರಭುತ್ವ ಎದ್ದು ಬರುತಿದೆ. 'ಇಂಚರ ಸಾಸಿರ ಪೊಣ್ಮುತಿವೆ' ಎಂಬ ಮಾತು ಮೇಲ್ನೋಟಕ್ಕೆ ಪಕ್ಷಿಗಳ ಕಲರವದಂತೆ ಕಂಡರೂ ಬೇರೆಯ ಅರ್ಥವನ್ನೇ ಹೊಂದಿದೆ. ಇದುವರೆವಿಗೂ ಬಾಯಿ ಇದ್ದರೂ ಮೂಕರಾಗಿದ್ದ ಜನ ಈಗ ಧನಿ ಎತ್ತಿದ್ದಾರೆ. ಈ ನವೀನ ಕಾಲದಲ್ಲಿ ಮೂಕನಿಗೂ ಬಾಯಿ ಬಂದಂತಾಗಿದೆ.

ಕಿವಿಕಣ್ಣಾಗುತಿದೆ
ಕಣ್ ಕಿವಿಯಾಗುತಿದೆ ಎಂದರೆ

ಇದುವರೆವಿಗೂ ಅಜ್ಞಾತಗೊಂಡಿದ್ದವರು ಜ್ಞಾತಗೊಂಡಿದ್ದಾರೆ. ಅವರನ್ನು ಕಾಣಲು ಕೇಳಲು ಇವಿಕಣ್ ಜಾಗೃತವಾಗುತ್ತಿವೆ.

ಚಿರನೂತನ ಚೇತನದುತ್ಸಾಹದಿ

ನವೀನ ಜೀವನ ಚಿಮ್ಮುತಿದೆ

ಎಂದು ಸೂರ್ಯನ ಪ್ರತಿಮೆಯನ್ನ ಇಲ್ಲಿ ಸಾಮಾಜಿಕ ನೆಲೆಗೆ ಸರಕ್ತವಾಗಿ ಮಡಿಸಿಕೊಂಡಿದ್ದಾರೆ.

ಆನಂದಮಯ ಈ ಜಗ ಹೃದಯ(ಪಕ್ಷಿಕಾಶಿ - ೧೯೪೬)

ದೈವಿಕ ಆವರಣ ಇರುವ ಕವಿತೆ "ಆನಂದಮಯ ಈ ಜಗಹೃದಯ" "ಆನಂದದಿಂದಲೇ ಈ ಪ್ರಾಣಿಗಳು ಹುಟ್ಟುತ್ತವೆ. ಹುಟ್ಟಿದವುಗಳು ಆನಂದದಿಂದಲೇ ಜೀವಿಸುತ್ತವೆ. ಆನಂದಾಭಿಮುಖವಾಗಿಯೇ ನಡೆದು ಆನಂದದಲ್ಲಿಯೇ ಲೀನವಾಗುತ್ತವೆ" ಎಂಬ ಉಪನಿಷತ್ ವಾಣಿಯ ಹಿನ್ನಲೆಯನ್ನು ಹೊಂದಿ ಜಗತ್ತಿಗೆ ಅಭಯವನ್ನು ಕವನ ಘೋಷಿಸುತ್ತದೆ. ಪ್ರಕೃತಿ ಇಲ್ಲಿ ಕವಿಗೆ ಆನಂದಮಯವಾಗಿ ಶಿವ(ಮಂಗಳ) ಮಯವಾಗಿ ಪರಿಭಾವಿತವಾಗಿದೆ.

ಆನಂದಮಯ ಈ ಜಗಹೃದಯ

ಏತಕೆ ಭಯ ? ಮಾಣೋ

ಸೂರ್ಯೋದಯ ಚಂದ್ರೋದಯ

ದೇವರ ದಯ ಕಾಣೋ

ಬಿಸಿಲು ಬರಿ ಬಿಸಿಲಾಗದೆ, ಸೂರ್ಯನ ಕೃಪೆಯಾಗಿ ರವಿವದನವೆ ಶಿವಸದನವಾಗಿ ದೇವರ 'ದಯೆ' ಸೂರ್ಯನ 'ಕೃಪೆ'ಯಿಂದ ಪೋಷಿತವಾಗಿರುವ ಜೀವಿಗೆ ಭಯದ ಹಂಗಿಲ್ಲ. ಸುಂದರವಾದ ಈ ಪ್ರಕೃತಿ ಶಿವಮಯ ಶಿವಮಯವಿಲ್ಲದ ಸೌಂದರ್ಯ ಸೌಂದರ್ಯವೇ ಅಲ್ಲ. ಶಿವನಿಲ್ಲದ ಸೌಂದರ್ಯ ಶವ ಮುಖದ ಕಣ್ಣಿನಂತೆ ನಿರುಪಯುಕ್ತ. ಕಳಾಹೀನ, ವ್ಯರ್ಥ. ಕವಿ ಸೌಂದರ್ಯೋಪಾಸಕನಾಗಿರುವುದರಿಂದ ಸೌಂದರ್ಯ ಶಿವಮಯವಾಗಿರುವುದರಿಂದ ಕಾವ್ಯ ಕೂಡ ಶಿವಮಯವಾಗಿರಬೇಕು. 'ಶಿವ ಕಾಣದೆ ಕವಿ ಕುರುಡನೋ' ಏಕೆಂದರೆ 'ಶಿವಕಾವ್ಯದ ಕಣ್ಣೋ' ಕಾವ್ಯ ಶಿವನನ್ನು ಉಳ್ಳದ್ದಾಗಿರಬೇಕೆಂಬ ಮೂಲತತ್ವ ಕೂಡ ಇಲ್ಲಿ ವ್ಯಕ್ತವಾಗಿದೆ.

"ರವಿಗೆ ಕವಿಯ ಸರಸನಿಂದೆ" (ಜೇನಾಗುವಾ-೧೯೫೨)

ಇಂತಹ ಕಾಯಕಯೋಗಿ ಎನಿಸಿರುವ ಸೂರ್ಯನನ್ನ ಕುರಿತು ಕವಿ ಕುವೆಂಪು ಅವರು "ರವಿಗೆ ಕವಿಯ ಸರಸನಿಂದೆ" ಎಂಬ ಕವಿತೆಯಂತೂ ಆತ್ಮೀಯ ಗೆಳೆಯನಿಗೆ ಬುದ್ಧಿ ಹೇಳುತಿರುವಂತೆ ಭಾಸವಾಗುತ್ತದೆ. ಕವಿ ರವಿಯ ಕರ್ತವ್ಯ ಪ್ರಜ್ಞೆ ನೋಡಿ ಆಶ್ಚರ್ಯ ಆನಂದ ಭಯ ಉಂಟಾಗಿದೆ ಎನಿಸುತ್ತದೆ. ಏಕೆಂದರೆ "ಒಂದಿನಿತು ತಡವಿಲ್ಲದೆ" ತನ್ನ ಕೆಲಸವನ್ನು ತಾನು ಜವಾಬ್ದಾರಿಯುತವಾಗಿ ನಿಭಾಯಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದಾನೆ ರವಿ. ಇವನ ಸಮಯಪಾಲನೆ ಕರ್ತವ್ಯಪ್ರಜ್ಞೆ ನೋಡಿ ಇವನು ಬ್ರಹ್ಮಚಾರಿಯಾಗಿರುವುದರಿಂದ ಈ ರೀತಿ ಕರಾರುವಕ್ಕಾಗಿ ಕೆಲಸ ಮಾಡಲು

ಸಾಧ್ಯವಾಗುತ್ತಿರುವುದು. ಏನಾದರು ಮದುವೆಯಾಗಿದ್ದರೆ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿ ಕರ್ತವ್ಯವನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿದು ಇವನ ವಿಶ್ರಾಂತಿ ಇಲ್ಲದ ದುಡಿಮೆ ಕಂಡು ಕವಿ ರವಿಗೆ

ಕೆಲಸವಲ್ಲದೆ ಬೇರೆ ಕೆಲಸವಿಲ್ಲವೆ ನಿನಗೆ ?
ಅಥವಾ ಹಿಡಿದಿದೆಯೆ ಕರ್ತವ್ಯದ ಪಿಶಾಚಿ ?
ಸ್ವಾತಂತ್ರ್ಯವಿಲ್ಲದಾ ಯಂತ್ರ ಜೀವನ ಸುಡಲಿ !

ಕವಿಯು ರವಿಯ ಬ್ರಹ್ಮಚಾರಿತನಕ್ಕೆ ಬೇಸರಪಟ್ಟುಕೊಂಡು ಈ ರೀತಿ ಹೇಳುವರು.

ಬರಿ ಬಣಗು ಬ್ರಹ್ಮಚಾರಿಯೊ ನೀನು ? ಹಾಗಿದ್ದರೆ
ಬುದ್ಧಿ ಹೇಳುವೆ ಕೇಳು, ಬೇಗನೆ ಮದುವೆಯಾಗು

ಉಷೆಯ ಊರೊಳು ಇನಿತು ತಳುವಿ ಬರಬಹುದಂತೆ ಎಂದು ಹೇಳಿ ಭೀತಿಯಿಂದ ಪಾರು ಮಾಡುತ್ತಾರೆ.

ಹೀಗೆ ಕುವೆಂಪು ಅವರು ತಮ್ಮ ಸೂರ್ಯಗೀತಗಳಲ್ಲಿ ತಾವು ಜೀವನದುದ್ದಕ್ಕೂ ನಡೆಸಿದ ಸೂರ್ಯೋಪಾಸನೆಯ ಫಲವಾಗಿ ಕಂಡುಂಡ ಸೂರ್ಯಸೌಂದರ್ಯದಿಂದಾದ ರಸಾನಂದವನ್ನು ನಮಗಾಗಿ ಕನ್ನಡಿಸಿಕೊಟ್ಟಿದ್ದಾರೆ. ಸೂರ್ಯೋದಯದ ಸಮಯದ ಪ್ರಕೃತಿಯ ವ್ಯಾಪಾರ ವಿಶೇಷ ದರ್ಶನದಿಂದ ತಮ್ಮ ಚೇತನಕ್ಕೊದಗಿದ ರಸಾನುಭವದ ಆನಂದಾತಿಶಯದ ಚಿನ್ಮೌನವನ್ನು ನಮಗಾಗಿ ಹಾಡಿ ಹೇಳಿದ್ದಾರೆ. ಒಂದೊಂದು ಉದಯದ ಕಾಣ್ಕೆಯೂ ಕವಿಗೆ ಹಬ್ಬವಾಗಿ, ಆ ಹಬ್ಬವೇ ನಮಗೆ ಕಬ್ಬವಾಗಿ ಈ ಕವನಗಳಲ್ಲಿ ಅಭಿವ್ಯಕ್ತಿ ತಳೆದಿದೆ.

ಅಧ್ಯಾಯ - ಮೂರು

ಪು.ತಿ.ನ. ಕವನಗಳಲ್ಲಿ ಸೂರ್ಯೋದಯ

* ಬಾನ್ ತಿಳಿದಿತ್ತು
* ಯದುಗಿರಿಯ ಮೌನವಿಕಾಸ
* ಉಷಃ ಕಾಲದಲ್ಲಿ
* ನವೋದಯಂ
* ಮಲೆದೇಗುಲದ ೧೦ನೆಯ ಪದ್ಯ
* ಬೆಳಕು - ಬೆರಗು
* ಸುಂದರದಿನಮುಖ

ಅಧ್ಯಾಯ ಮೂರು

ಪು.ತಿ.ನ. ಕವನಗಳಲ್ಲಿ ಸೂರ್ಯೋದಯ

ಹೊಸಗನ್ನಡ ಸಾಹಿತ್ಯದ ಹಿರಿಯ ಕವಿ ಪು.ತಿ.ನರಸಿಂಹಾಚಾರ್ಯರ ಕಾವ್ಯನಾಮ ಪು.ತಿ.ನ. ಖ್ಯಾತ ಕವಿ ಸು.ರಂ.ಎಕ್ಕುಂಡಿಯವರು ಎತ್ತಿ ತೋರಿರುವಂತೆ "ಬರಿಯ ಪ್ರತಿಭೆಯನ್ನೇ ನೆಚ್ಚಿದ ಕವಿಗಳಲ್ಲಿ ನಾವು ನೆರೆಹಾವಳಿಯ ಅನರ್ಥಗಳನ್ನು ಬೇಕಾದಷ್ಟು ಕಾಣಬಹುದು. ಆದರೆ ಪರಿಶ್ರಮಪೂರ್ವಕವಾಗಿ ಕೃತಿಗಳನ್ನು ನಿರ್ಮಿಸುವ ಶ್ರೀ ಪು.ತಿ.ನ. ಅವರಂಥ ಕವಿಗಳು ವೃಂದಾವನಗಳನ್ನು ಬೆಳಗಿಸಿ, ಬಣ್ಣದ ಲೋಕಗಳನ್ನು ನಿರ್ಮಿಸಿದ್ದಾರೆ.

ಭಾವಗೀತಗಳನ್ನು ನಿರ್ಮಿಸುವ ಕವಿಗಳಲ್ಲಿ ಅಪರೂಪವಾಗಿರುವ ದೀರ್ಘ ಚಿಂತನ ಮತ್ತು ಸಂಯಮಗಳು ಇವರ ಕಾವ್ಯತಪಸ್ಸಿನ ರಹಸ್ಯಗಳಾಗಿವೆ[೧೯]. ರಂ. ಶ್ರೀ ಮುಗಳಿಯವರ ಅಭಿಮತದಲ್ಲಿ "ಪು.ತಿ.ನ. ಅವರು ಸಾತ್ವಿಕ ಪ್ರಕೃತಿಯ, ಸೂಕ್ಷ್ಮದೃಷ್ಟಿಯ ಕವಿ, ಅವರ ಕಾವ್ಯ ವ್ಯಕ್ತಿತ್ವದಲ್ಲಿ "ಸಾತ್ವಿಕತೆಯಿಂದ ಉಂಟಾದ ವೈರುಧ್ಯದೊಡನೆ ವೇಧಕಮತಿ ಮತ್ತು ಸೂಕ್ಷ್ಮಕಲ್ಪಕತೆ" ಹೆಣೆದುಕೊಂಡಿದೆ "[೨೦].

ಜಿ. ಎಸ್. ಶಿವರುದ್ರಪ್ಪನವರು ವಿಶ್ಲೇಷಿಸಿರುವಂತೆ "ಪು.ತಿ.ನ. ಅವರಲ್ಲಿ ಚೆಲುವಿನ ಅನುಭವವನ್ನು ಕುರಿತ ಚಿಂತನಶೀಲತೆಯೇ ರಸಾನುಭವದ ಉಗಮವಾಗಿದೆ. ಪು.ತಿ.ನ. ಅವರ ಜಿಜ್ಞಾಸುವಾದ ಕವಿ. ಅವರಿಗೆ ವಸ್ತುವಿನ ಚೆಲುವು ಮನಸ್ಸಿನಲ್ಲಿ ಮೂಡುವ ಆನಂದಾನುಭವವಷ್ಟೆ ಕಾವ್ಯದ ವಸ್ತುವಲ್ಲ ; ಆನಂದಾನುಭವದ ಚಿಂತನೆಯೇ ಇವರ ಪರಿಭಾವನೆಯ ವಸ್ತು. ಹಾಗೆ ಚಿಂತನಾ ಪ್ರಸೂತವಾದ ಆನಂದಾನುಭವವೇ ಇವರ ಕೃತಿಗಳಲ್ಲಿ ಮೂರ್ತಗೊಳ್ಳುತ್ತವೆ. ಈ ಚಿಂತನೆಯಲ್ಲಿ ಬಹುಮಟ್ಟಿಗೆ ವಿಷಾದದಲ್ಲಿ ನಿಲುಗಡೆಯಾಗಿರುವಂತೆ ತೋರುತ್ತದೆ.[೨೧] "

ಪುರೋಹಿತ ತಿರುನಾರಾಯಣ ಅಯ್ಯಂಗಾರ್ ನರಸಿಂಹಾಚಾರ್ ಅವರು, ಶ್ರೀ ವೈಷ್ಣವ ಧರ್ಮದ ತೀರ್ಥಕ್ಷೇತ್ರಗಳಲ್ಲಿ ಒಂದಾದ ಮೇಲುಕೋಟೆಯಲ್ಲಿ ನೆಲೆಸಿದ್ದ, ವೈದಿಕ ಮನೆತನಕ್ಕೆ ಸೇರಿದವರು. ಅವರ ಹಿರಿಯರು ಕೆಲವು ಶತಮಾನಗಳ ಹಿಂದೆ ತಮಿಳುನಾಡಿನ ತಿರುವಳ್ಳೂರಿನಿಂದ ಮೇಲುಕೋಟೆಗೆ ಬಂದವರು. ವೇದ, ಉಪನಿಷತ್ತು, ಆಗಮ, ತರ್ಕ, ಪುರಾಣ ಮುಂತಾದ ಹತ್ತುಹಲವು ಜ್ಞಾನ ಶಾಖೆಗಳಲ್ಲಿ ಪಾಂಡಿತ್ಯವನ್ನು ಸಂಪಾದಿಸಿದ್ದ ಶ್ರೀ ತಿರುನಾರಾಯಣ ಅಯ್ಯಂಗಾರ್ ಮತ್ತು ಗೊರೂರಿನ ಶ್ರೀರಂಗಮ್ಮ ಇವರ ಮೊದಲ ಮಗನಾಗಿ, ೧೯೦೫ರಲ್ಲಿ ಪು.ತಿ.ನ. ಜನಿಸಿದರು.

ಮೇಲುಕೋಟೆಯ ಮಾಧ್ಯಮಿಕ ಶಾಲೆಯಲ್ಲಿ ಪು.ತಿ.ನ. ಅವರ ವ್ಯಾಸಂಗ ಪ್ರಾರಂಭವಾಯಿತು. ೧೯೨೨ರಲ್ಲಿ ಎಸ್.ಎಸ್.ಎಲ್.ಸಿ., ಮೈಸೂರಿನ ಮಹಾರಾಜ ಕಾಲೇಜಿನಲ್ಲಿ, ಬಿ.ಎ., ಈ ಅವಧಿಯಲ್ಲಿ ತೀ.ನಂ.ಶ್ರೀ ಹಾಗೂ ಶಿವರಾಮಶಾಸ್ತ್ರಿಗಳ ದಟ್ಟ ಪ್ರಭಾವ ಇವರ ಮೇಲೆ ಆದರು. ೧೯೨೫ರಲ್ಲಿ ಶೇಷಮ್ಮ ಎಂಬುವರೊಡನೆ ವೈವಾಹಿಕತೆ ಜೀವನಕ್ಕೆ ಪಾದಾರ್ಪಣೆ ಮಾಡಿದರು.

ಮೊದಮೊದಲು ಗೋರಕ್ಷಕ ಸಮಿತಿಯಲ್ಲಿ ಹಂಗಾಮಿ ಗುಮಾಸ್ತರಾಗಿ, ಮೈಸೂರಿನಲ್ಲಿರುವ ಸೈನ್ಯ ಇಲಾಖೆಯಲ್ಲಿ ಆಪ್ತ ಸಹಾಯಕರಾಗಿ, ೧೯೫೮ರಲ್ಲಿ ಕಛೇರಿಯ ಮೇನೇಜರ್ ಆಗಿ ಸೂಪರಿಂಟೆಂಡೆಂಟ್ ಹುದ್ದೆಗೆ ಬಡ್ತಿ ಹೊಂದುತ್ತಾರೆ. ಶಾಸನಸಭಾ ಕಛೇರಿಯಲ್ಲಿ ಸಂಪಾದಕರಾಗಿ, ಕನ್ನಡ ವಿಶ್ವಕೋಶದ ಕಛೇರಿಯಲ್ಲಿ ಭಾಷಾಂತರಕಾರರಾಗಿ ಸಾರ್ಥಕ್ಯವಾದ ಸೇವೆಯನ್ನೆ ಸಲ್ಲಿಸಿದ್ದಾರೆ.

---

೧೯. ಸು.ರಂ. ಎಕ್ಕುಂಡಿ, ಪು.ತಿ.ನರಸಿಂಹಾಚಾರ್ಯರು, ೧೯೫೭, ಪು. ೨೬೭

೨೦. ರಂ.ಶ್ರೀ. ಮುಗುಳಿ, ಕನ್ನಡ ಸಾಹಿತ್ಯದ ಇತಿಹಾಸ, ನವದೆಹಲಿ, ೧೯೬೮, ಪು.೪೧

೨೧. ಜಿ.ಎಸ್.ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ೧೯೭೦, ಪು. ೨೯೨

ಪು.ತಿ.ನ ಅವರ ಮಾತೃಭಾಷೆ ತಮಿಳು. ಅವರು ಓದಿದ್ದು ಸಂಸ್ಕೃತ ಹಾಗೂ ಇಂಗ್ಲೀಷ್. ಆದರೆ ಅವರು ಪ್ರೀತಿಸಿದ್ದು, ಬರೆದದ್ದು ಕನ್ನಡ. ರಾಷ್ಟ್ರಕವಿ ಕುವೆಂಪು ಅವರ ಕಾವ್ಯಕ್ಕೆ ಕವಿಶೈಲ ಹೇಗೆ ಸ್ಫೂರ್ತಿಯ ತಾಣವೋ ಹಾಗೆಯೇ ಮೇಲುಕೋಟೆಯ ಯದುಗಿರಿಯ ಅಪ್ಪುಗೆಯಲ್ಲಿ ಪು.ತಿ.ನ ಅವರ ಸಾಹಿತ್ಯ ಕೃಷಿಗೊಂಡಿದೆ.

ಪು.ತಿ.ನ ಅವರಲ್ಲಿ ಸುಪ್ತವಾಗಿದ್ದ ಕವಿ ಪ್ರತಿಭೆಯನ್ನು ಕಂಡ ತೀ.ನಂ.ಶ್ರೀ.ಯವರು 'ನೀನೇಕೆ ಬರೆಯಬಾರದು' ಎಂದು ಹುರಿದುಂಬಿಸಿದರು. ಆದುದರಿಂದ ಸ್ವಯಂ ಪು.ತಿ.ನ ಅವರೇ ತೀ.ನಂ.ಶ್ರೀಯವರು ನನ್ನ ಕವಿತೆಗಳ ಸಾಕುತಾಯಿ ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ.

ಇಂತಹ ವಿಶಿಷ್ಟ ಕಾವ್ಯ ವ್ಯಕ್ತಿತ್ವ, ಸಾಹಿತ್ಯದ ಸಿದ್ಧಿಯ ಸುವಿಖ್ಯಾತ ಕವಿ ಪು.ತಿ.ನ. ಅವರು "ಹಣತೆ"ಯಿಂದ ಪ್ರಾರಂಭಿಸಿ 'ಇರುಳ ಮೆರುಗು' ವರೆವಿಗೆ ಎಂಟು ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ.

ಸೂರ್ಯೋದಯ ವರ್ಣನೆ ಇರುವ ಪದ್ಯಗಳೆಂದರೆ ಉಷಃ ಕಾಲದಲ್ಲಿ (ಮಾಂದಳಿರು-೧೯೩೬), ಎಂಬತ್ತರ ನಲುಗು (ಹಳೆಯ ಬೇರು ಹೊಸ ಚಿಗುರು-೧೯೮೮), ನವೋದಯಂ (ಮಾಂದಳಿರು, ೧೯೩೬), ಬಾನ್ ತಿಳಿದಿತು(ಹಣತೆ-೧೯೩೩), ಬಿಸಿಲು ಕಾಲದ (ಬಿಡುವಿನುಲ್ಲಾಸ -೬೭೩), ಬೇಸಿಗೆ (ಹೃದಯ ವಿಹಾರಿ-೧೯೬೦), ಮಲೆದೇಗುಲ(ಮಲೆದೇಗುಲ ೧೯೫೪), ಮುಂಜಾವದ ಕೋಗಿಲೆ (ಹಳೆಯ ಬೇರು ಹೊಸ ಚಿಗುರು (೧೯೮೧), ಮುಂಜಾವದ ಹುಂಜದ ಕೂಗು(ಎಂಬತ್ತರ ನಲುಗು-೧೯೮೮), ಯದುಗಿರಿಯ ಮೌನವಿಕಾಸ (ಹಣತೆ - ೧೯೩೩), ಸುಂದರ ದಿನಮುಖ(ಹೃದಯ ವಿಹಾರಿ - ೧೯೬೦).

ಪ್ರಸ್ತುತ ಪ್ರಬಂಧ ಸೂರ್ಯೋದಯಕ್ಕೆ ಮಾತ್ರ ಮೀಸಲಾದುದು. ಆದುದರಿಂದ ಪು.ತಿ.ನ ಕವಿತೆಗಳಲ್ಲಿ ಸೂರ್ಯೋದಯವನ್ನ ಅಥವಾ ಬೆಳಗನ್ನ ಮಾತ್ರ ಇಲ್ಲಿ ವಿವರಿಸಲಾಗಿದೆ. ಪು.ತಿ.ನ. ಅವರಿಗೆ ಅತ್ಯಂತ ಪ್ರಿಯವಾದುದು "ಇರುಳು" ಈ ಇರುಳು ಅವರ ಸಾಹಿತ್ಯದಲ್ಲಿ ದಟ್ಟವಾಗಿ ಸಿಗುತ್ತವೆ. ಆದರೆ ಬೆಳಕಿಗೆ ಮಾತ್ರ ಪು.ತಿ.ನ. ಸಾಹಿತ್ಯದಲ್ಲಿ ಬಡತನವಿದೆ ಎಂದು ಹೇಳಬೇಕಾಗುತ್ತದೆ. ಅಂದರೆ "ಇರುಳಿನ" ವರ್ಣನೆಯಷ್ಟು "ಬೆಳಕಿನ" ವರ್ಣನೆ ಇಲ್ಲ.

ಆವುದೆಮ್ಮ ಶಿವಮೊ ; ತಂದೆ
ಅದನು ಕರುಣಿಸೈ

ಎಂಬುದು ತುಂಬ ಧ್ವನಿಪೂರ್ಣ. ಚಿಂತನೆಗೆ ನಮ್ಮನ್ನ ಈ ಕವಿತೆ ತಳ್ಳುವುದು ಕಡಿಮೆ, ಆದರೆ ದೀರ್ಘ ಹೆಚ್ಚು.

ಬಾನ್ ತಿಳಿದಿತ್ತು (ಹಣತೆ - ೧೯೩೩)

ಪು.ತಿ.ನ ಅವರ ಮೊತ್ತ ಮೊದಲ ಕವನಸಂಕಲನ ಹಣತೆ ೧೯೩೩ರಲ್ಲಿ ಪ್ರಕಟವಾಯಿತು. ಕವನ ವಸ್ತು ಶರತ್ಕಾಲದ ಸುಂದರ ಪ್ರಭಾತ. ತಿಳಿಯಾದ ಆಗಸ, ಚೆಲುವಾದ ಹಗಲು ಕವಿಯ ಮನಸ್ಸನ್ನು ಸೆಳೆಯುತ್ತದೆ ರೂಪಕಗಳನ್ನು ನೇಯುತ್ತ ಕವನ ಮುಂದೆ ಸಾಗುತ್ತದೆ:

ಬಾನ್ ತಿಳಿದಿತ್ತು ಬಿಳಿ ಮುಗಿಲೋಳಿಯು
ಕೇಳಿಯ ದೋಣಿಯ ಹೋಲಿತ್ತು

ಎಂಬ ಆರಂಭದ ಸಾಲುಗಳೇ ಮೋಹಕ. ಗಣಗಣದ ಪ್ರಾರಂಭದ ದೀರ್ಘಸ್ವರಗಳು ಉತ್ಸಾಹವನ್ನೂ ಪ್ರೇಮವನ್ನೂ ಮಿಂಚಿಸುವುದಲ್ಲದೆ ಮೋಡಗಳ ಕ್ರೀಡೆಯನ್ನು ನೆನಪಿಗೆ ತರುತ್ತವೆ. ಮುಗಿಲೋಳಿಯು ಕೇಳಿಯ ದೋಣಿಯ ಮಾತುಗಳನ್ನು ನಾಲಿಗೆ ಚಪ್ಪರಿಸುತ್ತಿರುವಂತೆಯೇ ಕೈಗಳು ಸಹಜವಾಗಿ ತಾಳ ತಟ್ಟುತ್ತವೆ. ಮುಂದಿನ ಸಾಲುಗಳು

ಕಿರುಬಿಸಿಲು ಅಲ್ಲಲ್ಲಿ ಕುಳಿತ ಬೆಡಗನ್ನು ವರ್ಣಿಸುತ್ತವೆ. ಅಲ್ಲಿ ದೀರ್ಘಸ್ವರಕ್ಕೆ ಬದಲು ಅದು ಇದು ಉದು ಎಂದು ಸೂಚಿಸುವ ಚುಂಬಕಧ್ವನಿ !

ಸರಸಿಗಳಪೆಯೊಳು ಬಯಲೊಳು ಮಲೆಮೇಲ್
ಬೆಚ್ಚನೆ ಕಿರುಬಿಸಿಲೊರಗಿತ್ತು
ಹಸುರೊಳು ಹಿಮಮಣಿ ರತ್ನಜ್ಯೋತಿಗ
ಳಂಬನು ದೆಸೆದೆಸೆಗೆರಚಿತ್ತು.

ಶರದದ ಹಗಲಿನ ಸೊಬಗಿನ ಮೂರು ಮುಖ್ಯ ಸೆಳೆತಗಳನ್ನು ಈ ನುಡಿಯ ಅಂತ್ಯದಲ್ಲಿ ತಾಳಬದ್ಧವಾಗಿ ಕವಿ ಮೀಟುತ್ತಾರೆಃ

ಶರದದ ಹಗಲೊಳು ಚೆಲುವಿತ್ತು
ಬಿಡುವಿತ್ತು
ಕಳೆಯಿತ್ತು

ಎರಡನೇ ಪದ್ಯದಲ್ಲಿ ಕೊನೆಯ ಸಾಲಿನಲ್ಲೂ
ಒಲವಿತ್ತು,
ಗೆಲುವಿತ್ತು,
ನಲವಿತ್ತು

ಕಮಲಪುಷ್ಪಕ್ಕೆ ಮುತ್ತಿನ ಕಂಠಿಯೆ ಹಾರವಾಗುವ ಮಂಜಿನ ಹನಿಗಳು, ಬಳ್ಳಿಗೆ ಕಚಗುಳಿಯಿಡುವ ಕುಳಿರ್ಗಾಳಿ, ಈ ವರ್ಣನೆಗಳು ಪ್ರಣಯದ ಸಂಕೇತವಾಗಿ ಸಾರ್ಥಕವೆನಿಸುತ್ತದೆ. ಈ ಒಲವನ್ನು ದಿಕ್ಕುದಿಕ್ಕಿಗೆ ಸಾರಿ ಹೇಳುತ್ತಿವೆಯೋನೋ? ಎಂದು ಹಕ್ಕಿಗಳು ಇಂಚರಗೈಯುತ್ತಿವೆ.

ಪೊದರೊಳು ಮಳೆಯೊಳು ಕ್ರೀಡಾವನದೊಳು ಹಕ್ಕಿಯ
ಹಾಡನು ಹರಡಿತ್ತು

ಹೀಗೆ ಪ್ರಕೃತಿಯಲ್ಲಿ ಚೆಲುವಿನ ಸೂರೆ ಸೌಂದರ್ಯದ ಹುಚ್ಚು ಹೊಳೆ ಒಲವು ನಲಿವುಗಳ ಪ್ರಣಯಕೇಳಿ, ಯಾರಿಗೆ ಮತ್ತು ಹಿಡಿಸುವ ನಿಸರ್ಗದ ಮೋಹಕತೆ ಈ ಸೌಂದರ್ಯದ ಬಗೆಬಗೆಯನ್ನು ಮೆಲುಕು ಹಾಕುತ್ತಿದ್ದಾರೆ.

ಆದೊಡೆ ಪೂರ್ಣತೆಯನರಸುವ ದುಂಬಿಯ
ತೆರೆದೊಳಗೆನ್ನೆಯ ಒಲವಿತ್ತು
ಚಿಂತೆಯ ಕಾರ್ಮುಗಿಲಿರುಳೊಳಗೆನ್ನದೆ
ಬೆಳಕನು ಕಾಣಲು ತವಿಸಿತ್ತು

'ದುಂಬಿಯ ಉಪಮಾನ' ತುಂಬ ಅರ್ಥಪೂರ್ಣವಾಗಿದೆ. ಹುಡುಕಾಟ ಮತ್ತು ಅದರ ದಣಿವನ್ನು ಸೂಚಿಸುತ್ತದೆ. ಶರದದ ಹಗಲಿನ ನಡುವೆ ಕಪ್ಪು ಮೋಡ ಇರುಳಿನ ನೆನಪು. ಕವಿದ ಕತ್ತಲಲ್ಲಿ ಬೆಳಕಿನ ಹುಡುಕಾಟ ಕಟ್ಟಿಕೊಂಡ ಕನಸಿನ ಆನಂದದ ಪೂರ್ಣತೆಯನ್ನು ಪ್ರಕೃತಿಯ ಚೆಲುವೂ ಕಟ್ಟಿಕೊಡಲಾರದು. ಕವಿಯ ಮನಸ್ಸಿನಂತೆಯೇ ಪ್ರಕೃತಿಯ ಚೆಲುವೂ ಅಪೂರ್ಣ. ಈ ಕನಸು ನನಸುಗಳ ಅಂತರ, ಅದನ್ನು ಅಳೆಯಲು ಹೊರಟಾಗ ಬಾಳಿನ ಉಲ್ಲಾಸವೇ ಕುಗ್ಗಿ ಬಿಡುತ್ತದೆ. ಮನಸ್ಸಿಗೆ ಮುತ್ತುವ ವಿಷಾದವನ್ನು ಕವಿ ಚಿತ್ರಿಸುವ ಬಗೆಯಿದುಃ

ಬಾಳಿನೊಳುಲ್ಲಸ ಕುಗಿತ್ತು
ಬಲು ಕುಗ್ಗಿತ್ತು.

ಸಂತಸವನ್ನು ಅಲ್ಲಗಳೆಯುವ ಅಥವಾ ಇಲ್ಲವಾಗಿಸುವ ನಕರಾತ್ಮಕ ದರ್ಶನವಲ್ಲ. ಈ ಕವನದಲ್ಲಿಯೇ-

ಶರದವ ಗೆಲವಿನ ಹಗಲೊಳಗಿದ್ದಿತು
ನಾಕದ ನಲವಿನ ಸಂದೇಶ

ಎಂಬ ಶ್ರದ್ಧೆಯನ್ನು ಗಮನಿಸಬೇಕು. ಆನಂದದ ಅಸ್ತಿತ್ವವನ್ನು ಬಲವಾಗಿ ಒಪ್ಪಿದ ಮನಸ್ಸು pessimsitic ಆಗಿರಲು ಸಾಧ್ಯವಿಲ್ಲ. ಬಾಳಿನ ಅಪೂರ್ಣತೆಯನ್ನು ಸಾರುತ್ತಲೇ ಪರಿಪೂರ್ಣತೆಯ ಹಂಬಲದ ರೆಕ್ಕೆಗಳನ್ನು ಅದು ಕಟ್ಟಿಕೊಳ್ಳುತ್ತದೆ. ದಿವ್ಯತೆಯತ್ತ ತುಡಿಯುತ್ತದೆ. ಈ ಊರ್ಧ್ವಗಮನ ಪ್ರವೃತ್ತಿಯನ್ನು ನಿರಾಶಾದಾಯಕ ಎನ್ನಲಾಗುವುದಿಲ್ಲ.

ಯದುಗಿರಿಯ ಮೌನವಿಕಾಸ (ಹಣತೆ - ೧೯೩೩)

'ಯದುಗಿರಿಯ ಮೌನವಿಕಾಸ' ಕವಿತೆಯಲ್ಲಿ ಜನವರಿ, ಫೆಬ್ರವರಿ ತಿಂಗಳುಗಳೆರಡನ್ನೂ ಸಾಮಾನ್ಯವಾಗಿ ತಬ್ಬಿಕೊಳ್ಳುವ ಮಾಘಮಾಸದ ಒಂದು ಬೆಳಗಿನಲ್ಲಿ ಯದುಗಿರಿಯ ಮೂಡಣ ಕಣಿವೆಯಲ್ಲಿ ಮಲಗಿದ್ದ "ಮೌನ" ಜಾಗರಗೊಂಡ ಬಗೆಯನ್ನು ಕವಿ ಹೀಗೆ ವರ್ಣಿಸುತ್ತಾರೆ:

ಮೂಡಣ ಕಣಿವೆಯ ಹಿಮದವಕುಂಠನ
ರವಿಕರಸ್ಪರ್ಶಕೆ ಜಾರುತಿದೆ
ನಾಡಮೊ ಹಿಗ್ಗುತ ನಾಚುತ ಮೆಲ್ಲನೆ
ಮೈಸಿರಿಯನು ತಾ ತೋರುತಿದೆ

ಎಂಬಂಥ ಸರಳ ಸುಂದರ ಚಿತ್ರಗಳ ಮಾಲಿಕೆಯಲ್ಲಿ ಮೊದಲಭಾಗ ಮೈದಾಳಿದೆ. ಈ ಬೆಳಕಿನ ಚಿತ್ರ ಸರಳ ವೆನ್ನಿಸಿದರೂ ಅರ್ಥವ್ಯಂಜಕ ವರ್ಣನೆಯಿಂದ ಕೂಡಿದೆ. ಕವಿಯ ಕಲ್ಪನಾಸೌಂದರ್ಯ ಆಕರ್ಷಿತವಾಗಿದೆ ಹಾಗೂ ರಸಿಕತೆಯಿಂದಲೆ ಕೂಡಿದೆ. ಭೂಮಿ "ಪ್ರೇಯಸಿ ರವಿ ಪ್ರಿಯಕರ ಇವರ ಸರಸ ಸಲ್ಲಾಪದಿಂದ ಬೆಳಕು ಮೂಡಿದೆ" ಎನ್ನುವ ಕಲ್ಪನೆ ರೋಮಾಂಚನಕಾರಿಯಾದುದು. ಭೂಮಿ ಎಂಬ ಕನ್ಯೆ ಹಿಮದ ಸೀರೆಯನ್ನ ಉಟ್ಟಿದ್ದಾಳೆ. ರವಿ ಕರಸ್ಪರ್ಶಕ್ಕೆ ಮೆಲ್ಲಮೆಲ್ಲಗೆ ಜಾರಿಸಿ ನಾಚುತ, ಹಿಗ್ಗುತ ತನ್ನ ಮೈ ಸಿರಿಯನ್ನೇ ತೋರುವಳಂತೆ.

ಇಲ್ಲಿ ರವಿಕರ ಎಂದರೆ ಸೂರ್ಯನ ಕಿರಣ ಎಂದು ಆ ಕಿರಣದ ಸ್ಪರ್ಶಕ್ಕೆ ಹಿಮ ಕರಗಿ ಹೋಗುವುದು ಸಹಜ. ಆದರೆ ಕವಿಯ ಕಲ್ಪನೆ ತುಂಬ ರಮ್ಯವಾದುದು. ಆ ಹಿಮದವಕುಂಠನ ಇತ್ಯಾದಿ ಕಲ್ಪನೆ ಉತ್ಕೃಷ್ಟವಾದ ಕಲ್ಪನೆ.

ಸೂರ್ಯನ ಕಿರಣ ಹಿಮವನ್ನು ಸೀಳಿ ಭೂಮಿಗೆ ಬಂದಾಗ ಅವನ ಕಿರಣಾಂಶುಗಳು ಎಲ್ಲೆಲ್ಲೋ ಇದ್ದವು ಎಂದು ಕವಿ ಹೇಳುವುದು ಹೀಗೆ :

ಬನದೊಳು ಕೆರೆಯೊಳುಕ ಮರಿಯ ಬುಡದೊಳು
ದಿಗಂತ ವಿಸ್ತೃತ ನಾಡಿನೊಳು
ಇನನರುಣಾಂಶುಗಳೆಲ್ಲೆಡೆ ಮಿಡಿವುವು

ರವಿಯ ಚೇಷ್ಟೆಯಿಂದ ಭೂಮಿಯಲೆಲ್ಲ ವ್ಯವಹಾರದ ಚಟುವಟಿಕೆ ಪ್ರಾರಂಭವಾಯಿತು. ಪಸುಕರುಗಳ, ಖಗಮಿಗಗಳ, ಕೂಜನ ರೈತರ ಗೊಲ್ಲತಿಯರ ವ್ಯಾಪಾರ ವಹಿವಾಟ ಜೀವನದ ಪಯಾಣ ಪ್ರಾರಂಭವಾಗಿ ಜೀವನ ರೂಪುಗೊಳ್ಳುವುದು ಎಂಬ ಸಂದೇಶವನ್ನು ಪದ್ಯದ ಮೊದಲನೆಯ ಭಾಗ ಪ್ರತಿಫಲಿಸಿದರೆ ಎರಡನೆಯ ಭಾಗ

ಸೂರ್ಯಾಸ್ತವನ್ನ ಪ್ರತಿಫಲಿಸಿದೆ. ಮೂರನೆಯ ಭಾಗದಲ್ಲಿ ಮುಂಜಾನೆಯ ಪ್ರಕೃತಿ ಸೌಂದರ್ಯದ ವಿವರಗಳನ್ನು ಸೆರೆಹಿಡಿದಿದೆ:

ರಾಜರ್ಷಿಗೆ ರವಿ ತಹ ಕಾಣಿಕೆಯೊಲು
ಕಣಿವೆಯ ತುಂಬಿದೆ ಹೂ ಬಿಸಿಲು
ಎಂಬ ಉಪಮೆಯಲ್ಲಿ ಭಕ್ತಿಭಾವದ ವರ್ಣವಿಲಾಸ ಉಕ್ಕಿದೆ.

ಬೆಚ್ಚನೆ ಬಿಸಿಲಿನ ಪುಷ್ಪ ಸ್ಪರ್ಶಕು
ಪ್ರಚಲಿತವಾಗದ ಯೋಗದೊಳು

ಎಂಬ ಯೋಗ ಸಮಾಧಿಯ ಚಿತ್ರಣವಂತೂ ನಮ್ಮನ್ನು ಜಿಜ್ಞಾಸೆಗೆ ಈಡುಮಾಡುವಂಥಾಗಿದೆ.

ಸಹಸ್ರ ಕಂಠದಿ ಮೇಳವಿಸಿದೆ ನುತಿ
ದೇಗುಲವಾಗಿದೆ ಘೋಷವತಿ
ಆತ್ಮಾನಂದಕೆ ತನ್ನೇಕಾಂತದಿ
ನಿಯತಿಯು ಮಿಡಿಯುವ 'ಘೋಷವತಿ'

ಗುಡಿಯೊಳಗೆ ಬೀಡು ಬಿಟ್ಟ ಕತ್ತಲೆಯೇ ಹೂ ಬಿಟ್ಟಂತೆ 'ಹಣತೆ' ಶೋಭಿಸುವುದು ಎಂಬಲ್ಲಿಯ ಧ್ವನಿ. ಸಹಸ್ರಕಂಠಗಳ ಸ್ತೋತ್ರದ ಪರಿಣಾಮವಾಗಿ ನಾದಮಯವಾದ ದೇಗುಲವು ನಿಯತಿಯು ಆತ್ಮಾನಂದಕ್ಕಾಗಿ ಮಿಡಿಯುವ 'ಘೋಷವತಿ'ಯೆಂಬ ದಿವ್ಯವೀಣೆಯಂತೆ ಕಂಡು ಬರುತ್ತಿದೆ ಎಂಬಲ್ಲಿ ವ್ಯಂಜಿತವಾಗುವ ನಿಗೂಢಭಾವ ಇವು ಕವಿಯ ಕಾವ್ಯಶಕ್ತಿಯ ತೇಜೋರೇಖೆಗಳಾಗಿವೆ.

ಉಷಃಕಾಲದಲಿ (ಮಾಂದಳಿರು - ೧೯೩೬)

ಮಾಂದಳಿರು ಸಂಕಲನದ ಮೊದಲ ಕವನ. ಈ ಕವಿಯ ಸೌಂದರ್ಯಾಭಿವ್ಯಕ್ತಿಯ ಒಂದು ಮಾದರಿಯಾಗಿದೆ. ಹಗಲಿನ ಚೆಲುವು ಕವನದ ವಸ್ತು. ಆದರೆ ಅದು ಅಷ್ಟರಲ್ಲಿ ಮುಗಿಯುವುದಿಲ್ಲ. ಮಾತಿನ ಬಣ್ಣಗಾರಿಕೆಯಿಂದ ಕವನ ರಂಗುಗಟ್ಟಿದೆ.

ಉಷೆಯ ಕಾಲ ಸೋಂಕಿನಿಂದ
ಬಾನು ತಳಿತಿದೆ

ಉಷೆಯ ಪಾದಸ್ಪರ್ಶದಿಂದ ಬುವಿಗೆ ಕಳೆಯೇರಿತ್ತು. ಕತ್ತಲು ಅಂಜಿ ಓಡಿತು. ಮರಗಳು ಉದಯರವಿಗೆ ಮಂಜಿನ ಅರ್ಘ್ಯವನ್ನಿತ್ತವು. ಪಿಕದ ಕೂಜನ ತೂರ್ಯವನ್ನೇ ಮೊಳಗಿತು. ಪದ್ಮಗಂಧ ಎಲ್ಲೆಲ್ಲೂ ಪಸರಿಸಿ ವಾತಾವರಣದಲ್ಲಿ ತಾದಾತ್ಮ್ಯಭಾವ ಉಂಟಾಗಿ ಹಕ್ಕಿಗಳ ಇಂಚರ, ಶುಕಿಯ ಬೆಡಗು, ಪಾರಿವಾಳದ ಬೇಟ, ಶೃಂಗಾರದ ಪರಿವೇಶವನ್ನು ಕಟ್ಟುತ್ತಾ ಕವಿ,

ವಿಶ್ವ ಶಿವದ ಪಥದೊಳಡಿಯ
ನಿಟ್ಟು ಸೃಷ್ಟಿ ನಗುತಿದೆ

ಎಂಬ ಚಿಂತನವನ್ನು ಚಿಮ್ಮಿಸುತ್ತಾರೆ. ಈ ಎಲ್ಲ ಚೆಲುವಿಗೆ ಮೂಲ, ಅದರ ರಹಸ್ಯ ನಿಸರ್ಗವು ವಿಶ್ವಶಿವದ ಶಿವಪಥದಲ್ಲಿ ಸಾಗುತ್ತಿರುವುದು. ಋತು ಸೌಂದರ್ಯಗಳ ಸುಂದರ ಸಂಗಮ. ಆದರೆ ಕವನ ಈ ಹಂತದಲ್ಲಿ ಮತ್ತೊಂದು ಚಿಂತನೆಗೆ ತೊಡಗುತ್ತದೆ. ಕವಿಗೆ ಚಿಂತನೆ, ಏಕೆ ? ಹೇಗೆ ? ಪ್ರಶ್ನೆಗಳು ಮೊದಲಾಗುತ್ತವೆ.

ಜಗವ ಹಿಗ್ಗು ಶಿವದ ಬಯಕೆ . ಆದರೆ ಮನುಷ್ಯ ಅದನ್ನ ಅರಿಯದೆ ನಿಸರ್ಗಕೆ ಬೆನ್ನು ತಿರುಗಿಸಿರುವುದನ್ನ ಕವಿ ಪ್ರಶ್ನೆ ಮಾಡುವರು:

ಮನುಜ ? ಮನುಜನೇಸುಗ್ಯೆವ
ನಿಂಥ ಸಮಯದಿ ?
ಜಗವು ಜೀವಗೊಳುತಲಿಂತು
ನಲಿವ ಉದಯದಿ ?

ಹಗಲಿನ ಸೌಂದರ್ಯವನ್ನ ಸವಿಯದೆ ಮನುಷ್ಯ ವ್ಯರ್ಥವಾಗುತ್ತಿದ್ದಾನೆ. ಪಾಪಕರ್ಮಗಳ ಜಾಲದಲ್ಲಿ ಸಿಲುಕುತ್ತಿದ್ದಾನೆ. ಇದು ಅವನಿಗೆ ಅವನೆ ಮೋಸ ಮಾಡಿಕೊಳ್ಳುತ್ತಿದ್ದಾನೆ. ಅವನಿಗೆ ಶಿವದ ಬಯಕೆ ಅವನ ಅರಿವಿಗೆ ಬನ್ನು ಬರದಾಗಿದೆಯಲ್ಲ

ಹಕ್ಕಿ ಹೂಗಳಂತೆ ತಾನೂ
ಎದ್ದು ನಲಿವನೊ ?
ಮಿಕ್ಕ ಸೃಷ್ಟಿಯಂತೆ ತಾನೂ

ನಲಿವಿಗೇಳ್ವನೊ ?
ವಿಶ್ವಶಿವದ ಮರ್ಮವರಿತು,
ಆತ್ಮಕರ್ಮ ಧರ್ಮವರಿತು,
ಬಾಳ ಬಟ್ಟೆಕಂಡು, ದೃಢದಿ
ಹಾದಿ ನಡೆಯುಲೇಳ್ವನೊ ?

ಈ ಚಿಂತನೆಯ ಜೊತೆಗೆ ಮತ್ತೊಂದು ಪ್ರಶ್ನೆ

ದೀನಮನುಜನೇನು ಬಲ್ಲ
ಕರ್ಮಧರ್ಮವ ?
ಕರಣದಾಳು ಬಲ್ಲನೇನು
ಶಿವದ ಮರ್ಮವ ?

ಮನುಷ್ಯ ದುಡಿಮೆಯ ಆಳು. ಹೊಟ್ಟೆಯ ಕೂಗಿಗೆ ತನ್ನನ್ನು ಮಾರಿಕೊಂಡವನು. ಆದರೆ ಕವಿಗೆ ಮನುಷ್ಯನ ಮೇಲೆ ಒಂದು ವಿಶ್ವಾಸವಿದೆ ಏನೆಂದರೆ

ಸೃಷ್ಟಿ ನಲಿವ ವೇಳೆಯಲ್ಲಿ
ಮನುಜಗೊಬ್ಬಗಲ್ತೆ ಶರಣು
ಹೊಂದಿ ನುತಿಪ ಕಜ್ಜವು !"

ಕವಿ ಪ್ರಕೃತಿಗೆ ಶಿರಬಾಗಿ ಶರಣೆಂದು ಲೋಕದ ಒಳಿತಿಗಾಗಿ ಮೊರೆ ಇಡುತ್ತಿದ್ದಾರೆ.

ವಿಶ್ವದೊಡೆಯ ದುರಿತಗಳನು
ದೂರ ಮಾಡಿಸೈ,
ಅವುದೆಮ್ಮ ಶಿವವೊ ತಂದೆ,
ಅದನು ಕರುಣಿಸೈ,

ಬೆಳಗಿನ ಬೆರಗಿನಿಂದ ಪ್ರಾರಂಭವಾದ ಕವನ ಆ ಬೆರಗು ಚೆಲುವು ಶಿವನ ಕರುಣೆ ಎಂಬ ಶುಭ ಧ್ವನಿಯನ್ನು ಒಳಗೊಳ್ಳುತ್ತದೆ. ಇಂಥ ಲೋಕದ ಹಿಗ್ಗನ್ನ ನೋಡದೆ ಮನುಷ್ಯ ತನ್ನ ಸ್ವಾರ್ಥಲೋಕದಲ್ಲಿಯೇ ಮುಳುಗಿ ಹೋಗಿ, ಬೆಳಗಿನ ಮರ್ಮವರಿಯದೆ ಇರುವವನಿಗೆ

ಜ್ಞಾನದೀಪ ಹೊತ್ತಿಸೈ
ಬಾಳ ಬಟ್ಟೆ ಕಾಣಿಸೈ
ದುರಿತಗಳನು ದೂರ ಮಾಡಿಸೈ

ನವೋದಯ (ಮಾಂದಳಿರು - ೧೯೩೬)

ನವೋದಯಂ ಕವಿತೆಯಲ್ಲಿ ಎರಕಗೊಂಡಿರುವ ಸೂರ್ಯೋದಯದ ಸೊಬಗಿನ ಚಿತ್ರ ಅಪೂರ್ವವಾದ ಭಾವ ಬಣ್ಣಗಾರಿಕೆಯಿಂದ ಕೂಡಿದ ಕಲಾವಂತಿಕೆಗೆ ಆಗರವಾಗಿದೆ. ಪೂರ್ವ ಸಮುದ್ರಕ್ಕೆ ಹತ್ತಿ ಹೊಂದಿದ ನೀಲಾಚಲದ ಶಿಖರದಲ್ಲಿ ಮೂಡುತ್ತಿರುವ ರವಿಯನ್ನು ಕಂಡ ರವಿಗೆ ಪುರಾಣ ಪ್ರತಿಮೆಯೊಂದು ಹೊಳೆಯುತ್ತದೆ.

ದಾನವಹೃತ ಮೇದಿನಿಯಂ
ದಂಷ್ಟ್ರಾಗ್ರದೊಳಿರಿಸಿ,
ಭೂದಾರಂ ಪಾತಾಳವ
ನುಳಿದೆದ್ದನೊ ಎನಿಸಿ
ದೂರದಿಗಂತದೊಳೊಪ್ಪಿದೆ
ರವಿ ಮಂಡಿತ ಶೃಂಗಂ
ನೀಲಾಚಲಮುದ್ದೀಪಿತ
ಪೂರ್ವೋದಧಿಸಂಗಂ

ಭಗವಾನ್ ವಿಷ್ಣು ವರಾಹ ರೂಪದಲ್ಲಿ ಹಿರಣ್ಯಾಕ್ಷನನ್ನು ಸಂಹರಿಸಿ ಭೂಮಿಯನ್ನು ತನ್ನ ಕೋರೆದಾಡೆಗಳಲ್ಲಿರಿಸಿಕೊಂಡು ಬಂದ ಹಾಗೆ ಭಾಸವಾಗುತ್ತದೆ. ಇದೆಲ್ಲಾ ಒಂದು ಕ್ಷಣ. ಮರುಕ್ಷಣವೆ ಕವಿಕಲ್ಪನೆ ಇನ್ನೊಂದು ದಿಸೆಯಲ್ಲಿ ಉಡ್ಡಾಣಗೆಯ್ಯುತ್ತದೆ.

ಕನ್ನೆಯ ನಿದ್ದೆಯು ಸಡಿಲಲು
ಮುತ್ತಿಟ್ಟನೊ ಧೀರಂ
ಹೊಲ್ಲಳ ಶಾಪಂ ತೊಲಗಿತೊ
ಬಹು ಗಾಢಗಭೀರಂ

ಚಿನ್ಮುಖವಾಯಿತೊ ಲೋಕಂ
ಉಕ್ಕುಕ್ಕಿತೊ ಹರ್ಷಂ
ಸೋಜಿಗಮೇನೆಸಗಿಹುದೊ
ಇನಕರ ಸಂಸ್ಪರ್ಶಂ

ಹ್ಯಾನ್ಸ್ ಆ್ಯಂಡರ್‌ಸೆನ್ ಅವರ "ನಿದ್ರಾಸುಂದರಿ" ಎಂಬ ಕತೆಯ ಹಂದರದ ಮೇಲೆ ಸೂರ್ಯೋದಯದ ಸೌಂದರ್ಯದ ಬಳ್ಳಿಯನ್ನು ಹಬ್ಬಿಸತೊಡಗುತ್ತದೆ. ಯಾವುದೊ ಒಂದು ಕೆಟ್ಟ ಶಾಪಕ್ಕೆ ಒಳಗಾಗಿ ಕತ್ತಲೆಯ ರೂಪವೆಂಬ 'ನಿದ್ದೆ'ಯಲ್ಲಿ ಮೈಮರೆತಿದ್ದ ಭೂಮಿಯೆಂಬ 'ಕನ್ಯೆ' ಯನ್ನು ಸೂರ್ಯನೆಂಬ 'ಧೀರ'ನು ಮುತ್ತಿಡುತ್ತಾನೆ!

ಅವನ ಆ ಮುತ್ತಿನ ಮಾಟಗಾರಿಕೆಯ ಪರಿಣಾಮವಾಗಿ ಆಕೆಯ ಶಾಪವೆಲ್ಲ ಕರಗಿ, ನಿದ್ರೆ ಹಾರಿ ಹೋಗುತ್ತವೆ. ಅನಂತರ ಆ ಸೂರ್ಯನೆಂಬ ಪ್ರಿಯಕರ ತನ್ನ ಕರಗಳಿಂದ ಆಕೆಯನ್ನು ಬಾಚಿ ತಬ್ಬಿಕೊಳ್ಳುತ್ತಾನೆ. ಆ 'ಭೂಮಿ' 'ಕನ್ಯೆ'ಯರ ಹಸಿರು ಮುಡಿಯಲ್ಲಿ ಮಂಜಿನ ಹನಿಗಳೆಂಬ ಹರಳು-ರತ್ನಗಳು ಥಳಥಳಿಸತೊಡಗುತ್ತವೆ. ಗಿಡಮರಗಳ ಎಲೆಗಳ ಮರ್ಮರ ಆಕೆಯ ಬಲಮೆಯ ಮೆಲುಮಾತಾಗಿ ದೆಸೆದೆಸೆಗೆ ಪಸರಿಸುತ್ತದೆ. ಆಕೆಯ ಆ ನಲವಿಗೆ ಪುಳಕಿತಗೊಂಡವಂತೆ ಹಕ್ಕಿ ಚಿಲಿಪಿಲಿರಾಗದಲ್ಲಿ ಹಾಡುತ್ತಾವೆ. ಗುಬ್ಬಿ 'ಥಕ ಥೋಂ ಧಿಕ್ಕಿಟ್ಟಿ' ಎಂದು ಕುಣಿಯುತ್ತವೆ. ಏನನ್ನೋ ಕಾಣುವ ಕುತೂಹಲದಿಂದ ತಾವರೆ ಕಣ್ಣು ಬಿಡುತ್ತವೆ. ಅದನ್ನೆಲ್ಲ ಗಮನಿಸಿದ ಕವಿಗೆ ಅನ್ನಿಸುತ್ತದೆ ಅಂದಿನದು ಎಂದಿನಂಥ ದಿನವಾಗಿರದೆ ನೂತನ ಸೌಂದರ್ಯವನ್ನು ಸ್ಫುರಿಸುವ ಅನನ್ಯ ದಿನವೆಂದು. ಈ ಬಗೆಯ ಅಪೂರ್ವ ಅನುಭವದಿಂದ ಪ್ರಸನ್ನಗೊಂಡ ಕವಿ ಹೃದಯ ಅಲೌಕಿಕದ ನೆಲೆಗೆ ಏರುತ್ತದೆ.

ಬಗೆ ಬೆಳಗಿದೆ ಮನಕಾಗಿದೆ
ಅಂದಿನ ದಿನದಂತೆ
ಮೋಹನನೆನ್ನಂ ಮೋಹಿಸಿ
ರಾಸಕೆ ಕರೆದಂತೆ

'ಮೋಹನ' ನಾದ ಶ್ರೀಕೃಷ್ಣ ಪರಮಾತ್ಮನೇ 'ರಾಧೆ'ಯಾದ 'ಗೋಪಿಕೆ' ಯಾದ ತನ್ನನ್ನು ಮೋಹಿಸಿ ಮರುಳುಗೊಳಿಸಿ ರಾಸಲೀಲೆಗೆ ಕರೆದಂತೆ ಭಾಸವಾಗುತ್ತದೆ.

ಹೀಗೆ ಇಲ್ಲಿಯ ಸೂರ್ಯೋದಯ ಸೌಂದರ್ಯದ ವಿವರಗಳನ್ನು ಸೆರೆ ಹಿಡಿಯುತ್ತಲೇ ಅತ್ಯಂತ ಕಲಾತ್ಮಕವಾಗಿ ಬದುಕಿನ ಅನ್ವೇಷಣೆಯನ್ನು ನಡೆಯಿಸಲಾದ ಬಗೆ ಪ್ರಶಂಸನೀಯವಾಗಿದೆ. ಇಲ್ಲಿ ಬಳಸಿಕೊಂಡಿರುವ ಪ್ರತಿಮೆಗಳು ಬರಿಯ ಅಲಂಕಾರಕ್ಕೆ ಬಂದವುಗಳಾಗಿರದೆ ಕಾವ್ಯದ ಜೀವಾಳದೊಂದಿಗೆ ಬೆಸುಗೆಯನ್ನು ಪಡೆದವುಗಳಾಗಿವೆ. ರಾಕ್ಷಸನಿಂದ ಅಪಹರಿಸಲ್ಪಟ್ಟ 'ಭೂಮಿ' ಶಪಿತ ಕನ್ಯೆಯರ ಸ್ಥಿತಿಗತಿಯೇ ಈ 'ಲೋಕ'ದ್ದಾಗಿದೆ. ತನ್ನಂತಹ ಮಾನವ ಚೇತನವೂ ಆಗಿದೆ ! ಅವುಗಳಂತೆ ತನ್ನ ಉದ್ಧಾರವೂ ಆಗಬೇಕಿದೆ ಎಂಬ ಆಶಯ ಇಲ್ಲಿ ಅಭಿವ್ಯಕ್ತಿ ಪಡೆದ ಬಗೆ ಅದ್ಭುತ ರಮ್ಯವಾಗಿದೆ. ಸಂಸ್ಕೃತ ಭೂಯಿಷ್ಠತೆಯ ಹಳಗನ್ನಡದ ಭಾಷಾ ವೈಖರಿಯ ಆಡಂಬರವಿಲ್ಲದೆ ಹೋಗಿದ್ದರೆ ಈ ಕವನ ಇನ್ನೂ ಹೆಚ್ಚು ಸಹೃದಯಸ್ಪಂದಿಯಾಗಬಹುದಿತ್ತೇನೋ ಎಂದೆನ್ನಿಸುತ್ತದೆ.

ಮಲೆದೇಗುಲದ ೧೦ನೇ ಮುಕ್ತಕ (ಮಲೆದೇಗುಲ - ೧೯೫೪)

ವಿಶ್ವದ ಎಲ್ಲ ಚೆಲುವುಗಳ ಮಡುವೇ ಈ ದೇಗುಲ. ಲೋಕದ ಬಗೆಬಗೆಯ ನಲಿವು ಚೆಲುವುಗಳನ್ನು ಸೌಂದರ್ಯ ಪಿಪಾಸಿಯಾದ ಈ ಕವಿ ಬಣ್ಣಿಸುವುದು ಹೀಗೆ,

ಹಸಿರೆಲೆಗಳಂಜಲಿಯೊಳಾತು ರವಿತೇಜವಂ
ಜೀವಕರ್ಘ್ಯವನೆರೆವ ಬನದ ನಲವು

ಮರಮರದ ಎಲೆಗಳು ಅಂಜಲಿಬದ್ಧವಾಗಿ ರವಿಯ ತೇಜಸ್ಸನ್ನು ಆತುಕೊಳ್ಳುತ್ತವೆ. ಅರ್ಘ್ಯವನ್ನೆರೆದು ಜೀವವನ್ನು ಬೆಳೆಸುತ್ತವೆ ಎಂಬ ಹೃದಯಂಗಮ ರೂಪಕವನ್ನು ನೋಡಬೇಕು. ಈ ಚೇತನವನ್ನೂಡಿಸುವ ಕ್ರಿಯೆಯೇ ಬನದ ನಲವಾಗಿದೆ ಹಾಗೆಯೇ ಕೆರೆಯ ತೆರೆಯ ಮೇಲೆ ಮಂದಹಾಸವನ್ನು ಮೂಡಿಸಿ ಬುವಿಯಲ್ಲಿ ಬಗೆ ಬಗೆಯ ಬಣ್ಣಗಳನ್ನುಕ್ಕಿಸಿ ಬಿಸಿಲು ನಲಿಯುತ್ತದೆ. "ಜಲಹಾಸ" ಎಂಬ ಸುಂದರ ಕಲ್ಪನೆ ಮನೋಹರ. ಬಿರುಗಾಳಿಯ ಮೊರೆತದ ಪ್ರತಿಕ್ರಿಯೆಯನ್ನು ಕವಿ,

ಅಲೆ ಕೆವರೆ ತರು ಬೆದರೆ ನೀಲದಿಂ ಧುಮ್ಮಿಕ್ಕಿ
ಕೋಡಿಗೇರುವ ಗಾಳಿ

ಎಂದು ಅದ್ಭುತಸ್ಯಂದಿಯಾಗಿ ಬಣ್ಣಿಸುತ್ತಾರೆ. ಗಾಳಿಯ ವಿದ್ಯುತ್ ಸ್ಪರ್ಶದ ರೋಮಾಂಚಕತೆಯನ್ನು ಇಂದ್ರಿಯಾನುಭವವಾಗಿಸುತ್ತಾರೆ. ಆದರೆ ಮುಕ್ತಕ ಪ್ರಕೃತಿಯ ಚೆಲುವಿನ ವರ್ಣನೆಯಲ್ಲಿಯೇ ಪರ್ಯವಸಾನವಾಗದ ಮತ್ತೊಂದು ನೆಲೆಗ ಸಲ್ಲುತ್ತದೆ.

ಬೆಳಕೆಲರು ಹಸಿರುಗಳ ಪಾತ್ರ ನಾನೀನಲವ
ನನ್ನ ಕರಣದಿಕೊಂಡು ನಲವನಲವು
ಈ ನಲವು ಬೆರಗುಗಳ ಕೊಳುವಂತೆ ತೋರುತಿಹು
ದೀಕೃತಿಯ ಚೆಲುವಿನೊಸಗೆ

ನಿಸರ್ಗದ ಚೆಲುವನ್ನು ಆಸ್ವಾದಿಸುವ ಜೀವನ ನಲಿವು, ಸಮಸ್ತ ಸೃಷ್ಟಿಯ ನಲವು ಎಲ್ಲಕ್ಕೂ ಆಶ್ರಯವೂ, ಶೇಷಿಯೂ ಆಧಾರವೂ ಸ್ವಾಮಿಯೂ ಆದ ಮೂಲ ವಸ್ತು ಈ ಆಚಾರ್ಯರೂಪಿಯಾದ ಪರಮಾತ್ಮನೆಂಬ ನಿಲವಿನಲ್ಲಿ ಈ ಭಾವ ವಿಶ್ರಾಂತವಾಗುತ್ತದೆ.

ಬೆಳಕು ಎಲರು ಹಸಿರುಗಳ ಪಾತ್ರ ನಾನು ಎಂಬ ಕಲ್ಪನೆ ನಿಸರ್ಗಕ್ಕೆ ಋಣಿಯಾಗಿಯೇ ಬೆಳೆದ ಜೀವನದ ಕೃತಜ್ಞತೆಯ ಸುಂದರ ಅಭಿವ್ಯಕ್ತಿಯಾಗಿ ಹೃದಯಂಗಮವಾಗಿದೆ. ಕಾವ್ಯದ ಕಮನೀಯತೆ, ದರ್ಶನದ ಗಾಢತೆಗಳನ್ನು ಈ ಕವನ ಮೈಗೂಡಿಸಿಕೊಂಡಿದೆ.

ಬೆಳಕು-ಬೆರಗು (ಎಂಬತ್ತರ ನಲಗು - ೧೯೮೮)

'ಬೆಳಕು-ಬೆರಗು' ಎಂಬ ಕವಿತೆ ೧೯೮೮ರಲ್ಲಿ ಪ್ರಕಟವಾದ ಏಳನೆಯ ಕವನ ಸಂಕಲನ "ಎಂಬತ್ತರ ನಲುಗು"ವಿನಲ್ಲಿದೆ. ಈ 'ಬೆಳಕು-'ಬೆರಗು' ಕವಿತೆ ಗಾನಪ್ರಧಾನವಾಗಿ ಹೊರಹೊಮ್ಮಿದೆ. ಬೆಳಗನ್ನ ನೋಡಿ ಕೈ ಮುಗಿದಂತೆ ನಮ್ಮ ನರನಾಡಿಗಳು,

ಕೆಂಜೆಡೆಯಗೆ ಕೈ ಮುಗಿವನು
ನಮ್ಮ ನಾಡಿಗ

ಬೆಳಗಿನ ಸುಖಸ್ಪರ್ಶಕ್ಕ ಇಂದ್ರಿಯಗಳಲ್ಲಿ ಅತೀಂದ್ರಿಯ ಭಾವನೆ ಉಂಟಾಗಿ ಮನಸ್ಸು "ಮಹಮಾತವಾಗುತಿವೆ" ಅಲೌಕಿಕತೆಗೆ ತುಡಿಯುತಿದೆ. ಇರುಳು ಎಂಬುದು ಬೆಳಕಿನ ಮಹಾಮಾನವನಿಗೆ ಹೆದರಿ ಮರದ ಪಾದವಡಿಯಲ್ಲಿ ಶರಣಾಗಿದೆ.

ಇರುಳು-ಎಲ್ಲೂ ಹೋಗಲಿಲ್ಲ ಸೋತು ಹೆದರಿ ಭೂಗತವಾಯಿತು ಎಂಬ ಕಲ್ಪನೆ ನಿಜಕ್ಕೂ ಆಹ್ಲಾದಕಾರಿಯಾದುದು.

ಮರದ ಪಾದ ಹಿಡಿದು ಇರುಳು
ಶರಣೆನ್ನುತಿದೆ

ಬೆಳಗು ಎಂಬ ಸಾತ್ವಿಕನ ಎದುರು ಚಳಿ ಕರಗಿ ಮಂಜಾಯಿತು. ಇರುಳಿಗೆ ಹೆದರಿ ಮುದುಡಿ ಕುಳಿತ ಕಮಲಗಳಂತವುಗಳಿಗೆ ಬಂಧುವಾಗಿ ಬಂದು ಅವುಗಳನ್ನು ಉದ್ಧರಿಸಿದ. ಇದನ್ನೆಲ್ಲ ನೋಡಿ ನಮ್ಮೊಳಗೆ ಇರುವ ಕಪಿ

ಸೂರ್ಯನ ಕವಿತ್ವಕ್ಕೆ ಕೈ ಮುಗಿದ". ಈ ಸೂರ್ಯನೇ ಜೀವ ಜೀವವನ್ನು ಬೆಸೆಯುವ ಬ್ರಹ್ಮ, ಸಂಸ್ಕಾರಗೊಳಿಸುವ ಸೃಷ್ಟಿಕರ್ತ. ಒಟ್ಟಿನಲ್ಲಿ ಲೋಕದ ಚೇಷ್ಟೆಗೆ ಸೂರ್ಯನೆ ಬೀಜ ಎಂಬ ಅಕ್ಕನ ಮಾತನ್ನ ಈ ಕವಿತೆ ಧ್ವನಿಸುತ್ತದೆ.

ಸುಂದರ ದಿನಮುಖ (ಹೃದಯವಿಹಾರಿ - ೧೯೬೦)

ಹೃದಯ ವಿಹಾರಿ ಸಂಕಲನದ ವಸ್ತುವೂ ಹಗಲ ಸೊಬಗು ಸಂಗೀತಕ್ಕೆ ಒಲಿದ ಕವಿ ಮನಸ್ಸು ಈ ಕವನವನ್ನು ಹಾಡು ಎಂದು ಕರೆದಿದೆ. ಅಂಶ ಲಯವನ್ನು ಹಿಡಿದು ಹಾಡಿದಾಗ ಕವನ ಸೊಗಸುತ್ತದೆ.

ಸುಂದರ ದಿನಮುಖ
ಕಂದರಲಕ್ಷ್ಮಿ
ಕಂದೆರೆತಂತೆ

ಕವನದ ಐದು ನುಡಿಗಳಲ್ಲೂ ದನಿ ಇದೆ. ಕಂದರ ಲಕ್ಷ್ಮಿ ಮೆಲ್ಲನೆ ನಿದ್ದೆ ತಿಳಿದೆದ್ದಾಗ ಹಗಲಿನ ಹರುಷ ಉಲ್ಲಾಸಗಳು ಕ್ರಮಕ್ರಮವಾಗಿ ಮೈದೋರುತ್ತವೆ. ಲೋಕದ ಸಂಪತ್ತು ದೃಗ್ಗೋಚರವಾಗುತ್ತವೆ. ಮುಂದಿನ ನುಡಿಗಳಲ್ಲಿ

ಗಿಡಗಿಡಕೂ ಅರಳು
ಗರಿಕೆ ಬೆರಲಿಗೂ ಹರಳು
ಮಲೆಗೋ ಹೊಂಬಿಸಿಲಿನ ರುಮಾಲು

ಗರಿಕೆ ಹುಲ್ಲಿರುವ ಹಿಮದ ಮಣಿ ಗರಿಕೆಯು ತೊಟ್ಟ ಉಂಗುರದಂತೆ ಶೋಭಿಸುತ್ತಿದೆ. ಬೆಟ್ಟದ ತುದಿಯಲ್ಲಿರುವ ಸೂರ್ಯನ ಹೊಂಬಣ್ಣವು ಆ ಬೆಟ್ಟವು ತಲೆಗೆ ತೊಟ್ಟ ಪೇಟದಂತೆ ಈ ರೀತಿ ಸೃಷ್ಟಿಯ ಸಂಭ್ರಮ ಸೂರೆಯಾಗಿದೆ ಇಲ್ಲಿ.

ಸೂರ್ಯ ಬೆಟ್ಟವೇರಿ ನಿಂತು
ಬಿಸುಟನಿಗೋ ತೂರಿ
ಅವರವರಿಗೆ ಅವರವರ ಮಾಲು

ಕವಿಯ ಅದ್ಭುತ ಕಲ್ಪನೆ ರವಿ ಮೂಡಿದಾಗ ಅವರವರ ಕರ್ಮವನ್ನ ಅವರವರಿಗೆ ಹಂಚಿ ಎಲ್ಲರಿಂದ ಕೆಲಸವನ್ನ ತೆಗೆಸುವ ಶಕ್ತಿ ಸೂರ್ಯನೊಬ್ಬನಿಗೆ ಮಾತ್ರ.

ಹರಣ-ಕರಣ ಜೀವನದ ಒಂದು ದಿವ್ಯ ಸಂಗಮ ಹರಣ ಕರಮದ ಸಂಲಗ್ನವೇ ಬದುಕು ಎನ್ನುವಾಗ

ಸಂಗಡಿಸಿತೀಗ ಹರಣಕೆ ಕರಣ
ಜಡಕು ಜಂಗಮಕೂ ಒಂದೊಂದರ ಋಣ
ಒಂದನ್ನು ಬಿಟ್ಟು ಮತ್ತೊಂದಿಲ್ಲ.

ಹಕ್ಕಿ ಇಂಚರ ಅಲ್ಲ
ಮೊರೆವ ತೇಜದ ಗಾಳಿ
ತಂಗಾಳಿಯಿದು ಅಲ್ಲ
ಇಂಗಡಲಿಂ ಬಂದ ನಲ್ಮನದ ವೈ ಹಾಳಿ

ದಿವ್ಯ ತೇಜಸ್ಸು ಸುಳಿಯುತ್ತಿದೆ, ಮೊರೆಯುತ್ತಿವೆ. ತಂಗಾಳಿಯ ಸೌರಭ. ಸುಕುಮಾರತೆಯನ್ನು ಕ್ಷೀರಸಾಗರದಿಂದ ಬೀಸಿ ಬಂದ ಉತ್ಸಹ ಎನ್ನುತ್ತಾರೆ ಕವಿ. ಈ ವರ್ಣನೆಗಳಲ್ಲಿ ಎದ್ದು ಕಾಣುವ ಕಲ್ಪನೆಯೆಂದರೆ ನಿಸರ್ಗದ ಸೊಗಸು "ತಿರೆಗೆ ಸುರರು ತೆರೆವ ಹೆದ್ದಾರಿ" ಎಂಬುದು. ದೇವಮಾನವ ಸತ್ವದ ದಿವ್ಯ ಸಂಯೋಗವನ್ನು ಎಷ್ಟು ಬಣ್ಣಿಸಿದರೂ ಕವಿಗೆ ತೃಪ್ತಿಯಿಲ್ಲ.

ಬಿಳಿಯ ಮೋಡ ಅಲ್ಲ
ಇದು ಮೇರುತೀರದಿ ಜಳಕೆ ಮಾಡುತ್ತಿಹ
ಶಿವನ ಗೂಳಿ !

ಕವಿಯೇ ಹೇಳುವಂತೆ ಇವುಗಳ ಆನಂದದ ಮಿಲನಕ್ಕೆ ಸಾಕ್ಷಿಯಾಗಿ ಕಂದರಲಕ್ಷ್ಮಿ ಕಣ್ಣು ಮಿಟುಕಿಸುತ್ತಾಳೆ ಮತ್ತೆ ಮತ್ತೆ ಈ ಕವನದಲ್ಲಿ.

ಪು.ತಿ.ನ. ಅವರ ಸೂರ್ಯೋದಯ ಕವನಗಳ ಪರಿಶೀಲನೆಯಲ್ಲಿ ಎದ್ದು ತೋರುವ ಅಂಶವೆಂದರೆ, ಕವನಗಳಲ್ಲಿ ಪ್ರಕೃತಿ ವಿನಯ ಭಕ್ತಿ ಸ್ಥಾಯಿಯಾಗಿದೆ ಎಂಬುದು. ಕೇವಲ ದೃಶ್ಯ ಸೌಂದರ್ಯದ ವರ್ಣನೆ ಕವಿಯ ಅಂತಿಮ ಉದ್ದೇಶವಲ್ಲ. ಆ ಚೆಲುವಿನ ಮೂಲ ಸೆಲೆಯಾವುದು ಎಂಬ ಚಿಂತನೆ ಇಲ್ಲಿ ಗಾಢವಾಗುತ್ತದೆ. ಹಾಗೆಯೇ ಮಾನವನ ಬಾಳಿಗೂ ಪ್ರಕೃತಿಗೂ ಇರುವ ಅವಿನಾಭಾವ ಅವೆರಡರ ಗುರಿಯೂ ಒಂದೇ ಎಂಬ ನಿಲವಿನಲ್ಲಿ ವಿಶ್ರಾಂತವಾಗುತ್ತದೆ.

ಪ್ರಕೃತಿಯ ಭೀಕರತೆಯ ವರ್ಣನೆ ಇವರ ಕವನಗಳಲ್ಲಿ ತೀರ ಕಡಿಮೆ. ಒಟ್ಟಿನಲ್ಲಿ ಇವರ ಎಲ್ಲ ಕವನಗಳು ಯದುಗಿರಿಯ ಹಿನ್ನೆಲೆಯಲ್ಲಿ ದರ್ಶನ ದೀಪ್ತವಾಗಿ ಮನಸ್ಸಿಗೆ ತಟ್ಟುತ್ತವೆ.

ಅಧ್ಯಾಯ - ನಾಲ್ಕು

ಬೇಂದ್ರೆ ಕವನಗಳಲ್ಲಿ ಸೂರ್ಯೋದಯ

* ಬೆಳಗು

* ನಸುಕು

* ಬೆಳಗುಜಾವ

* ಉದಯರವಿ ತಂಪುಕೆಂಡ

* ನಮೋನಮಃ

* ಸೂರ್ಯಪಾನ

* ಮಾತು-ಮೌನ

* ಉಷಾಸೂಕ್ತ

* ನೂತನ

ಅಧ್ಯಾಯ ನಾಲ್ಕು

ಬೇಂದ್ರೆ ಕವನಗಳಲ್ಲಿ ಸೂರ್ಯೋದಯ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಬೇಂದ್ರೆ ಅವರದು ಕೂಡ ಬಹು ದೊಡ್ಡ ಹೆಸರು. ಬೇಂದ್ರೆ ಅವರು ಅಂಬಿಕಾತನಯದತ್ತ ಕಾವ್ಯನಾಮದಿಂದ ಕನ್ನಡಿಗರ ಮನೆಮಾತಾಗಿದ್ದ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ೩೧-೦೧-೧೮೯೬ ಧಾರವಾಡದ ಪೋತನೀಸರ ಓಣಿಯಲ್ಲಿರುವ ಗುಣಾರಿಯವರ ಮನೆಯಲ್ಲಿ ಹುಟ್ಟಿದರು. ಅವರ ತಂದೆ ರಾಮಚಂದ್ರಪಂತರು (ತಾತಂಭಟ್ಟ ಎಂದೂ ಅವರನ್ನು ಕರೆಯುತ್ತಿದ್ದರು) ತಾಯಿ ಅಂಬೂತಾಯಿ. ಗಂಡಮಾಲೆಯ ರೋಗದಿಂದ ತಂದೆ ತೀರಿಕೊಂಡ ಮೇಲೆ ತನ್ನ ಚಿಕ್ಕಪ್ಪ ಬಂಡೋಪಂತರ ಆಶಯದಲ್ಲಿ ಬೇಂದ್ರೆಯವರ ಬಡ ಕುಟುಂಬ ಆಸರೆ ಪಡೆಯಿತು. ಚಿಕ್ಕಪ್ಪನ ಆಶ್ರಯದಲ್ಲಿಯೇ ಬಿ.ಎ.ವರೆಗಿನ ಅಭ್ಯಾಸ ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ನಡೆಯಿತು.

ವಿಕ್ಟೋರಿಯಾ ಹೈಸ್ಕೂಲಿನಲ್ಲಿ ಮೂರು ವರ್ಷ ರಾಷ್ಟ್ರೀಯ ಶಾಲೆಯಲ್ಲಿ ಉದ್ಯೋಗ ತಮ್ಮ ೨೮ನೇ ವಯಸ್ಸಿನಲ್ಲಿ ಮಾತೃವಿಯೋಗ ಮಧ್ಯೆ ಸೊಂಡೂರು ಸಂಸ್ಥಾನದಲ್ಲೂ ಸ್ವಲ್ಪ ಕಾಲದ ನೌಕರಿ, ಒಂದು ವರ್ಷದ ಅಲೆದಾಟ, ೧೯೨೫ ರಿಂದ ೧೯೩೨ರ ವರೆಗೆ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ವಿವಿಧ ಕ್ಷೇತ್ರಗಳಲ್ಲಿ ದುಡಿಮೆ. ನರಬಲಿ ಕವನ ಕಾರಣವಾಗಿ ಮೂರು ತಿಂಗಳು ಹಿಂಡಲಗಿ ಕಾರಾಗೃಹದಲ್ಲಿ ಜೈಲು ಶಿಕ್ಷೆ ಮತ್ತೆ ಅಲೆದಾಟ. ಮಾಸ್ತಿಯವರ ಬೆಂಬಲದಿಂದ ಜೀವನ ದ ಸಂಪಾದಕನೆಂಬ ಗೌರವ ವೃತ್ತಿ ಒಂದು ವರ್ಷ ಗದುಗಿನ ಚೌಹಾಣ್ ಪ್ರೌಢಶಾಲೆಯಲ್ಲಿ ಶಿಕ್ಷಕ ವೃತ್ತಿ ಮತ್ತೆ ಒಂದು ವರ್ಷ ಹುಬ್ಬಳ್ಳಿಯ ಇಂಗ್ಲೀಶ್ ಸ್ಕೂಲಿನಲ್ಲಿ ಅಲ್ಪಾವಧಿ ವೃತ್ತಿ. ೧೯೪೨-೪೩ರಲ್ಲಿ ಪೂನಾದ ಕಾಮರ್ಸ್ ಕಾಲೇಜಿನಲ್ಲಿ ಅರ್ಧಕಾಲೀಕ ಕನ್ನಡ ಅಧ್ಯಾಪಕ ವೃತ್ತಿ ಹೀಗೆ ಇವರ ಇಡೀ ಬದಕಿನ ತುಂಬಾ ಉದ್ಯೋಗ ನಿರುದ್ಯೋಗಗಳ ಚೆಲ್ಲಾಟ.

ಅದ್ಯಯನ ಬೇಂದ್ರೆಯವರ ಬದುಕಿನ ಒಂದು ಅವಿಭಾಜ್ಯ ಅಂಗ. ಸಂಸ್ಕೃತ, ಕನ್ನಡ, ಇಂಗ್ಲೀಷ್ ಹಾಗೂ ಮರಾಠಿ ಸಾಹಿತ್ಯಗಳನ್ನು ಅಧ್ಯಯನ ಮಾಡಿದವರು ಅವರು. ಎಲ್ಲಕ್ಕಿಂತ ಅತಿಮುಖ್ಯವಾದ ವಿಶಯವೆಂದರೆ ಇವರ ಬದುಕು ಮರಾಠಿ. ಕನ್ನಡ ದ್ವಿಭಾಷಾ ವಾತಾವರಣದಲ್ಲಿದ್ದುದು. ಕನ್ನಡದಲ್ಲಿ ಇಂಥ ದ್ವಿಭಾಷಾ ದ್ವಿಸಂಸ್ಕೃತಿಗಳ ವಾತಾವರಣದಲ್ಲಿ ಮಾಸ್ತಿ, ಡಿ.ವಿ.ಜಿ., ಪು.ತಿ.ನ. ಅವರೂ ಕೂಡ ಬೆಳದವರು. ಕನ್ನಡ ಕಾವ್ಯ ಪರಂಪರೆಯನ್ನು ಜೀವಂತವಾಗಿ ಮುಂದುವರೆಸುವುದರಲ್ಲಿ ಅಂಬಿಕಾತನಯದತ್ತರ ಪಾತ್ರ ಹಿರಿದಾದದು. ೧೯೪೩ರಲ್ಲಿ ಶಿವಮೊಗ್ಗದಲ್ಲಿ ನಡೆದ ೨೭ನೇ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ೧೯೫೯ರಲ್ಲಿ ಅವರ ಅರುಳು ಮರುಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿ ಇತ್ತು ಇವರನ್ನು ಸನ್ಮಾನಿಸಿದೆ. ೧೯೭೪ರಲ್ಲಿ ನಾಕುತಂತಿ ಕವನಸಂಕಲನಕ್ಕೆ ಜ್ಞಾನಪೀಠ ಪ್ರಸಸ್ತಿ ದೊರಕಿತು. ಬೇಂದ್ರೆಯವರು ಹದಿನಾಲ್ಕು ನಾಟಕಗಳು, ಹತ್ತು ವಿಮರ್ಶಾ ಗ್ರಂಥಗಳು, ೧೨೮ ಪ್ರಬಂಧಗಳನ್ನು ರಚಿಸಿದ್ದಾರೆ.

ಬೆಂದ್ರೆಯವರ ಕವನಗಳಲ್ಲಿ ಸೂರ್ಯೋದಯದ ಕವನಗಳ ಪಟ್ಟಿ ಈ ರೀತಿ ಇದೆ

ಉದಯರವಿ ತಂಪುಕೆಂಡ (ಶ್ರೀ ಮಾತಾ ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ೧೯೬೮, ಪು ೭೧) ಉಷಾಸೂಕ್ತ (ಹಾಡು-ಪಾಡು, ಆನಂದ ಸಾಹಿತ್ಯ ಮಂದಿರ, ಗಲಗಲಿ ೧೯೪೬, ಪುಟ ೨೪-೨೫), ವಿಳಣ್ಣು (ಮುಕ್ತ ಕಂಠ, ಸಮಾಜಪುಸ್ತಕಾಲಯ, ಧಾರವಾಡ, ೧೯೫೬, ಪುಟ ೩೦) ಓಡು (ಸಂಚಯ, ಸಮಾಜ ಪುಸ್ತಕಾಲಯ, ಧಾರವಾಡ ೧೯೫೯, ಪುಟ, ೭೧) ನೂತನ (ಮುಗಿಲು-ಮಲ್ಲಿಗೆ, ಪ್ರತಿಭಾಗ್ರಂಥಮಾಲೆ, ಧಾರವಾಡ, ೧೯೬೧, ಪುಟ

೪೩) ಇನಸುಕು ಬತು ನಸುಕು(ಗಂಗಾವತರಣ, ಮನೋಹರ ಗ್ರಂಥ ಪ್ರಕಾಶನ ಸಮಿತಿ, ಧಾರವಾಡ, ೧೯೫೧; ಮಾತುಮೌನ(ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೭, ಪುಟ ೨೮) ಸೂರ್ಯಪಾನ(ಸೂರ್ಯಪಾನ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೭, ಪುಟ. ೧) ಸೂರ್ಯನ ಹೊಳಿ (ಹಾಡುಪಾಡು, ೧೯೪೬, ಪುಟ, ೩೧-೩೨). 'ವರ ಕವಿ' ಎಂಬ ಬಿರುದಿಗೆ ಪಾತ್ರರಾಗಿರುವ ಇವರ ಸಾಹಿತ್ಯವು ಬೃಹತ್ತು ಮತ್ತು ಮಹತ್ತುಗಳಿಂದ ಕೂಡಿದೆ. ಕವನಸಂಕಲನಗಳು ಪ್ರಕಟಗೊಂಡಿವೆ. ಇವರ ಕಾವನಗಳು ಸ್ವಾರಸ್ಯವನ್ನು, ಸತ್ವವನ್ನು ಮತ್ತು ಅವುಗಳ ಮಾಂತ್ರಿಕತೆಯನ್ನು ಯಾವ ವ್ಯಾಖ್ಯಾನವೂ ಸಂಪೂರ್ಣವಾಗಿ ಹಿಡಿಯುವುದು ಸಾಧ್ಯವಿಲ್ಲ. ಅವರ ಕವಿತೆ 'ಮಾಂತ್ರಿಕತೆ' ಗಾಗಿ ಸಹಜವಾದದ್ದು.

ಬೆಳಗು (ಗರಿ - ೧೯೩೨)

ಬೇಂದ್ರೆಯವರ ಕವನಗಳಲ್ಲಿ ಸೂರ್ಯೋದಯ ವರ್ಣನೆಯ ಕವನಗಳು ಬಹಳ ಕಡಿಮೆ ಸಂಖ್ಯೆಯಲ್ಲಿವೆ. ಅವರ ಸೂರ್ಯೋದಯದ ಕವನಗಳಲ್ಲಿ ಬಹಳ ಪ್ರಸಿದ್ಧವಾದ ಕವನವೆಂದರೆ "ಬೆಳಗು". ಬೆಳಗು ಬೆಳದಿಂಗಳುಗಳ ವರ್ಣನೆ ಶ್ರೀ ಬೇಂದ್ರೆಯವರನ್ನು ಅಮರ ಭಾವಗೀತಕಾರರನ್ನಾಗಿಸಿದೆ. ಭಾವ ತೀವ್ರವಾಗಿ ಗಾನ ಪ್ರಧಾನವಾಗಿ ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನು ಪಡೆದಿವೆ. ಅವರ ಕವನಗಳು ಈ ಕೆಲವು ದಶಕಗಳಲ್ಲಿ ಎಲ್ಲರ ಬಾಯಲ್ಲೂ ಕೇಳಿ ಬರುತ್ತಿರುವ ಸರ್ವಜನ ಮೋಹಕವಾಗಿರುವ ಕವನ ಅವರ "ಬೆಳಗು" ಅತ್ಯಂತ ಸರಳವಾದ ಅಚ್ಚಗನ್ನಡ ಪದಗಳಿಂದ ಅತ್ಯಪೂರ್ವದಿಂದ ವರ್ಣನೆ ಅನುಭವಗಳನ್ನು ಒಳಗೊಂಡಿರುವ ಈ ಕವನ ಆ ಕಾರಣಕ್ಕಾಗಿಯೇ ಸರ್ವ ಜನಪ್ರಿಯತೆಯನ್ನು ಪಡೆದಿದೆ[೨೨].

ಮೂಡಲ ಮನೆಯಾ ಮುತ್ತಿನ ನೀರಿನ
ಎರಕೈವಾ ಹೊಯ್ದಾ
ನುಣ್ಣನೆರಕ್ವವಾ ಹೊಯ್ದಾ
ಬಾಗಿಲ ತೆರೆದೂ ಬೆಳಕೂ ಹರಿದೂ
ಜಗವೆಲ್ಲಾ ತೊಯ್ದಾ.
ಹೋಯ್ತೋ ಜಗವೆಲ್ಲಾ ತೊಯ್ದಾ

ಎಂಬ ಆರಂಭವಾಗುತ್ತದೆ ಕವನ. "ಪ್ರಕೃತಿ ಪ್ರಿಯವಾದ ಕವಿಹೃದಯ ಎಂತಹ ಆತ್ಮೀಯತೆಯಿಂದ ಬೆಳಗಾಗುವ ದೃಶ್ಯವನ್ನು ಕಂಡಿದೆ. ಮನೆಯ ಬಾಗಿಲನ್ನು ತೆರೆದು ಬೆಳಗಾಗ ನೀರೆರಚುವಂತೆ, ಮೂಡಲ ಮನೆಯ ಬಾಗಿಲ ತೆರೆದು ಮುತ್ತಿನ ನೀರಿನ ಸಂಸೇಚನೆಯಾಗುತ್ತಿದೆ. ಬೆಳಕು ಹರಿದು ಜಗವೆಲ್ಲಾ ತೊಯ್ದಿದೆ"[೨೩].

ರತ್ನದ ರಸದಾ ಕಾರಂಜಿಯೂ
ಪುಟಪುಟನೇ ಪುಟಿದು
ತಾನೇ ಪುಟಪುಟನೇ ಪುಟಿದು
ಮಾಘ ಮಹಿಸುವಾ ಮುಗಿದಾ ಮೊಗ್ಗೀ
ಪಟಪಟನೆ ಒಡೆದು
ತಾನೇ ಪಟಪಟನೇ ಒಡೆದು

ಬೇಂದ್ರೆಯವರ ಕಾವ್ಯ 'ಅಸ್ಪಷ್ಟ ಸುಂದರ ನಾದದಿಂದ ಬಂಧುರ". ಈ ಎರಡನೆಯ ಪದ್ಯಕ್ಕೆ ಅನ್ವಯಿಸುತ್ತ
ರತ್ನದ ರಸದ ಕಾರಂಜಿ ಯಾವುದು ಎಂಬುದು ಗೊತ್ತಿಲ್ಲ ಅದು ಪುಟಿದು 'ಶ್ರಾವಣದ ಸೂರ್ಯೋದಯವೆಂ

೨೨. ಪ್ರಭುಶಂಕರ, ಕನ್ನಡದಲ್ಲಿ ಭಾವಗೀತೆ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೬೫, ಪು. ೨೪೫

ಊಹಿಸುವುದಾದರೆ ಮೂಡಲಲ್ಲಿ ಬುಗ್ಗೆ ಚಿಮ್ಮುವ ಅನಂತ ವರ್ಣಗಳ ಮೇಳ ಎಂದು ಹೇಳಬಹುದು. ಹಾಗೆಯೇ ಸೂರ್ಯೋದಯವಾದೊಡನೆಯೇ ಕವಿ ಸಮಯ ಹೇಳುವಂತೆ ತಕ್ಷಣ ಮುಗಿದ ಮೊಗ್ಗುಗಳು ಅರಳುವುದೂ ಇಲ್ಲ ಪಟಪಟನೆ ಸದ್ದು ಮಾಡುವುದೂ ಇಲ್ಲ. ಹೂವರಳುವುದೂ ಹೆಣ್ಣಿಗೆ ಯೌವನೋದಯವಾಗುವಂತೆ. ಮೌನವಾಗಿ, ದಿಢೀರನೆ, ಗಮನಕ್ಕೆ ಬಾರದ ರೀತಿಯಲ್ಲಿ ರಹಸ್ಯವಾಗಿ ನಡೆಯುವ ಮಂತ್ರಕ್ರಿಯೆ. ರವೀಂದ್ರರೆನ್ನುವಂತೆ ರಾತ್ರಿ ಮೊಗ್ಗನ್ನು ಅರಳಿಸಿ ಅದರ ಕೀರ್ತಿಯನ್ನು ಹಗಲಿಗೆ ಬಿಡುತ್ತದೆ. ಕವಿಯ ಸೂಕ್ಷ್ಮೇಂದ್ರಿಯವಾದರೋ ಮೊಗ್ಗು ಅರಳುವ ರಹಸ್ಯ ಕ್ರಿಯೆಯನ್ನು ನೋಡುತ್ತದೆ ಆರಿಸುತ್ತದೆ. ಮೂರನೆಯ ಚರಣ ಕವನಕ್ಕೆ ಉತ್ಕರ್ಷತೆಯನ್ನು ನೀಡುತ್ತದೆ". ಇವರಲ್ಲಿ ಘ್ರಾಣೇಂದ್ರಿಯದ ಮೇಲಾದ ಪ್ರಭಾವವು

ಎಲೆಗಳ ಮೇಲೇ ಹೂಗಳ ಒಳಗೇ
ಅಮೃತದಾ ಬಿಂದು
ಕಂಡವು ಅಮೃತದಾ ಬಿಂದು
ಯಾರಿರಿಸಿರುವರು ಮುಗಿಲ ಮೇಲಿಂ
ದಿಲ್ಲಿಗೆ ತಂದು
ಈಗ ಇಲ್ಲಿಗೇ ತಂದು

ಮುಂಜಾನೆಯ ಇಬ್ಬನಿ ಎಲೆಗಳ ಮೇಲೆ ಹೂಗಳ ಒಳಗೆ ತಂಗಿದೆ. ಇಬ್ಬನಿಯ ಹನಿಗಳು ಅಮೃತದ ಬಿಂದುವಿನಂತೆ ಇವೆ ಎಂದು ಹೇಳಲಿಲ್ಲ ಕವಿ. 'ಅಮೃತಬಿಂದು' ಎನ್ನುವುದು ಅದನ್ನೇ ಧ್ವನಿಸುತ್ತದೆ. ಕವಿ ಮುಗ್ಧರಾಗಿ ಕೇಳುತ್ತಾರೆ "ಮುಗಿಲ ಮೇಲಿಂದ ಇಲ್ಲಿಗೆ ತಂದು ಯಾರು ಇದನ್ನು ಇರಿಸಿದ್ದಾರೆ?" ಇದು ದೃಶ್ಯೇಂದ್ರಿಯದ ಚಿತ್ರಣ.

ಬೇಂದ್ರೆಯವರ ಸೂಕ್ಷ್ಮವಾದ ಕಲ್ಪನೆಗೆ ಸಾಕ್ಷಿ ನಾಲ್ಕನೆಯ ಚರಣ. ಹೂವಿನ ಎಸಳಿನ ಚವರಿಯನ್ನು ಗಾಳಿಯ ಕೈಯಿಟ್ಟರಂತೆ, ಗಾಳಿ ದುಂಬಿಯ ಹಿಂಡಿನ ಮೈಗೆಲ್ಲಾ ಗಂಧವನ್ನು ಸವರಿತಂತೆ, ಅನಂತರ ಆ ದುಂಬಿಯ ಹಿಂಡನ್ನು ಹಾರಿಸಿ ಬಿಟ್ಟಿದ್ದಾರೆ.

ಗಿಡ ಗಂಟೇಯ ಕೊರಳೊಳಗಿಂದ
ಹಕ್ಕೀಗಳ ಹಾಡು
ಹೊರಟಿತು ಹಕ್ಕೀಗಳ ಹಾಡು
ಗಂಧರ್ವರು ಸೀಮೆಯಾಯಿತು
ಕಾಡಿನಾ ನಾಡು
ಕ್ಷಣದೊಳು ಕಾಡಿನಾ ನಾಡು

ಬೆಳಕಾದಾಗ ಹಕ್ಕಿಗಳು ಗಿಡಗಂಟೆಯ ಪೊದೆಗಳಲ್ಲಿ ಗೂಡು ಮಾಡಿ ವಾಸವಾಗಿರುತ್ತವೆ. ಅವುಗಳೆಲ್ಲ ಎಚ್ಚರಗೊಂಡು ಇಂಚರಗೈಯುತ್ತವೆ. ಇವು ಇಂಚರಗೈದರೆ ಒಡಿ ಗಿಡಗಂಟೆಯೇ ಹಾಡಿದಂತಾಗುತ್ತದೆ. ಕಾಡಿನಂತೆ ಮೌನವಾಗಿದ ನಾಡು ಕ್ಷಣದಲ್ಲಿ ಎಚ್ಚೆತ್ತು ಗಂಧರ್ವರ ಸೀಮೆಯಾಯಿತು. ಇಲ್ಲಿ ಶ್ರೋತ್ರೇಂದ್ರಿಯದ ಮೇಲಾದ ಪರಿಣಾಮದ ವಿಷಯವಿದೆ.

ಕಂಡಿತು ಕಣ್ಣು ಸವಿದಿತುನಾಲಿಗೆ
ಪಡೆದೀತೀ ದೇಹ
ಸ್ಪರ್ಶ-ಪಡೆದೀತೀ ದೇಹ

ಕೇಳಿತು ಕಿವಿಯು ಮೂಸಿತು ಮೂಗು
ತನ್ಮಯವೀ ಗೇಹಾ
ದೇವರದೀ ಮನಸಿನ ಗೇಹಾ

ಕಣ್ಣು ಸೂರ್ಯನ ಮತ್ತು ಪ್ರಕೃತಿಯನ್ನ ನೋಡಿತು; ನಾಲಿಗೆ ಅದರ ರುಚಿಯನ್ನ ಸವಿಯಿತು. ದೇಹ ಅದರ ಸ್ಪರ್ಶ ಪಡೆಯಿತು. ಕಿವಿಯು ಇಂಚರವನ್ನು ಕೇಳಿತು. ಪರಿಸರದ ವಾಸನೆ ಮೂಗಿಗೆ ಬಡಿಯಿತು. ದೇವರು ಕೊಟ್ಟ ಈ ದೇಹಕೆ ಅತೀಂದ್ರಿಯವಾದ ಸುಖ ಬೆಳಕಿನಿಂದ ದೊರಕಿತು.

ಅರಿಯದು ಅಳವು ತಿಲಿಯದು ಮನವು
ಕಾಣದೋ ಬಣ್ಣಾ
ಕಣ್ಣಿಗೆ ಕಾಣ್ವದೋ ಬಣ್ಣಾ
ಶಾಂತೀರಸವೇ ಪ್ರೀತಿಯಿಂದಾ
ಮೈದೋರೀತಣ್ಣಾ
ಇದು ಬರಿ ಬೆಳಗಲ್ಲೋ ಅಣ್ಣಾ

ಎನ್ನುವಲ್ಲಿ ಕವಿ ಬೆಳಗಾವಾಗ ಮೈದೋರಿರುವ ಶಾಂತಿರಸವನ್ನೇ, ಆ ಪರಮ ಕಾರಣ್ಯವನ್ನೇ ಕಂಡಿದ್ದಾರೆ. ಮೊದಲು ಚೆಲುವಾಗಿ ಇಂದ್ರಿಯಗಳನ್ನು ಮೋಹಿಸುವ ಒಂದು ರೀತಿಯ ನಲವಾಗಿ ಅಂತರಂಗವನ್ನು ತಣಿಸುವ, ಚೈತನ್ಯವಾಗಿ ಅನುಭವಕ್ಕೆ ಬರುವ ಈ ಸೌಂದರ್ಯ ಆ ದೈವೀಕೃಪೆಯಲ್ಲದೆ ಬೇರೆಯಲ್ಲ ಎಂಬ ಅನುಭವವಾಗುತ್ತದೆ[೨೩]."

ನಸುಕು (ಗಂಗಾವತರಣ - ೧೯೫೧)

'ನಸುಕು ಬಂತು ನಸುಕು' ಎಂಬ ಈ ಕವಿತೆಯಲ್ಲಿ ಕವಿ ನಸುಕನ್ನ ವರ್ಣಿಸಿದ್ದಾರೆ. ನಸುಕು ಎಂದರೆ 'ಬೆಳಗಿನಜಾವ' -

ಬೆಳಗು ಗಾಳಿ ತಾಕಿ ಚಳಿತು
ಇರುಳ ಮರವು ಒಡೆದು ತಳಿತು
ಅರುಣ ಗಂಧ ಹರುಹಿ ಒಳಿತು
ನಸುಕು ಬಂತು

ಬೆಳಗು ಗಾಳಿ ಬಂದಾಗ ಇರುಳು ಒಡೆದು ಅರುಣನ ಕಿರಣ ಹಾಗೂ ಬೆಳಗಿನ ಗಂಧ ಹರಡಿ ನಸುಕಾಯಿತು.

ಬೆಳಕು ಬಳ್ಳಿ ಬಿಟ್ಟು ಕುಡಿ
ಬಯಲಲೆತ್ತಿ ಹಗಲಗುಡಿ
ಅಡಗಿಸಿಟ್ಟು ರವಿಯ ಮಿಡಿ
ನಸುಕು ಬಂತು

---

೨೩. ಜಿ. ಎಸ್. ಶಿವರುದ್ರಪ್ಪ, ಸೌಂದರ್ಯ ಸಮೀಕ್ಷೆ, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೬೫, ಪು. ೩೪೫

ಅಡಗಿಸಿಟ್ಟಿದ ಬಯಲಗುಡಿಯನ್ನ ಅಡಗಿಸಿಟ್ಟಿದ ರವಿಯನ್ನ ಈ ಬೆಳಕು ಹೊರತಂದು ಬಯಲು ಮಾಡಿರುವ ನಸುಕು ಬಂತು.

ಬೆಳಗು ಸೂಸುತಿರಲು ಸುಸಿಲು
ಅದನು ಮೂಸುತಿರಲು ಉಸಿಲು
ಬೆಳಕು ಹೂತು ಆತು ಬಿಸಿಲು
ನಸುಕು ಬಂತು.

ಮುಂಜಾವು ಬೆಳಕನ್ನ ಸೂಸುತಿರಲು ಅದನ್ನ ಶ್ವಾಸೋಚ್ವಾಸ ಮೂಸುತಿರಲು ಬೆಳಕು ಹೂತು ಆಯಿತು ಬಿಸಿಲು ಎಂದಿದ್ದಾರೆ. ಇಲ್ಲಿ ಹೂತು ಎಂದರೆ ಹೂಬಿಟ್ಟ ಎಂದು ಅರ್ಥ. ಬೆಳಕಿನ ಹೂ ಎಂಬ ಕಲ್ಪನೆಯೇ ಚಿತ್ತಾಕರ್ಷಕವಾಗಿದೆ.

ಬೆಳಗುಜಾವ (ಬಾ ಹತ್ತರ - ೧೯೬೯/ಮುಕ್ತಕಂಠ - ೧೯೫೬)

'ಬೆಳಗುಜಾವ' ಎಂಬ ಕವನದಲ್ಲಿ ಪ್ರಕೃತಿಯಲ್ಲಿ ಹಾಗೂ ಮನುಷ್ಯನಲ್ಲಿ ಆಗುವ ಬದಲಾವಣೆಗಳನ್ನ ಕವಿ ಕಟ್ಟಿಕೊಟ್ಟಿದ್ದಾರೆ. ಬೆಳಗನ್ನು ಕಂಡು ನಮ್ಮ ಜನ ಆನಂದ ಪಡದೆ ಹೊತ್ತು(ಸೂರ್ಯ) ನೆತ್ತಿಗೆ ಬರುವವರೆವಿಗೂ ಜಡತ್ವದಿಂದ ಸೋಂಬೇರಿಗಳಾಗಿ ಮಲಗಿರುವ ಹಾಗೂ ಮಲಗುವ ಜನರಿಗೆ ತರಾಟೆ ತೆಗೆದುಕೊಂಡಿದ್ದಾರೆ. ಈ ಕವಿತೆಯಲ್ಲಿ ಕವಿ ಜನಪದಗೇಯತೆಯನ್ನು ಹೊಂದಿರುವ ಈ ಗೀತೆ ಎಲ್ಲರಿಗೂ ಅರ್ಥವಾಗುವಂತೆ ಶ್ರೀಸಾಮಾನ್ಯನ ನೆಲೆಯಲ್ಲಿ ನಿಂತು ಬೆಳಗಿನ ಜಾವದ ಆರಾಧನೆ ಕವಿ ಹಾತೊರೆಯುತ್ತಿರುವುದನ್ನು ಹಾಗೂ ಎಲ್ಲರಲ್ಲೂ ಹಾತೊರೆಯುವ ಭಾವವುಂಟಾಗುವಂತೆ ಮಾಡುತ್ತಿದ್ದಾರೆ.

ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯ ಕಣ್ಣ,
ನಕ್ಷತ್ರ ಜಾರಿ, ತಮವೆಲ್ಲ ಸೋರಿ, ಮಿಗಿಲಹುದು ಬಾನ ಬಣ್ಣ
ಜೇನ್ನೊಣದ ಹೆದೆಗೆ ಹೂಬಾಣ ಹೂಡಿ ಝುಂ ಎಂದು ಬಿಟ್ಟ ಮಾರ,
ಗುಡಿಗೋಪುರಕ್ಕು ಬಲೆ ಬೀಸಿ ಬಂದ ಅಗೊ ಬೆಳಕು ಬೇಟೆಗಾರ.

ಹೇಗೆ 'ಹುಲಿಕಂಡ ಹುಲ್ಲೆಯಂತೆ ಹೆದರಿ ಓಡುವುದೋ ಹಾಗೂ ಬೇಟೆಗಾರರನನ್ನ ಕಂಡು ಮಿಗಗಳು ಪಲಾಯನಗೊಳ್ಳುವವೋ ಹಾಗೆ ಈ ಬೆಳಕು ಎಂಬ ಬೇಟೆಗಾರ ಬಂದಾಗ ನಕ್ಷತ್ರವು ಜಾರುವುದು, ತಮವೆಲ್ಲ ಸೋರುವುದು, ಬಾನಿನಲ್ಲಿ ಬಣ್ಣ ಮೈದಾಳಿದಾಗ ಎಲ್ಲರ ಮನಸ್ಸಿಗೂ ಅವರ್ಣನೀಯ ಆನಂದ, ಉತ್ಸಹ, ಉಲ್ಲಾಸ ಮೂಡಿ ರಸಿಕತೆ ಮೈದಾಳುವುದು. ಬೆಳಕು ಎಂಬ ಮಾರನಿಂದ, ಬೆಳಕು ಎಂಬ ಬಲೆಯನ್ನೆಲ್ಲ ಇಳೆಯಲೆಲ್ಲ ಹರಡಿ ಎಲ್ಲರನ್ನು ಸೆರೆಗೊಯ್ಯುವ ಬೇಟೆಗಾರ ಈ ಬೆಳಕು.

ಅವನ ಒಲುಮೆಯ ಬಲೆಗೆ ಸಿಕ್ಕಿದಾಗ ನಿಶೆಯ ಉಷೆಯ ಎಳೆನಗೆಗೆ ಸೋತು ತನ್ನನ್ನ ಆ ಉಷೆಗೆ ಅರ್ಪಿಸಿಕೊಂಡು ಅದರಲ್ಲಿ ಲೀನವಾಗುತ್ತಿರುವುದನ್ನ ಕವಿ "ಮಕ್ಕಳಿರ ಕೇಳಿ ರಸ ಕುಡಿಯಲೇಳಿ, ಹುಸಿನಿದ್ದೆಗಿದ್ದೆ ಸಾಕು" ಎನ್ನುತ್ತಿದ್ದಾರೆ. ಈ ಬೆಳಗಿನ ಜಾವವನ್ನು ಒಂದು ದಿನದ ಮಟ್ಟಿಗೆ ಅನುಭವಿಸಿಬಿಡುವುದಲ್ಲ ಅದು ಪ್ರತಿಕ್ಷಣಕ್ಕೂ ಹೊಸತಾಗಿಯೇ ಕಾಣುತ್ತಿರುತ್ತದೆ. ಆದುದರಿಂದ ತುಂಬುಬಾಳಿನಿಂದ ತುಂಬಿರುವ ತನಕ ತುಂತುಂಬಿ ಕುಡಿಯಬೇಕು.

ಮುಂದಿನ ಮೂರನೇ ವೃತ್ತದಲ್ಲಿ ಕೋಳಿ ಚಿತ್ರವನ್ನ ತರುತ್ತಾರೆ. ಈ ಪ್ರತಿಮೆ ಪ್ರಾಚೀನ ಕವಿಗಳಿಂದಲೂ ಬಂದಂತ್ತದ್ದು ಎಂಬುದನ್ನು ಈಗಾಗಲೇ ಪ್ರಾಚೀನ ಕನ್ನಡ ಸಾಹಿತ್ಯ ಸೂರ್ಯೋದಯ ವರ್ಣನೆಯಲ್ಲಿ ಕೋಳಿಯ ಕೂಗಿನ ವರ್ಣನೆಯನ್ನ ನೋಡಿದ್ದೇವೆ. ಬೇಂದ್ರೆಯವರು ಕೂಡ ಆ ಚಿತ್ರವನ್ನ ಇಲ್ಲಿ ತಂದಿದ್ದಾರೆ.

ಯಾವಾಗೊ ಕೋಳಿ ಕೂಗಿಹುದು ಏಳಿ, ತಡವೇಕೆ ಪಾನಕೇಳಿ
ಮೊದಲಾಗಲೀಗ ಅಂಗಡಿಯ ಕದವ ಈ ಕ್ಷಣಿಕೆ ತೆರೆಯ ಹೇಳಿ
ಜೀವನದ ನದಿಗೆ ಸೆಳವಿಹುದು, ಮರಣ ಬಂದೀತು ಕ್ಷಣವು ಉರಳಿ
ಹೋದವರು ತಿರುಗಿ ಬಂದಾರೆ ? ಅವರು ಬರಲಿಕ್ಕು ಇಲ್ಲ ಮರಳಿ.

ಜೀವನ ಎಂಬುದೇ ಅಂಗಡಿ, ಆ ಅಂಗಡಿಯ ಕದವ ತೆಗೆದು ಬೆಳಗಿನ ಜಾವದ ಸ್ಪರ್ಶಕ್ಕೆ ಮೈಯೊಡ್ಡಿ ಎನ್ನುತ್ತಿದ್ದಾರೆ. ಹುಟ್ಟಿನ ಬೆನ್ನೊಟ್ಟಿಗೆಯೆ ಸಾವು ಕೂಡ ಬರುತ್ತಿರುತ್ತದೆ. ಅದು ಬರುವುದರೊಳಗೆ ಇಂತಹ ಸೌಂದರ್ಯದ ಆನಂದವನ್ನ ಕಾಣೆ. ಈ ಬೆಳಕಿನಿಂದ -

ಬಾನ್ ಹೊಗರಲುಂಟು, ಮರ ಚಿಗುರಲುಂಟು, ಬರಲುಂಟೆ
ಸುಗ್ಗಿ ಮತ್ತೆ,
ಮುಳುಗಿರಲಿ ಮುಪ್ಪು ಚಿಂತನದಿ ತಾನು ಹರೆಯಕ್ಕೆ
ಬೇರೆ ಹೊತ್ತೆ ?

ಹೇಗೆ ಕತ್ತಲಾದ ಬಾನು ಬೆಳಕಿನಿಂದ ಪ್ರಕಾಶಿಸುವುದೋ, ಬೋಳು ಮರವು ಹೇಗೆ ಚಿಗುರೊಡೆಯುವುದೋ, ಹಾಗೆ ಮುಪ್ಪಿಗೂ ಬೆಳಗಿನ ಜಾವದಿಂದ ಹರೆಯ ಹೊಮ್ಮುವುದು ಎಂದಿದ್ದಾರೆ ವರಕವಿ ಬೇಂದ್ರೆಯವರು.

ಉದಯರವಿ ತಂಪುಕೆಂತ (ಶ್ರೀಮಾತಾ - ೧೯೬೮)

ಬೇಂದ್ರೆಯವರ ಮತ್ತೊಂದು ಸರಳವಾದ ಸೂರ್ಯೋದಯ ಕವನ ಎಂದರೆ ಉದಯರವಿ ತಂಪುಕೆಂಡ. ಇದು ಆದ್ಯಾತ್ಮಗೀತೆಯಾಗಿದೆ. ಅಧ್ಯಾತ್ಮದಲ್ಲಿ ಸೂರ್ಯಭಗವಾನನನ್ನ ದರ್ಶಿಸುತ್ತಿದ್ದಾರೆ ಕವಿ.

ಕದಳಿ ಕದಡಿತು ಪೂರ ಬಂತು ಕರ್ಪೂರ
ಉರಿ ಹತ್ತಿ ಉಳಿದದ್ದು
ಬರಿ ವಾಸನೆ

ಇಲ್ಲಿ ಕದಳಿ ಎಂದರೆ ಬಾಳೆಗಿಡವಲ್ಲ. ಆಧ್ಯಾತ್ಮದ ಒಂದು ಸಂಕೇತ. ಕದಳಿ ಎಂದರೆ ಇನ್ನೊಂದರ ಅರ್ಥ ತಮವು ಸುಟ್ಟು, ಬೆಳಕಿನ ಕರ್ಪೂರ ಉರಿದು ಬಂತು (ಇಲ್ಲಿ ಬೆಳಕು) ಅದು ಉರಿದುಬಂದಾಗ ಕರ್ಪೂರ ಉರಿದಾಗ ಹೇಗೆ ಬೂದಿ ಸಿಗುವುದಿಲ್ಲವೋ ಬರಿ ವಾಸನೆ ಮೂಗಿಗೆ ಗೋಚರಿಸುವುದೋ ಹಾಗೆಯೇ ಬೆಳಕು ಬಂತು.

ಶೇಷ ಸಹ ಭಾವಃ ಥಳ ಹಳಕು ಹಳಕು
ಇಲ್ಲಿ ಹುಳುಕು
ಇಲ್ಲ ಕೊಳಕು

ಇದನ್ನ ವ್ಯಾಖ್ಯಾನದಲ್ಲಿ ಸಂಪೂರ್ಣವಾಗಿ ಓಡಿಯಲು ಸಾಧ್ಯವಿಲ್ಲ, ಮುಂದಿನ ಸಾಲಿನಲ್ಲಿ

ಇದು ಯಾವ ಗಂಧವೋ ಘ್ರಾಣದಲ್ಲಿ ?
ಕಂಪುಕಂಪಿಸುತಿಹುದು ಪ್ರಾಣದಲ್ಲಿ ?

'ಅಹಂ-ಕೋಹಂ ? ಸೋಹಂ ! ನಾಹಂ' ಎಂಬುದು 'ನಾನು ಯಾರು' 'ಅದು ನಾನು' 'ನಾನು ಅದಲ್ಲ' ಅಧ್ಯಾತ್ಮದ ಪರಿಭಾಷೆ ಮಿಳಿತವಾಗಿದೆ.

ಕವಿ ಬಾಳನ್ನು ಕೊನೆಯ ಸಾಲಿನಲ್ಲಿ ಚಿತ್ರಿಸಿದ್ದಾರೆ. "ಬಾಳೆ ಪಿಂಡ" ಎಂದರೆ ಬಾಳೆಗಿಡ ಪಿಂಡ ಎಂದು ಒಂದರ್ಥವಾದರೆ ಇನ್ನೊಂದರ ಅರ್ಥ 'ಬಾಳು' ಪಿಂಡ ಎಂದು. ಕವಿಗೆ ರವಿ ಉರಿಯುವ ಕೆಂಡದಾಗೆ ಕಾಣದೆ ಮೈಮನಕ್ಕೆ ತಂಪು ಕೊಡುವ "ತಂಪುಕೆಂಡ"ವಾಗಿ ಕಂಡಿದ್ದಾನೆ.

ನಮೋನಮಃ (ಮರ್ಯಾದೆ - ೧೯೬೬)

'ನಮೋ ನಮಃ' ಎಂಬ ಮತ್ತೊಂದು ಆಧ್ಯಾತ್ಮ ಪರಿಭಾಷೆಯಲ್ಲಿ ಸೂರ್ಯನನ್ನು ವರ್ಣಿಸಿದ್ದಾರೆ. ನಮೋನಮಃವು ಸೂರ್ಯನಿಗೆ.

ನಿಸರ್ಗಮಾರ್ಗದ ನೇಸರನೇ
ಗಗನ ಕಮಲದಾ ಕೇಸರನೇ

ಎಂದು ಸೂರ್ಯನನ್ನು ಎಲ್ಲರಿಗೂ ಅರ್ಥವಾಗುವ ಹಾಗೆ ವರ್ಣಿಸಿದ್ದಾರೆ. ನಿಸರ್ಗಮಾರ್ಗದ ನೇಸರ, ಗಗನದಲ್ಲಿ ಕಮಲದ ಹೂವಿನಂತಿರುವವನೆ

ಅಬ್ಜಜಾತನೇ ಅಕ್ಷರನೇ !
ತಸ್ಕರ ಮಾರಕ ಭಾಸ್ಕರನೇ !
ಸ್ಥಿತಿಲಯ ಛಂದೋಕಾರಕನೇ !

ಅಬ್ಜನ ಮಗನೇ, ಅ+ಅಕ್ಷರದಂತೆ ಅಂದರೆ ನಾಶವಿಲ್ಲದವನೆ, ತಸ್ಕರ (ಕತ್ತಲು) ನಿಗೆ ಮಾರಕನಾಗಿರುವವನೆ ಭಾಸ್ಕರನೇ ನಿನಗೆ ನಮೋ ನಮಃ ಎಂದು ಸ್ತುತಿಗೈಯುತ್ತಿದ್ದಾರೆ.

ಸತ್‌ಚಿತ್ ಜಗದೋದ್ಧಾರಕನೇ
ಬದುಕಿಗೆ ಬಾಳಿನ ಪ್ರೇರಕನೇ
ಮುದುಕಿಗೆ ಮುತ್ತಿನ ಹಾರಕನೇ

ಸತ್‌ಆದ್‌ಚಿತ್‌ಕ್ಕೆ ಜಗಕ್ಕೆ ಉದ್ಧಾರಕನಾಗಿ ಇರುವವನೆ, ಎಲ್ಲರ ಬಾಳಿನ ಬೆಳಕಿಗೆ ಪ್ರೇರಕನೆ

ಅಂಬಿಕೆ ಬಿಂಬಿಸೆ ತಾರಕನೇ
ವಿಸರ್ಗದಾನುಸ್ವಾರಕನೇ !

ಅಂಬಿಕಾತನಯದತ್ತನನ್ನ ಬಿಂಬಿಸಿದವನೆ ಅನುಸ್ವಾರಕನಂತೆ ದುಂಡಗೆ (O) ಇರುವವನೆ ನಿನಗೆ ನಮೋ ನಮಃ ಎಂದು ಸ್ತುತಿಪಠನೆ ಮಾಡಿದ್ದಾರೆ ಬೇಂದ್ರೆಯವರು.

ಸೂರ್ಯಪಾನ (ಸೂರ್ಯಪಾನ - ೧೯೫೬)

ಸೂರ್ಯನನ್ನು ಆಸ್ವಾದಿಸಬೇಕು ಎಂದು ಕವಿ ಹೇಳುತ್ತಿದ್ದಾರೆ. ಆರೋಗ್ಯ ದೃಷ್ಟಿಯಿಂದ ಸೂರ್ಯನ ಮುಂಜಾವಿನ ಬೆಳಕು ಜೀವನಿರೋಧಕ ಶಕ್ತಿಯನ್ನು ಪಡೆದಿದೆ. ಪ್ರತಿಯೊಬ್ಬನಿಗೂ ಈ ಅಮೃತ ಕಿರಣದ ಅವಶ್ಯಕತೆ ಇದ್ದೇ ಇದೆ ಎಂದು ವೈದ್ಯಕ್ಷೇತ್ರದಲ್ಲಿ ಮಾತಿದೆ. ಅದನ್ನೇ ಕವಿ ಇಲ್ಲಿ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಸೂರ್ಯನ ಬೃಹತ್ತು-ಮಹತ್ತುಗಳನ್ನ ಸಾರುತ್ತಿದ್ದಾರೆ.

ಏನಿದರ ಔನ್ನತ್ಯ ಏನಿದರ ಔದ್ಧತ್ಯ
ಕುಕ್ಕಿಸುವ ಕಣ್ಣುಗಳ ದಿಟ್ಟಿಸುವದು
ಬಾನಿಗಣ್ಣಿನ ಬಿಸಿಯ ಹಸಿಯಾರದಲೆ ಕುಡಿದು
ಬೆಳಕ ನೀರಡಿಕೆಯನು ಹುಟ್ಟಿಸುವದು.

ಸೂರ್ಯನ ನೋಟವು ಔನ್ನತ್ಯದಿಂದ ಔದ್ಧತ್ಯದಿಂದ ಕೂಡಿ ಕಣ್ಣುಗಳನ್ನ ಕುಕ್ಕುತಿದೆ, ಮುಂಜಾವಿನ ಬೆಳಕು ಬಾಡಿ ಹೋಗುವ ಮುನ್ನ ಕುಡಿಯಬೇಕು. ಈ ಬೆಳಕನ್ನ ಎಷ್ಟು ಕುಡಿದರು ಸಾಲದು, ಮತ್ತೆಮತ್ತೆ ಬೇಕು ಎಂಬ ತೃಷೆಯೇ ಹೊರತು ಸಾಕು ಎಂಬ ಭಾವನೆ ಆಗುವುದಿಲ್ಲ.

ಸೂರ್ಯಪಾನವ ನೋಡು ಹೇಗೆ ನಿಂತಿಹುದು
ಎನುವಂತೆ ದಿವ್ಯತೆಯ ದೀಕ್ಷೆ ಇಂತಿಹುದು
ಮೇರುದಂಡವು ಚಿಗಿತು ಹೂತ ಹಾಗೆ
ಹೃದಯದಾಕೂತಿಗಿದೆ ಕಣ್ಣು ಮೇಗೆ

ಸೂರ್ಯಕಳಸ (ಪಾನಕ್ಕೆ ಇರುವ ಅರ್ಘ ಕಳಸ) ನೋಡು ಹೇಗೆ ನಿಂತಿಹುದು ಎನ್ನುವಂತೆ ಭವ್ಯತೆಯಿಂದ ದಿವ್ಯತೆಯಿಂದ ಕೂಡಿದೆ. ಅದರ ಭವ್ಯನೋಟ ನನ್ನ ಕಣ್ಣಿನ ಹೃದಯದಲ್ಲಿ ನರ್ತಿಸುತಿದೆ ಎನ್ನುತ್ತಾರೆ ಕವಿ. ಕವನ ಲೌಕಿಕದ ನೆಲೆಯಿಂದ ಅಲೌಕಿಕ ನೆಲೆಗೆ ಏರುವುದು ಇದರ ವೈಶಿಷ್ಟ್ಯ

ಮಾತು-ಮೌನ (ಸೂರ್ಯಪಾನ - ೧೯೩೬)

ಸೂರ್ಯಪಾನ ಕವನಸಂಕಲನದ ಮತ್ತೊಂದು ಅರುಣೋದ್ಯ ಗೀತೆ ಎಂದರೆ "ಮಾತು ಮೌನ"

ದಿನದ ರವಿಯ ಪ್ರಬೆ ಚುಕ್ಕೆ ಚೂರಾಗಿ ದಿಕ್ಕು ದಿಕ್ಕಿನಲ್ಲಿ
ಸಿಕ್ಕಿಕೊಂಡಿತೋ ಕತ್ತಲಲ್ಲಿ ಇಕೊ ನಿಶೆಯು ಸಿಕ್ಕಿತಿಲ್ಲಿ.

ಸೂರ್ಯ ಮೂಡಿದಾಗ ಅವನ ಕಿರಣವು ಚೂರುಚೂರಾಗಿ ದಿಕ್ಕು ದಿಕ್ಕಿಗೆಲ್ಲ ಪಸರಿಸಿ ನಿಶೆಯನ್ನು ಸೆಕ್ಕಿತಂತೆ. ಈ ಕಿರಣಗಳು ಉಲ್ಕೆಗಳಂತೆ ಬಿದ್ದಾಗ ಕತ್ತಲರಾಜ ಚಂದಿರನು ಮರೆಯಲ್ಲಿ ಅವಿತು ಸೂರ್ಯನ ಪ್ರಭೆಯನ್ನು ಇಣುಕಿ ಇಣುಕಿ ನೋಡುತ್ತಿದ್ದನಂತೆ.

ಎಲ್ಲಾ ಜೀವಕೋಟಿಗಳಿಗೂ ಜೀವ ದ್ರವ್ಯ ಸೂರ್ಯ ಇವ ಬಂದ ಕೂಡಲೆ ಸಸ್ಯಸಂಕುಲಗಳು ಭೂಮಿಯ ತುಂಬೆಲ್ಲ ಕುಸುಮ ಹಾಸಿಗೆಯನ್ನ ಹಾಸಿ, ಬೇಲಿಬೇಲಿಯಲ್ಲಿಯೂ ಹಕ್ಕಿಗಳ ಸುಪ್ರಭಾತವು ಕೇಳಿ ಬರುತ್ತವೆ

ಮನವು ಮೌನದಲಿ ಹಪ್ಪುಗೊಂಡಿರಲು ಈ ಅವರ್ಣನೀಯವಾದ ನೋಟವನ್ನ ಮೌನದಿಂದ ಸವಿಯಬೇಕೆ ಹೊರತು ಬಣ್ಣಿಸಲು ನಿಲುಕುವುದಿಲ್ಲ ಎಂದು ಆ ನೋಟವನ್ನು ಬೇಂದ್ರೆ ನೋಡಿ ಅದರಲ್ಲಿ ಒಂದಾಗುತ್ತಾರೆ.

ಉಷಾಸೂಕ್ತ (ಹಾಡು-ಪಾಡು - ೧೯೪೬)

ಉಷಾಸೂಕ್ತ ಎಂಬ ಕವನದಲ್ಲಿ ಉಷೆಯ ರಾಯಭಾರವನ್ನು ಕವಿ ಸಶಕ್ತವಾಗಿ ಚಿತ್ರಿಸಿದ್ದಾರೆ. ಉಷೆಯು ಭೂಮಿಗೆ ಬರುವಾಗಲೇ ಕತ್ತಲೆಯೊಡನೆ ಜಗಳವಾಡಿ ಅದನ್ನ ಹೊಸೆದು ತಿಕ್ಕಿ ಬರುತ್ತದೆ.

ಕತ್ತಲನ್ನು ಹೊಸೆತು ತಿಕ್ಕೆ
ಹಡೆದಿತೇನೊ ಬೆಳ್ಳಿ ಚುಕ್ಕೆ

ಬಿಸಿಯು ಸಾಕು ಏಕೆ ಬಿಸಿಲು
ತಂಪಿನಲ್ಲೆ ತಣಿಯು ಸುಸಿಲು
ಜಡಜಗವೂ ಆಡಿ ಉಸಿಲು

ಈ ನುಡಿಯ ಪದಪೊಂಭಾವಣೆಯೇ ಕವನವನ್ನು ಆಕರ್ಷವಾಗಿಸುತ್ತದೆ. ಸರಳವಾದ ಮಾತುಗಾರಿಕೆ ತಂಪಾದ ಸುಸಿಲನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುತ್ತವೆ.

ಕವಿ ಮುಂಜಾವಿನ ಬೆಳಕೆ ಸಾಕು ? ಎಂದು ಪ್ರಶ್ನಿಸುತ್ತಿದ್ದಾರೆ. ಬಿಸಿಲು ಎಂದರೆ ಅದು ಉರಿಕೆಂಡ; ಮುಂಜಾವು ಎಂದರೆ ತಂಪುಗೆಂಡ. ಹರಿಹರ ತನ್ನ 'ಗಿರಿಜಾ ಕಲ್ಯಾಣ'ದಲ್ಲಿ ಬಿಸಿಲುಗಳನ್ನ ಈ ರೀತಿ ಗುರುತಿಸುತ್ತಾನೆ.

ಮರದಡಿಯೊಳ್ ಕಾನಮೊಳ್
ಗಿರಿತಟದೊಳ್ ಬಟ್ಟ ಬಯಲೊಳಂಬರತಳದೊಳ್
ಕರಿಯ ಬಿಸಿಲುರಿಯ ಬಿಸಿಲ
ಚ್ಚರಿಯ ಬಿಸಿಲ್ ಪಿರಿಯಬಿಸಿಲಖಂಡಿತದ ಬಿಸಿಲ್

ಈ ರೀತಿ ಹರಿಹದ ಬಿಸಿಲಿನ ವಿವಿಧ ಪ್ರಕಾರಗಳನ್ನ ಮನಮುಟ್ಟುವಂತೆ ವರ್ಣಿಸುತ್ತಾನೆ.

ಬಿಸಿಲು ಅಶಕ್ತ ದುರ್ಬಲರನ್ನು ಪಾಣಾಪಾಯಕ್ಕೆ ಒಡ್ಡುವುದರಲ್ಲಿ ಅಚ್ಚರಿಯಿಲ್ಲ. ಆದ್ದರಿಂದ ಆ ಬಿಸಿಲು ಬೇಡ ಎನ್ನುತ್ತಿದ್ದಾರೆ.

ಬಿಸಿಯೆ ಸಾಕು ಏಕೆ ಬಿಸಿಲು
ತಂಪಿನಲ್ಲೆ ತಣಿಯೆ ಸುಸಿಲ
ಜಡ ಜಗವೂ ಆಡಿ ಉಸಿಲು

ಜಡವಾದ ಜಗವು ಬಿಸಿಯ ಸೋಂಕಿನಿಂದ ಚೈತನ್ಯಗೊಳ್ಳುತ್ತವೆ, ಬೆಳಕ ಕುಣಿತ ಕೇಳಿಯೇ ನಡೆಯುತ್ತದೆ..

ಬೆಳಕ ಕುಣಿತ ಕೇಳಿ
ಎದ್ದಿತು ಮಲಗಿದ್ದ ಗಾಳಿ
ಗಿಡಬಳ್ಳಿಗೆ ಏಳಿ ಏಳಿ

ಅದುವರೆವಿಗೂ ಮಲಗಿದ್ದ ಗಾಳಿಯು ಎಚ್ಚರಗೊಂಡು ಗಿಡ ಬಳ್ಳಿಗಳನ್ನು "ಏಳಿ ಏಳಿ ಬೆಳಗಾಯಿತು" ಎಂದು ಹೇಳವಂತೆ ತೋರುತ್ತದೆ. ಸೃಷ್ಟಿಯು ಚಲನವಲನವನ್ನು ಬೇಂದ್ರೆ ಇಲ್ಲಿ ಸೊಗಸಾಗಿ ಗುರುತಿಸಿದ್ದಾರೆ.

ನೂತನ (ಮುಗಿಲ-ಮಲ್ಲಿಗೆ - ೧೯೯೧)

ನೂತನ ಎಂದರೆ ಹೊಸ ಎಂಬ ಅರ್ಥವು ಇದೆ. ಕವಿಯೇ "ಚೈತ್ರದ ರವಿಯ ದಿಗ್ವಿಜಯಕೆ ನಿಂತಸು" ಎಂದಿರುವುದರಿಂದ ಚೈತ್ರ ಮಾಸದ ಸೂರ್ಯೋದಯವನ್ನ ಕುರಿತು ಹೇಳುತ್ತಿದ್ದಾರೆ ಎಂದು ಖಚಿತವಾಗಿ ಗೊತ್ತಾಗುತ್ತದೆ.

ಚೈತ್ರದ ಪ್ರಾರಂಭ ನಿಸರ್ಗದಲ್ಲಿ ಹೊಸ ಚೈತನ್ಯೋತ್ಕರ್ಷದ ಕಾಲ. ಸೂರ್ಯನ ಕೃಪೆಯಿಂದ ನೆಲದ ಸೃಜನಶೀಲತೆ ಹಾಗೂ ಸಮೃದ್ಧವಾದ ಬಣ್ಣ ಬೆಡಗುಗಳು ಪ್ರಕಟವಾಗುವ ಕಾಲ. ಇಂಥಕಾಲದ ಸೂರ್ಯನನ್ನ ಕಂಡು ಬೆರಗಾಗದ ಕವಿಯಿಲ್ಲ, ಮರುಳಾಗದ ಕಲೆಗಾರನಿಲ್ಲ, ಸಂತೋಷಪಡದ ಹೃದಯವಿಲ್ಲ.

'ಎಲೆನೂತನ ಹೊಸಹೊಸತನ ನೀ ಚಿತ್ತ ಚೇತನಾ'. 'ಎಲೆನೂತನ' ಎಂಬ ಸಂಬೋಧನೆಯಲ್ಲಿಯೇ ಆತ್ಮೀಯತೆಯ ಸ್ಪರ್ಶವಿದೆ. ಎಲೆ ಎಂಬುದರಿಂದ ನಾನಾರ್ಥ ಸ್ಫುರಿಸುತ್ತದೆ. ಒಂದು ಎಲೆ (leaf) ಎಂದು, ಇನ್ನೊಂದು ಸಂಬೋಧನೆಯ

ಅರ್ಥ ಎರಡೂ ಅರ್ಥಗಳು ಇಲ್ಲಿ ತುಂಬಿದೆ.

'ಎಲೆ ಚೈತ್ರ ಮಾಸದ ಸೂರ್ಯನೆ ನೀನು ನೂತನವಾಗಿ ಇರುವಿ. ಹೊಸ ಹೊಸ ಬನಾಗಿ ಬಂದು ಹೊಸ ಹೊಸತನವನ್ನು ತೋರಿಸಿರುವಿ. ನೀನು ನಿಜಕ್ಕೂ ಚೇತನಾ ಎನ್ನುತ್ತಾರೆ. ಸೂರ್ಯನ ಉದಯದಲ್ಲಿ ನೂತನತೆಯನ್ನ ಚೈತನ್ಯವನ್ನೂ ಕಾಣುವ ಕವಿಯ ದೃಷ್ಟಿ ತುಂಬ ಸಹಜವಾಗಿದೆ.

ಬೆಳಕನೆರೆದು ತಮವ ಹರಿದು ತೆರೆಯೋ ಅವಗುಂಠನಾ
ರವಿಸಮಾನ ಅನುಪಮಾನ ಎಲೆ ನವೀನ ನೂತನಾ

ಬೆಳಕನೆರೆದು ತಮವ ಕಳೆದು ಕತ್ತಲ ಅವಗುಂಠನ ತೆರೆಯ ಮುರಿದು ಚೈತನ್ಯೋತ್ಕರ್ಷವನ್ನು ಉಂಟು ಮಾಡಿರುವ ರವಿಸಮಾ+ನ ರವಿಯ ಸಮ ಯಾರೂ ಇಲ್ಲ ಅವನು ಉಪಮಾತೀತ.

ಬೇಸಿಗೆಯನು ಹಾಸಿ ಬರಲಿ ಚಿರಯುವಕ ವಸಂತನು
ಕುಸುಮವು ಪುಂಖಾನುಪುಂಖ
ಕವಿಯಲ್ಲಿಯೆ ಚೈತ್ರ ರವಿಯ ದಿಗ್ವಿಜಯಕೆನಿಂತನು

ಋತುವನ್ನು ಪರಿವರ್ತಿಸಿ ಚೈತ್ರಮಾಸದ ಚೈತನ್ಯೋತ್ಕರ್ಷವನ್ನು ಉಂಟು ಮಾಡಿ ಹಾಡು, ಕುಣಿತ ಉತ್ಸವ ಉಗ್ಗಡಿಸುತ್ತ ವಸಂತದ ಚೆಲುವನ್ನ ಸೇಯ್ದು ಎಲ್ಲೆಲ್ಲೂ ಎಲ್ಲರಲ್ಲೂ ಹರೆಯವನ್ನ ಉಕ್ಕಿಸಿ ಹೊಸತನವನ್ನ ಉತ್ಕರ್ಷಿಸಿ ದಿಗ್ವಿಜಯಕ್ಕೆಗೊಂಡಿರುವ ಚೈತ್ರರವಿಯೇ ನೂತನ

ಹೀಗೆ ಸೂರ್ಯೋದಯ ಕವನವನ್ನು ಬೇಂದ್ರೆಯವರನ್ನು ಅಮರ ಭಾವಗೀತಕಾರರನ್ನಾಗಿಸಿದೆ. ಅವರ ಗೀತೆಗೆ ಭಾವ ತೀವ್ರವಾಗಿ ಗಾನಪ್ರಧಾನವಾಗಿ ಅನನ್ಯ ಮನೋಹರತೆಯಿಂದ ವಿಶಿಷ್ಟತೆಯನ್ನ ಪಡೆದಿದೆ. ಅವರ ಅನೇಕ ಸೂರ್ಯೋದಯ ಕವನಗಳು ಅವರ ಗೀತೆಗಳಿಗೆ ಜನಪದಗೇಯತೆ ಇರುವುದರಿಂದ ಅವರ ಗೀತೆಗಳು ಎಲ್ಲರ ಬಾಯಲ್ಲೂ ಕೇಳಿ ಬರುತ್ತಿರುವುದು ಅವರ ಜನಪ್ರಿಯತೆಯ ಕುರುಹುವಾಗಿದೆ.

ಅಧ್ಯಾಯ - ಐದು

ತೌಲನಿಕ ದೃಷ್ಟಿ, ಒಟ್ಟು ನೋಟ

ಅಧ್ಯಾಯ - ಐದು
ತೌಲನಿಕ ದೃಷ್ಟಿ ಒಟ್ಟು ನೋಟ

ಕುವೆಂಪು, ಪು.ತಿ.ನ., ಬೇಂದ್ರೆ ಕವನಗಳಲ್ಲಿ ಒಂದೇ ಹೆಸರಿನ ಸೂರ್ಯೋದಯ ಗೀತೆಗಳು

ಕುವೆಂಪು, ಪು.ತಿ.ನ., ಬೇಂದ್ರೆ ಅವರು ನವೋದಯ ಕವಿಗಳು. ಆ ಮೂವರನ್ನು ಸೂರ್ಯೋದಯ ಗೀತೆಯು ಆಕರ್ಷಿಸಿವೆ. ಕವನಗಳಲ್ಲಿ ಒಂದೇ ಅರ್ಥ ಬರುವ ಬೇರೆ ಬೇರೆ ಪದಗಳಲ್ಲಿ ಸೂರ್ಯೋದಯವನ್ನು ನೆನೆದಿದ್ದಾರೆ. ಅಂತಹ ಕವನವೆಂದರೆ ಕುವೆಂಪು ಅವರ ನವೀನ (ನವಿಲು) ಪು.ತಿ.ನ ಅವರ ನವೋದಯ (ಮಾಂದಳಿರು) ಬೇಂದ್ರೆ ಅವರಲ್ಲಿ ನೂತನ (ಮುಗಿಲ ಮಲ್ಲಿಗೆ)

ಕುವೆಂಪು ಅವರ 'ನವೀನ' ಕವಿತೆ ಮೇಲ್ನೋಟಕ್ಕೆ ಸೂರ್ಯೋದಯದ ಕವಿತೆಯಂತೆ ಕಂಡರೂ ಅಂತರಾಳದಲ್ಲಿ ಸ್ವಾತಂತ್ರ್ಯದ ಆಗಮನದಿಂದ ದೇಶದಲ್ಲಿ ಆಗುವ ರೀತಿನೀತಿಗನ್ನು ಪ್ರತಿಬಿಂಬಿಸುತ್ತಿದೆ. ಆದರೆ ಕವಿ ಪುಯತಿ.ನ ಅವರ ನವೋದಯಂ (ಮಾಂದಳಿರು) ಕವನದಲ್ಲಿಯೂ ಕೂಡ ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದಿಂದ ದೇಶದಲ್ಲಿ ಆಗುವ ಬದಲಾವಣೆಯನ್ನ ಹೇಳುತ್ತಿದೆಯೋ ಎನ್ನಿಸುತ್ತದೆ. ಆದರೆ ಇಲ್ಲಿ ಶುದ್ಧ ಸೂರ್ಯೋದಯದ ಸೊಬಗಿನ ಚಿತ್ರ ಬಿಟ್ಟರೆ ಉಳಿದೇನೂ ಇಲ್ಲ. ಈ ಕವಿತೆಯ ಒಂದು ವೈಶಿಷ್ಟ್ಯವೇನೆಂದರೆ ಪು.ತಿ.ನ. ಅವರು ಪುರಾಣದ ಪ್ರತಿಮೆಯೊಂದನ್ನು ಕೊಟ್ಟು ಹೇಳಿರುವುದು.

> ದಾನವಹೃತ ಮೇದಿನಿಯಂ
> ದಂಷ್ಟ್ರಾಗ್ರದೊಳಿರಿಸಿ
> ಭೂದಾರಂ ಪಾತಳವ
> ನುಳಿದೆದ್ದನೋ

ಎಂದು ಭಗವಾನ್ ವಿಷ್ಣು ವರಾಹ ರೂಪದಲ್ಲಿ ಹಿರಣ್ಯಾಕ್ಷನನ್ನು ಸಂಹರಿಸಿ ಭೂಮಿಯನ್ನು ತನ್ನ ಕೋರೆದಾಡೆಗಳಲ್ಲಿರಿಸಿಕೊಂಡು ಬಂದ ಹಾಗೆ ಸೂರ್ಯೋದಯ ಕವಿಗೆ ಕಾಣುತ್ತದೆ.

ಈ ಬಗೆಯ ಸಂಸ್ಕೃತ ಭೂಯಿಷ್ಠ ಶೈಲಿಯನ್ನು ಕುವೆಂಪು ಅವರು 'ಇಂದ್ರ ದಿಗಂತದಿ' (ಪಕ್ಷಿಕಾಶಿ) ಎಂಬ ಕವನದಲ್ಲಿ ಸ್ವಲ್ಪ ಕಾಣಬಹುದು.

> ಇಂದ್ರ ದಿಗಂತದಿ ದೂರಾದ್ದೂರಂ
> ಪ್ರಾತಃಸ್ವರ್ಗದ ಸ್ವರ್ಣದ್ವಾರಂ
> ನೋಡದೊ ತೆರೆಯುತಿದೆ
> ಲೋಕದ ನಯನಕ್ಕೋಕುಳಿಯೆರಚುತೆ
> ಮೋಹಿಸಕರೆಯುತಿದೆ ?

ಬೇಂದ್ರೆ ಅವರಲ್ಲಿ 'ನೂತನ' (ಮುಗಿಲ ಮಲ್ಲಿಗೆ) ಎಂಬ ಕವಿತೆಯಲ್ಲಿ

ಎಲೆ ನೂತನಾ ಹೊಸ ಹೊಸತನ ನೀ ಚಿತ್ತ ಚೇತನಾ
ತಿರುಗಿ ತಿರುಗಿ ತೋರು ಎನಗೆ ಜನಪದ ನವಲಕ್ಷಣಾ'

ಎಂಬ ಕವನವೂ ಕೂಡ ಹೊಸ ಇತಿಹಾಸದ ಉದಯವನ್ನ ಸಾರುವ ಕವನವಂತೆ ಕಾಣುತ್ತದೆ. ಈ 'ನೂತನ' ಎಂಬ ಸೂರ್ಯೋದಯದ ಪದ್ಯದ ಒಡಲಿನಲ್ಲಿ ಎರಡು ನೆಲೆಯ ಅರ್ಥವನ್ನು ಕವಿ ಗರ್ಭೀಕರಿಸಿದ್ದಾರೆ.

'ಉಷೆಯ' ಹೆಸರಿನಲ್ಲಿ ಮೂರು ಜನ ಕವಿಗಳೂ ಕೂಡ ಕವನ ರಚಿಸಿದ್ದಾರೆ. ಕುವೆಂಪು ಅವರ ಭಾವಗೀತೆಗಳ ಸಮೂಹದಲ್ಲಿ ಉಷೆಯ ಹೆಸರಿನಲ್ಲಿ 'ಉಷೆಯು ನಿಷೆಯ ಚುಂಬಿಸಿ' (ಕಲಾಸುಂದರಿ) ಉಷೆ, (ನವಿಲು) ನವಿಲುಕಲ್ಲಿನಲ್ಲಿ ಉಷಃಕಾಲ (ಕೃತ್ತಿಕೆ) ಎಂಬ ಮೂರು ಕವನಗಳು ಕಂಡು ಬರುತ್ತವೆ. ಹಾಗೆಯೇ ಪು.ತಿ.ನ, ಬೇಂದ್ರೆಯವರಲ್ಲಿ ತಲಾ ಒಂದೊಂದು ಕವನಗಳು ಕಂಡು ಬರುತ್ತವೆ. ಅವೆಂದರೆ ಪು.ತಿ.ನ. ಅವರ ಉಷಃಕಾಲ (ಮಾಂದಳಿರು) ಹಾಗೂ ಬೇಂದ್ರೆಯವರ ಉಷಾಸೂಕ್ತ (ಹಾಡು-ಪಾಡು) ಈ ಕವನಗಳು ಒಂದೇ ರೀತಿ ಇದೆ; ಆದರೆ ಯಾರು ಯಾರಿಗೆ ಸ್ಫೂರ್ತಿ ? ಅಥವಾ ಸ್ಪರ್ಧೆಸ್ಪರ್ಧೆಗಾಗಿ ಕವಿತೆಗಳನ್ನ ರಚಿಸಿದ್ದಾರೆಯೋ ? ಎನ್ನಿಸುವುದು ಸಹಜ. ಹಾಗೆ ಭಾವಿಸುವುದೇಳಂತ ಆ ಕಾಲದಲ್ಲಿದ್ದ ಸಮಾನ ವಸ್ತು ಸಮಾನ ಆಶಯ ಸಮಾನ ಧೋರಣೆಗಳು ಫಲವಾಗಿ ಇವು ಕಾಣಿಸಿಕೊಂಡಿವೆ ಎನ್ನುವುದು ಉಚಿತ ಹೀಗಿದ್ದೂ ಕುವೆಂಪು ಅವರ 'ಉಷೆಯು ನಿಷೆಯ ಚುಂಬಿಸಿ' (ಕಲಾಸುಂದರಿ) ಹಾಗೂ ಪು.ತಿ.ನ. ಅವರ 'ಉಷಃಕಾಲ' (ಮಾಂದಳಿರು) ಕವನದ ಕೆಲವು ಸಾಲುಗಳಲ್ಲಿ ಸಾಮ್ಯತೆ ಸ್ವಲ್ಪ ಹೆಚ್ಚಾಗಿಯೆ ಇದೆ. ಅವನ್ನ ನೋಡಬಹುದು.

ಕುವೆಂಪು ಅವರ 'ಉಷೆಯು ನಿಷೆಯ ಚುಂಬಿಸಿ' ಕವನದಲ್ಲಿ

ತಿಮಿರ ವಸನಧಾರಿಣಿ ನಿಶೆ
ಮೆಲ್ಲಮೆಲ್ಲನಸ್ತಮಿಸೆ
ತರುಣ ಅರುಣ ರಾಗಿನಿ ಉಷೆ
ಪೂರ್ವವನು ವಿರಾಜಿಸಿ
ವೇಣು ವನದ ಶಿಖರದಲ್ಲಿ
ಹಸುರು ಕಡಲ ತೆರೆಗಳಲ್ಲಿ

ಹಸುಳೆ ಬಿಸಿಲು ಹೆಸರಿದೆ ಎಂಬ ಸಾಲುಗಳು ಇದ್ದರೆ ಪು.ತಿ.ನ. ಅವರ 'ಉಷೆಯ ಕಾಲ ಸೋಂಕಿನಿಂದ' (ಮಾಂದಳಿರು) ಎಂಬ ಕವನದಲ್ಲಿ

ಉಷೆಯ ಕಾಲ ಸೋಂಕಿನಿಂದ
ಬಾನು ತಳಿತಿದೆ
ನಿಶೆಯ ಮಡಿಲನುಳಿದು ಜಗವು
ಜೀವಗೊಳುತಿದೆ
ಕತ್ತಲಂಜುತೋಡುತಿಹುದು

ಬೆಳಕು ತಿರೆಯ ತುಂಬುತಿಹುದು
ನಾಡು ಮೇಡು ಕಾಡೊಳೆಲ್ಲು
ಸೊಗವು ಮೂಡಿ ಬರುತಿದೆ

ಈ ಎರಡೂ ಕವನಗಳಲ್ಲಿ ವಸ್ತು-ಭಾವಗಳಿಂದ ಒಂದೇ ಅರ್ಥ ಸ್ಫುರಿಸುತ್ತದೆ. ಕೊನೆಯಲ್ಲಿ ಮೂವರು ಕೂಡ ಅಧ್ಯಾತ್ಮದ ಕಡೆ ಮುಖಮಾಡುತ್ತಾರೆ. ಮೂವರಿಗೂ ಈ ಉಷೆಯಿಂದ ಬ್ರಹ್ಮಾನಂದವಾಗುತ್ತದೆ.

ಕುವೆಂಪು ಅವರ 'ಉಷೆಯು ನಿಶೆಯ ಚುಂಬಿಸಿ' ಕವನದ ಕೊನೆಯಲ್ಲಿ ಉಷೆಯು ಇರುವೆಡೆಯಲ್ಲೆಲ್ಲ

ಐದಲೆಲ್ಲ ವಿಸ್ಮೃತಿ
ರೂಪರಹಿತ ಭಾವ ಬಿಂದು
ವಿಶ್ವರೂಪಿಯಾಗಿ ಬಂದು
ಓಂಕರಿಪುದು ಸ್ಫೂರ್ತಿ ಸಿಂಧು
ಕಂಪಿಸೆ ಕವಿ ರಸಮತಿ

ಎಂದು ಇದ್ದರೆ ಕವಿ ಪು.ತಿ.ನ. ಅವರ 'ಉಷೆಯ ಕಾಲ ಸೋಂಕಿನಿಂದ' ಕವಿತೆಯ ಕೊನೆಯಲ್ಲಿ ಈ ರೀತಿ ಬರುತ್ತದೆ.

ಜ್ಞಾನದೀಪ ಹೊತ್ತಿಸೈ
ಬಾಳ ಬಟ್ಟೆ ಕಾಣಿಸೈ
ಆತ್ಮ ಶಿವಕೆ ನಿನ್ನ ಇಚ್ಛೆ
ಗೆನ್ನ ಬಾಳ ಹೊಂದಿಸೈ

ಆಗೆಯೇ ಬೇಂದ್ರೆಯವರು ಕೂಡ ಕುವೆಂಪು ಪು.ತಿ.ನ.ರಂತೆಯೇ ಉಷೆಯನ್ನ 'ಉಷಾಸೂಕ್ತ' (ಹಾಡು-ಪಾಡು) ಎಂಬ ಕವಿತೆಯಲ್ಲಿ ಜಾನಪದೀಯ ಧಾಟಿಯಲ್ಲಿ ಉಷೆಯನ್ನ ಚಿತ್ರಿಸುತ್ತಾರೆ ಕೊನೆಯಲ್ಲಿ ಅವರ ಕೂಡ

ಸೃಷ್ಟಿ ನಿನ್ನ ಪಾದದೊಳಿದೆ
ಸ್ಥಿತಿ ನಿನ್ನೀ ಮೋದದೊಳಿದೆ
ಲಯವಿನ್ನೂ ನಾದದೊಳಿದೆ
ಬಿನದ ಶಕ್ತಿ ಬಾರೆ
ದಿನದ ಮುಕ್ತಿ ಬಾರೆ

ಎಂದು ಹೇಳಿದ್ದಾರೆ. ಹೀಗೆ ಈ ಮೂವರು ಕೂಡ 'ಉಷೆ'ಯಲ್ಲಿ ಭಗವಂತನನ್ನು ಕಾಣುವರು.

ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯ

ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯದ ವರ್ಣನೆಯನ್ನ ಕುವೆಂಪು ಮತ್ತು ಪು.ತಿ.ನ ಅವರ ಭಾವಗೀತೆಗಳಲ್ಲಿ ಮಾತ್ರ ಕಾಣಬಹುದೇ ಹೊರತು. ಬೇಂದ್ರೆಯವರ ಕವಿತೆಗಳಲ್ಲಿ ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯವು ಕಂಡುಬರುವುದಿಲ್ಲ.

ಕುವೆಂಪು ಅವರ ಕವನಗಳಲ್ಲಿ ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯವನ್ನು ಮೂರ್‍ನಾಲ್ಕು ಕವನಗಳಲ್ಲಿ ನೋಡಬಹುದು. ಅವೆಂದರೆ ಸಹ್ಯಾದ್ರಿಶೃಂಗದಲಿ (ನವಿಲು-೧೯೩೪) ಕವಿಶೈಲ(೩) (ಕೃತ್ತಿಕೆ-೧೯೪೬), ನವಿಲುಕಲ್ಲಿನಲ್ಲಿ ಉಷಾಃಕಾಲ (ಕೃತ್ತಿಕೆ-೧೯೪೯) ಹಾಗೆಯೇ ಪು.ತಿ.ನ ಅವರಲ್ಲಿ ಯದುಗಿರಿಯ ಮೌನವಿಕಾಸ (ಹಣತೆ-೧೯೩೩) ಎಂಬ ಒಂದೇ ಒಂದು ಕವಿತೆಯಲ್ಲಿ ಮಾತ್ರ ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯವನ್ನ ನೋಡಬಹುದು. ಕುವೆಂಪು ಅವರಲ್ಲಿ ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯ ಎಂಬ ಶೀರ್ಷಿಕೆಯಡಿ ಹೆಚ್ಚಿನ ವಿವರಗಳನ್ನು ಈಗಾಗಲೇ ನೋಡಿದ್ದೇವೆ.

ಇವರಿಬ್ಬರಲ್ಲಿಯೂ ಕೆಲವು ಭಿನ್ನತೆಗಳಿವೆ. ಪು.ತಿ.ನ ಅವರು ಕವನಗಳಲ್ಲಿ ರೂಪಸಿಯ ಜೊತೆಗೆ ಪುರಾಣ ಪ್ರಕ್ರಿಯೆಗಳನ್ನು ಜೋಡಿಸುತ್ತಾರೆ. ನಿದರ್ಶನಕ್ಕೆ ಈ ಸಾಲುಗಳನ್ನು ನೋಡಬಹುದು.

ಬೆಚ್ಚನೆ ಬಿಸಿಲಿನ ಪುಷ್ಪ ಸ್ಪರ್ಶಕು
ಪ್ರಚಲಿತವಾಗದ ಯೋಗದೊಳು

ಎಂಬ ಗಿರಿರಾಜನ ಯೋಗ ಸಮಾಧಿಯ ಚಿತ್ರಣ ತರುತ್ತಾರೆ. ಇದು ನಮ್ಮನ್ನು ಜಿಜ್ಞಾಸೆಗೆ ಒಳಗು ಮಾಡುವಂಥದಾಗಿದೆ. ಇದರಿಂದ ಕಾಮದೇವನ ಪುಷ್ಪ ಬಾಣಗಳಿಂದ ಶಿವನ ಸಮಾಧಿಗೆ ಭಂಗವುಂಟಾದ ಪೌರಾಣಿಕ ಪ್ರಸಂಗದ ಚಿತ್ರವನ್ನ ನೆನೆಯಬಹುದು. ಆದರೆ ಕುವೆಂಪು ಅವರ ಕವನಗಳಲ್ಲಿ ಈ ರೀತಿಯ ಪೌರಾಣಿಕ ಪ್ರಸಂಗ ಕಂಡುಬರುವುದಿಲ್ಲ. ಅವರು ಪ್ರಕೃತಿಯಲ್ಲಿ ರೂಪಸಿಯನ್ನ ಮಾತ್ರ ಹೆಚ್ಚಾಗಿ ಕಾಣುವರು.

ಋತುಮಾನ ಸೂರ್ಯೋದಯ

ಋತುಗಳಲ್ಲಿ ಕಾಣಿಸಿಕೊಳ್ಳುವ ಸೂರ್ಯೋದಯವನ್ನ ಕುವೆಂಪು, ಪು.ತಿ.ನ. ಬೇಂದ್ರೆ ಈ ಮೂವರಲ್ಲಿಯೂ ಕಾಣಬಹುದು. ಅದರಲ್ಲೂ ಪ್ರತಿ ಋತುವಿಗೂ ಬದಲಾಗುವ ಸೂರ್ಯೋದಯದ ಸೌಂದರ್ಯವನ್ನ ಹೆಚ್ಚಾಗಿ ಕಂಡವರೆಂದರೆ ಕುವೆಂಪು ಅವರೇ. ಏಕೆಂದರೆ ಋತುಗಳು ಸೂರ್ಯೋದಯವನ್ನು ಹೆಚ್ಚಾಗಿ ಬರೆದವರೆಂದ ಇವರೊಬ್ಬರೆ, ಇವರ ಕವಿತೆಗಳಲ್ಲಿ ಫಾಲ್ಗುಣ ಮಾಸದ ಸೂರ್ಯನೇ ಬೇರೆ, ಶರತ್ಕಾಲದ ಸೂರ್ಯನೆ ಬೇರೆ. ಭಾದ್ರಪದ ಮಾಸದ ಸೂರ್ಯನೇ ಬೇರೆ, ಹೀಗೆ ಬೇರೆಬೇರೆಯಾಗಿ ಕಾಣುವುದನ್ನ ಈಗಾಗಲೇ ಕುವೆಂಪು ಅವರ ಕವನಗಳಲ್ಲಿ ಋತುಗಳಲ್ಲಿ ಸೂರ್ಯೋದಯ ಎಂಬ ಶೀರ್ಷಿಕೆಯಡಿ ನೋಡಿದ್ದೇವೆ.

ಪು.ತಿ.ನ. ಮತ್ತು ಬೇಂದ್ರೆಯವರಲ್ಲಿ ತಲಾ ಒಂದೊಂದುಕವನಗಳಲ್ಲಿ ಮಾತ್ರ ಸೂರ್ಯೋದಯದ ಕವನವನ್ನ ಕಾಣಬಹುದು. ಅವೆಂದರೆ ಪು.ತಿ.ನ. ಅವರ 'ಯದುಗಿರಿಯ ಮೌನ ವಿಕಾಸ' ಹಾಗೂ ಬೇಂದ್ರೆಯವರ 'ನೂತನ' ಕವನಗಳು.

'ಯದುಗಿರಿಯ ಮೌನವಿಕಾಸ' ಕವನದಲ್ಲಿ ಮಾಘಮಾಸದ ಸೂರ್ಯೋದಯವನ್ನ ಕವಿ ಚಿತ್ರಿಸಿದ್ದಾರೆ. ಈ ಕವನ ನಿಶ್ಚಿತ ಸ್ಥಳಗಳಲ್ಲಿ ಸೂರ್ಯೋದಯಕ್ಕೂ ಸೇರುತ್ತದೆ. ಇನ್ನು 'ಬೇಂದ್ರೆ' ಯವರು 'ನೂತನ' ಕವನದಲ್ಲಿ ಚೈತ್ರಮಾಸದ ಸೂರ್ಯೋದಯವನ್ನ ಚಿತ್ರಿಸಿದ್ದಾರೆ.

ಸೂರ್ಯೋದಯ ಕವನಗಳ ಅಭಿವ್ಯಕ್ತಿ

ಸೂರ್ಯೋದಯವನ್ನು ಕುರಿತ ಭಾವಗೀತೆಗಳಲ್ಲಿ, ಕುವೆಂಪು ಅವರ ಶೈಲಿ ಹಳಗನ್ನಡ ಸಂಸ್ಕೃತಗಳ ಮಿಶ್ರಣದಿಂದ ಕೂಡಿದರೂ ಸುಲಭವಾಗಿ ಅರ್ಥವಾಗುತ್ತದೆ. ಅಂಥ ಕೆಲವು ಕವನಗಳನ್ನ ನೋಡಬಹುದು.

ಫಾಲ್ಗುಣಮಾಸದ ದೀರ್ಘ ದಿಗಂತದಲ್ಲಿ ಕುಂಕುಮಾರುಣ ಬಿಂಬದ ಸೂರ್ಯನ ಉದಯವನು ಕಂಡು 'ಬಾ ಫಾಲ್ಗುಣ ರವಿ ದರ್ಶನಕೆ (ಪಕ್ಷಿಕಾಶಿ-೧೯೪೬)

ಶಿವಮಂದಿರಸಮ ವನಸುಂದರ ಸಮಶೃಂಗಾರದ ಗಿರಿಶೃಂಗಕೆ ಬಾ;
ಬಾ ಫಾಲ್ಗುಣ ರವಿ ದರ್ಶನಕೆ !

ಕುಂಕುಮ ಧೂಳಿಯ ದಿಕ್ತಟ ವೇದಿಯೊಳೋಕುಳಿಯಲಿ ಮುಂದೇಳುವನು ;
ಕೋಟಿವಿಹಂಗಮ ಮಂಗಲರವ ರಸನೈವೇದ್ಯಕೆ ಮುದ ತಾಳುವನು ;
ಚಿನ್ನದ ಚೆಂಡನೆ ಮೂಡವನು ; ಹೊನ್ನನೆ ಹೊಯ್‌ನೀರ್ ನೀಡುವನು
ಸೃಷ್ಟಿಯ ಹೃದಯಕೆ ಪ್ರಾಣಾಗ್ನಿಯ ಹೊಳೆ ಹರಿಯಿಸಿ ರವಿ ದಯಮಾಡುವನು !

ಹೀಗೆಯೇ ಇವರ ಭಾಷೆ ಸಂಸ್ಕೃತ ಭೂಯಿಷ್ಠ ನಿಜ. ಆದರೆ ಅವುಗಳಲ್ಲಿ ಅಚ್ಚ 'ಕನ್ನಡ' ಅಥವಾ ಸರಳ ಕವಿತೆಗಳೂ ಸಾಕಷ್ಟಿದೆ.

'ಮುನ್ನೇಸರು' (ನವಿಲು) ಸೂರ್ಯೋದಯವನ್ನು ಕುರಿತ ಸರಳ ಕವನ. ಅದು ಈ ರೀತಿ ಇದೆ.

ತಳಿರೊಳು ಹೊಳೆಯುವ ಹನಿಗಳ ತೊಳಗಿ
ನಸುಗಣ್ದೆರೆಯುವ ತಿರೆಯನು ಬೆಳಗಿ
ಮೂಡಣ ಬಾನಿನ ಕರೆಯೊಳು ಮೂಡಿ
ಮೆರೆವುದು ನೇಸರು ಕಂಗಳೆ ನೋಡಿ !

ಪು.ತಿ.ನ. ಅವರ ಸೂರ್ಯೋದಯ ಕುರಿತ ಕವನಗಳಲ್ಲಿ ಹೆಚ್ಚಾಗಿ ಸಂಸ್ಕೃತ ಭೂಹಿಷ್ಠ ಪದಗಳಿದ್ದು ಅರ್ಥ ವಾಗುವುದೇ ಕಷ್ಟವಾಗುತ್ತದೆ. ಅರ್ಥಕ್ಕೆ ಅವರಲ್ಲಿ ತಡಕಾಡಬೇಕಾಗುತ್ತದೆ.

ದಾನವಹೃತ ಮೇದಿನಿಯಂ
ದಂಷ್ಟ್ರಾಗ್ರದೊಳಿರಿಸಿ
ಭೂದಾರಂ ಪಾತಾಳವ
ನುಳಿದೆದ್ದನೊ

ಎಂಬ ಸಾಲುಗಳು ಒಂದೇ ಓದಿಗೆ ಅರ್ಥವಾಗುವುದಿಲ್ಲ.

ಬೇಂದ್ರೆ ಅವರ ಸೂರ್ಯೋದಯ ಕುರಿತ ಕವನಗಳಲ್ಲಿ ಹೆಚ್ಚಾಗಿ ಗೇಯತೆ ಇದೆ. ಅದರಲ್ಲೂ ಜನಪದ ಧಾಟಿಯನ್ನ ತಮ್ಮ ಕವನಗಳಲ್ಲಿ ಸಶಕ್ತವಾಗಿ ಮೂಡಿಸಿಕೊಂಡಿದ್ದಾರೆ. ಆದುದರಿಂದಲೇ ಅವರ 'ಬೆಳಗು' ಕವನ ಅತ್ಯಂತ ಸರಳವಾದ ಹಾಗೂ ಜನಪದ ಗೇಯತೆ ಹೊಂದಿ ಸರ್ವಜನಪ್ರಿಯತೆಯನ್ನು ಪಡೆಯಿತು. ಕೆಲವು ಕವನಗಳಲ್ಲಿ ಪದ ಕೊಟ್ಟು ಅರ್ಥವನ್ನು ತಾವೇ ಇಟ್ಟುಕೊಂಡು ಓದುಗರಿಗೆ ಅರ್ಥವಾಗದೆ ಓದುಗರಿಂದ ದೂರವೇ ನಿಲ್ಲುತ್ತವೆ.

ಕುವೆಂಪು ಕವನಗಳಲ್ಲಿ ಮೂವತ್ತೆರಡು ಸೂರ್ಯೋದಯ ಕವನಗಳನ್ನ, ಪು.ತಿ.ನ. ಕವನಗಳಲ್ಲಿ ಏಳು ಸೂರ್ಯೋದಯ ಕವನಗಳು ಹಾಗೂ ನಾನು ಗಮನಿಸಿದ ಹಾಗೆ ಬೇಂದ್ರೆಯವರ ಹದಿನಾಲ್ಕು ಸೂರ್ಯೋದಯ ಕವನಗಳನ್ನ ನಾಲ್ಕು ದೃಷ್ಟಿಕೋನಗಳಿಂದ ಅಧ್ಯಯನ ಮಾಡಿ ಒರೆಹಚ್ಚಿ ನೋಡುವ ಪ್ರಯತ್ನವನ್ನು ಇದುವರೆವಿಗೆ ಮಾಡಲಾಯಿತು.

ಕುವೆಂಪು, ಪು.ತಿ.ನ., ಬೇಂದ್ರೆಯವರುಗಳ ಸೂರ್ಯೋದಯ ಗೀತೆಗಳನ್ನ ಹಲವು ದೃಷ್ಟಿಕೋನಗಳಿಂದ ಅಧ್ಯಯನ ಮಾಡಿ ಒರೆಹಚ್ಚಿ ನೋಡುವ ಪ್ರಯತ್ನ ಇದುವರೆಗೆ ಮಾಡಲಾಯಿತು.

ನವೋದಯ ಕಾಲದಲ್ಲಿ ನಿಸರ್ಗಕ್ಕೆ ಹಾಗೂ ನಿಸರ್ಗ ಕಾವ್ಯಕ್ಕೆ ಹೊಸ ರೂಪು ಕೊಟ್ಟವರು ಈ ಕವಿ ರತ್ನತ್ರಯರು. ಸತ್ಯ ಶಿವ ಸೌಂದರ್ಯದ ಒಂದು ಭಾಗವಾಗಿ ನಿಸರ್ಗವನ್ನ ಪರಿಭಾವಿಸಿ "ಸೃಷ್ಟಿಕರ್ತನೇ ಒಬ್ಬ ಮಹಾಕವಿ. ಅವನ ಮಹಾಕಾವ್ಯವೇ ಈ ಸೃಷ್ಟಿ" ಎಂಬುದು ಇವರ ಕವನಗಳಲ್ಲಿ ಪ್ರಕಟವಾಗಿರುವ ತತ್ವದ ಇನ್ನೊಂದು ಮುಖ ಇವರ ಕವನಗಳಿಂದ ತಿಳಿದು ಬಂತು.

ಇವರುಗಳಿಗೆ ಸೂರ್ಯೋದಯ ಬಗೆಗಿನ ಉತ್ಕಟ ಪ್ರೀತಿ ಮೂವರ ಭಾವಗೀತೆಗಳಲ್ಲಿದ್ದು ಕಾಣುವ ಅಂಶ. ಕುವೆಂಪು ಅವರ ಸೂರ್ಯೋದಯದ ಗೀತೆಗಳು ಮಲೆನಾಡಿನ ವಿಶಿಷ್ಟ ಹಿನ್ನೆಲೆಯಿಂದ ಅಪೂರ್ವವಾದ ದರ್ಶನ ಕೊಟ್ಟರೆ, ಪು.ತಿ.ನ. ಅವರ ಸೂರ್ಯೋದಯದ ಗೀತೆಗಳು ಯದುಗಿರಿಯ ಹಿನ್ನೆಲೆ ಹಾಗೂ ಪುರಾಣದ ಉಪಮೆಯಲ್ಲಿ ರಸಾನಂದವಾಗಿ ವಿಶ್ವ ಸಂದೇಶವನ್ನ ಹೊತ್ತು ತರುವವು. ಆದರೆ ಬೇಂದ್ರೆಯವರು ಇವರುಗಳಂತೆ ಪ್ರಕೃತಿಯಲ್ಲಿ ಆಗುವ ಚಟುವಟಿಕೆಗಳನ್ನ ಹಾಡಿ ಹೊಗಳದೆ ('ಬೆಳಗು' ಕವಿತೆಯೊಂದು ಮಾತ್ರ ಪ್ರಕೃತಿಯಲ್ಲಿ ಆದ ಬದಲಾವಣೆಗಳನ್ನ ಚಿತ್ರಿಸುವ ಕವಿತೆ) ಅವರು ನೇರವಾಗಿ ಬೆಳಗನ್ನೇ ಜನಪದ ಧಾಟಿಯಲ್ಲಿ ಶ್ರೀಸಾಮಾನ್ಯ ನೆಲೆಯಲ್ಲಿ ಹಾಡಿ ಒಗಳಿನಂದಿರುವುದನ್ನ ಈ ಮೊದಲೆ ಈ ನಿಬಂಧದಲ್ಲಿ ಬಂದಿದೆ.

"ಇಂತಹ ಸುಂದರವಾದ ಸೂರ್ಯೋದಯವನ್ನು ಮನದಣಿಯೆ ನೋಡಿ ನಮ್ಮ ಜನ ಆನಂದಪಡುವುದಿಲ್ಲವಲ್ಲ ಎಂದು ಕವಿಗಳು ಕೊರಗಿದ್ದಾರೆ. "ಪಲ್ಲವಿಸುವಂತೆ ಕಲೆಯೆಲ್ಲರಲಿ ಕೃಪೆ ಮಾಡು" ಎಂದು ಪ್ರಕೃತಿಯನ್ನ ಪ್ರಾರ್ಥಿಸಿದ್ದಾರೆ. ಸರ್ವರೂ ರಸದೃಷ್ಟರರಾಗಬೇಕು. 'ದರ್ಶನ' ಭಾಗ್ಯವನ್ನು ಪಡೆಯಬೇಕು. ಕಾವ್ಯದ ಆಸ್ವಾಧನೆಗೆ ಪ್ರಕೃತಿಯ ಆರಾಧನೆಗೆ ಎಲ್ಲರೂ ಮುನ್ನುಗ್ಗಬೇಕು ಎಂಬುದೇ ಕವಿಗಳ ಹೆಬ್ಬಯಕೆ. ಎಲ್ಲರೂ ಇಂತಹ ಕಾರ್ಯಕ್ಕೆ ತೊಡಗುವ ಕಾಲ ಎಂದಿಗೆ ಬರುವುದೋ ಕಾಣೆ

ಎಂಬ ಶಂಕೆ ಕವಿಗಳದು. ಆದರೆ ಒಬ್ಬಿಬ್ಬರಾದರೂ ಪ್ರಕೃತಿಯ ಉಪಾಸನೆ ಕೈಗೊಳ್ಳಲಿ, ಎಲ್ಲರೂ ಏಳುವವರೆಗೂ ಎಲ್ಲರೂ ಮಲಗಿರುವುದು ಬೇಡ ಎಂದು ಹೇಳಿ "ಕಣ್ದೆರೆಯ ಸ್ವರ್ಗವಿದೆ। ಕಣ್ಮುಚ್ಚೆ ನರಕವದೆ" (ಕುವೆಂಪು) "ಏಳು ಚಿನ್ನ, ಬೆಳಗಾಯ್ತು ಅಣ್ಣ, ಮೂಡಲವು ತೆರೆಯ ಕಣ್ಣ" (ಬೇಂದ್ರೆ) ಎಂದು ಸೂತ್ರೀಕರಿಸಿ ನುಡಿದಿದ್ದಾರೆ. ಸೌಂದರ್ಯದ ಸಮಾಧಿಯಲ್ಲಿ ಆನಂದವನ್ನು ಹೀರಿ ವ್ಯಕ್ತತೆ ಮೈ ಮರೆಯಬೇಕಾದರೆ ಇಂತಹ ಪ್ರಾತಃ ಕಾಲ ಇಂತಹ ರವಿದರ್ಶನದಿಂದ ಮಾತ್ರ ಸಾಧ್ಯ ಎನಿಸಿದೆ[೨೪]

ಇವರುಗಳಂತೆ ಸೂರ್ಯೋದಯ ಗೀತೆಗಳನ್ನು ಬೇರೆ ಯಾವ ಕವಿಯೂ ರಚಿಸಿಲ್ಲ ಎಂಬುದು ಗಮನಾರ್ಹ. ಬೆಳಕಿನ ಮೂಲವಾದ ಸೂರ್ಯನ ಉದಯ ಇವರಿಗೆ ಕೇವಲ ಒಂದು ದೈನಂದಿನ ವಿದ್ಯಮಾನವಾಗಿ ತೋರುವುದಿಲ್ಲ. ಬದಲಾಗಿ ಸೂರ್ಯೋದಯ ಭಾವೋನ್ಮೀಲನಕ್ಕೆ, ಅನುಭಾವೋನ್ನತಿಗೆ ಕಾರಣವಾಗುವ ದಿವ್ಯದರ್ಶನವಾಗುತ್ತದೆ.

ಈ ಕವಿಗಳ ಸೌಂದರ್ಯೋಪಾಸನೆ ರಸಿಕತೆ ಪ್ರಕೃತಿ ಆರಾಧನೆ ಇನ್ನಷ್ಟು ವಿವರವಾಗಿ ತಿಳಿಯಬೇಕಾದರೆ ಅವರುಗಳ ಸೂರ್ಯ ಗೀತೆಗಳನ್ನು ಮೂಲದಲ್ಲಿಯೇ ಓದಬೇಕು. ಏಕೆಂದರೆ ಇಲ್ಲಿ ಕಂಡುಬರುವ ಸೂರ್ಯೋದಯ ಗೀತೆಗಳು ಕೇವಲ ಸೂರ್ಯೋದಯ ಗೀತೆಗಳಾಗದೆ ಅವು ಶಿವೋದಯ ಗೀತೆಗಳಾಗಿವೆ.

---

೨೪. ಎಸ್. ವಿ. ಪರಮೇಶ್ವರಭಟ್ಟ, ರಸಋಷಿ ಕುವೆಂಪು, ಪ್ರಸಾರಾಂಗ, ಮೈ.ವಿ. ೧೯೯೫, ಪುಟ. ೫೮-೫೯

ಬೇಂದ್ರೆಕಾವ್ಯದಲ್ಲಿ ಪ್ರಕೃತಿಯ ಹಲವಾರು ಮುಖಗಳ ಸ್ವಾನುಭವಪ್ರೇರಿತವಾದ ದರ್ಶನವಿದೆ. ಅದು ಸಾಂಪ್ರದಾಯಿಕ ರೀತಿಯ ವರ್ಣನೆಯೂ ಆಗಿಲ್ಲ, ಬಹುಮಟ್ಟಿಗೆ ಕೇವಲ ಪ್ರಕೃತಿಯ ವರ್ಣನೆಯೂ ಆಗಿಲ್ಲ, ಸೃಷ್ಟಿ-ದೃಷ್ಟಿಗಳ ವಿಶಿಷ್ಟ ಸಮ್ಮಿಳನದಿಂದ ಪ್ರಕೃತಿ-ಪುರುಷರನ್ನು ಒಂದುಗೂಡಿಸಿ ಅದೊಂದು ಬಿಡಿಸಲಾರದ ಬೆಸುಗೆಯಾಗಿದೆ, ಕವಿಗಿರುವ ಮಲೆನಾಡ ಸೆರಗಿನ ಪ್ರತ್ಯಕ್ಷ ಪರಿಸರದ ದಟ್ಟ ಅರಿವಿನಿಂದ, ಅದರಲ್ಲಿಯೂ ಶ್ರಾವಣಮಾಸದ ವಿಷಯದಲ್ಲಿಯ ಹೆಚ್ಚಿನ ಮಮತೆಯಿಂದ ಅದಕ್ಕೆ ಒಂದು ವೈಶಿಷ್ಟ್ಯದ ಸೊಗಡು-ಸೊಗಸು ಬಂದಿದೆ. ಜೊತೆಗೆ ಕವಿಯ ಸೂಕ್ಷ್ಮ ಕಲ್ಪಕತೆ, ಅನುಭಾವಿಕ ಮನೋಧರ್ಮ, ಶಿಷ್ಟ ಹಾಗೂ ಜನಪದ ಭಾಷೆಗಳ ಬಳಕೆಯಲ್ಲಿ ಸಹಜ ಪ್ರಭುತ್ವ ಇವುಗಳಿಂದ ಅದು ಇನ್ನಿಷ್ಟು ಎದ್ದು ಕಾಣುತ್ತದೆ.

ಗರಿ ಕವನ ಸಂಗ್ರಹದಿಂದ ಮೊದಲುಮಾಡಿ ಕೊನೆಯ ಸಂಕಲದವರೆಗೆ ಕಣ್ಣು ಹಾಯಿಸಿದರೆ ಪ್ರಕೃತಿ-ಪುರುಷರ ಅನ್ಯೋನ್ಯತೆ ತಲ್ಲೀನತೆಯಾಗಿ ಪರಿಣಮಿಸಿದ ಉದಾಹರಣೆಗಳೇ ಹೆಚ್ಚು. ಯಾವುದೇ ಕವಿಯ ಪ್ರಕೃತಿಪರವಾದ ಕಾವ್ಯವು ಒಳ್ಳೆಯದಾಗಿ ಆಕಾರ ಪಡೆದಾಗ ಈ ತಲ್ಲೀನತೆ ಇರುವುದು ಸಹಜ. ಬೇಂದ್ರೆಕಾವ್ಯದ ವಿಶೇಷವೆಂದರೆ ಅದಕ್ಕೆ ಮೂಲ ಸ್ಫುರಣವಾಗಿ ಸೌಂದರ್ಯಾನುಭವದ ಆಳವಾದ ಸ್ತರಗಳಿರುತ್ತದೆ, ಸ್ವಾನುಭವವನ್ನು ಸಹಜವಾಗಿ ಸಾಧಾರಣೀಕರಿಸಿದ ಶಿಲ್ಪಗಳಿರುತ್ತವೆ, ಅನುಭಾವದ ಸ್ಪರ್ಶಗಳಿರುತ್ತವೆ. ಕೆಲವು ಸಲ ನಾಟಕೀಯವಾದ ಸನ್ನಿವೇಶ ಕಲ್ಪನೆಯ ಮೂಲಕ ಸೃಷ್ಟಿಸೌಂದರ್ಯದ ಆವಿಷ್ಕಾರವಾಗಿರುತ್ತದೆ. ಕೃಷ್ಣಕುಮಾರಿಯೆಂಬ ಅವರ ಮೊದಲನೆಯ ಐತಿಹಾಸಿಕ ಕಥನ ಕವನದಲ್ಲಿಯ ಕೆಳಗಿನ ಪದ್ಯದಲ್ಲಿ ಇದಕ್ಕೆ ಉದಾಹರಣೆ ಹೀಗಿದೆ:

ಮಿಂಚುಗಳು ನನ್ನ ಮೈಸಿರಿಯ ಮಿಂಚಿನ ಮುಂದೆ
ಮಿಂಚುಬುಳುಗಳ ಹಾಗೆ ಹಿಂಚಿ ಹೋಗುವವೆಂದು
ಮುಂಚೆ ನಗೆಯೊಳಗೆಂದ ಮಾತುಗಳ ನೆನಪಿಟ್ಟು
ಮುಗಿಲಿನೊಳಗಿಂದ ಬಂದು
ಮಿಂಚುಗಳ ಬಳಗ ಕಣ್ಣಿವುಟಿ ಕೊರಚುವುದೆನ್ನ
ಮಿಂಚಿ ಹೋದದ್ದನ್ನು ಚಿಂತಿಸುವುದೇಕಿನ್ನು?
ಸಂಚಿತದೊಳಿದ್ದುದನ್ನು ವಂಚಿಸುವರಾರೀ ವಿರಿಂಚಿಯ ಪ್ರಪಂಚದಲ್ಲಿ?
(ಅಂಬಿಕಾತನಯದತ್ತ , ೧೯೮೩: ೬೮)

ಕೃಷ್ಣಕುಮಾರಿಯ ಈ ಹತಾಶ ಭಾವನೆಯ ನಿರೂಪಣೆಯಲ್ಲಿ ಸ್ವಲ್ಪ ಲಕ್ಷ್ಮೀಶ ಕವಿಯ ಪ್ರಭಾವದಿಂದೆಂಬಂತೆ ಪ್ರಾರಂಭಿಕ ರಚನೆಯಲ್ಲಿಯ ಪ್ರಾಸಾನುಪ್ರಾಸಗಳ ವ್ಯಾಮೋಹವಿದ್ದರೂ ನವೋನವಕಲ್ಪನೆಯ ಮೂಲದ ಸೃಷ್ಟಿಸೌಂದರ್ಯದ ಚಿತ್ರಣವಿರುತ್ತದೆ.

'ಬೆಳಗು' ಇದು ಗರಿಯಲ್ಲಿ ಮೊದಲನೆಯ ಕವನಗೀರವೆಂದು ಪ್ರಕಟವಾಗಿ ಕವಿಯ ವಿಶಿಷ್ಟವಾದ ಸೃಷ್ಟಿಸೌಂದರ್ಯನುಭವ-ಅಭಿವ್ಯಕ್ತಿಗಳ ಉತ್ತಮ ಉದಾಹರಣೆಯಾಯಿತು, ಅವನ ಕಾವ್ಯಲೋಕದ ಕ್ಷಿತಜದಲ್ಲಿ ಬೆಳಗನ್ನು ಮೂಡಿಸಿ ಮುಂದಿನ ಎಲ್ಲ ಇಂಥ ನಿರ್ಮಿತಿಗಳಿಗೆ ನಾಂದಿಯನ್ನು ಹಾಡಿತೆನ್ನಬಹುದು. ಇದರಲ್ಲಿ ಎದ್ದು ಕಾಣುವ ಒಂದು ಗುಣವೆಂದರೆ ಭೂಮಿ-ಆಕಾಶಗಳ ಮಿಲನದಿಂದ ತಲೆದೋರಿದ ಬೆಳಗಿನ ದೃಶ್ಯಸೌಂದರ್ಯವನ್ನು ಪಂಚೇಂದ್ರಿಯಗ್ರಾಹ್ಯವಾಗಿ ತನ್ಮಯತೆಯಿಂದ ವರ್ಣಿಸಿದಂತೆ, ಅದರ ಹಿಂದೆ ಇದ್ದಿರಬಹುದಾದ ಯಾವುದೋ ಆಗಾಧವಾದ ಅದೃಶ್ಯ ಮೂಲವನ್ನು ಆನಂದ-ಆಶ್ಚರ್ಯಗಳ ಸಂಮಿಶ್ರಭಾವದಿಂದ ಉದ್ದಕ್ಕೂ ಸೂಚಿಸಲಾಗಿದೆ. ಹೀಗಾಗಿ ಮೊದಲಿನ ನುಡಿಯಿಂದಲೂ ಜನಪದಗೀತೆಯ ರೀತಿಯಲ್ಲಿ ಕರ್ತೃ ಯಾರೋ ಎನ್ನುವ ಅಚ್ಚರಿಯನ್ನು ಹೆಚ್ಚುಗೊಳಿಸುವ ರಚನಾ ವಿಧಾನವಿದೆ. ಮೂಡಲ ಮನೆಯಾ ಮುತ್ತಿನ ನೀರಿನ ಎರಕವ ಹೊಯ್ದವರಾರು ಎಂಬ ಕುತೂಹಲವನ್ನು ಉಂಟುಮಾಡುವಂತೆ ಕರ್ತೃಪದದ ಲೋಪವನ್ನು ಮಾಡಲಾಗಿದೆ.

ಭೂಮಿ ಯಾವಾಗಲೂ ತನ್ನ ಸುತ್ತತಿರುಗತ್ತ ಸೂರ್ಯನತ್ತ ಹೊರಳುವ ಒಂದೊಂದು ಮಗ್ಗುಲಿಗೆ ಬೆಳಗು ಪ್ರತಿಕ್ಷಣ ದೊರೆಯುತ್ತಲಿರುತ್ತದೆ ಎಂಬ ಪ್ರಾಕೃತಿಕ ಸತ್ಯವು ಕವಿಗೆ ಗೊತ್ತು. ಸೂರ್ಯನಿಂದಲೇ ಈ ಬೆಳಕಿನ ಲೀಲೆಯೆಂಬುದೂ ಗೊತ್ತು. ಆದರೆ ಅವನ ಪ್ರಾತಿಭ ದೃಷ್ಟಿಗೆ ಪೂರ್ವ ದಿಗಂತದಲ್ಲಿ ಯಾರೋ ಮುತ್ತಿನ ನೀರಿನ ಎರಕವನ್ನು ಹೊಯ್ದಂತೆ ಕಾಣುತ್ತದೆ. ಕತ್ತಲೆ ಕವಿದಿದ್ದ ಜಗತ್ತಿನ ಬಾಗಿಲು ಹೊಸ್ತಿಲ ಮುಂದೆ ತಿಳಿನೀರಿನ ತಳೆಯನ್ನು ಹಾಕುವ ಹೆಂಗಸಿನ ಹೋಲಿಕೆ ಇದರಲ್ಲಿ ಸಹಜವಾಗಿ ಸ್ರಚಿತವಾಗಿದೆ. ಸೂರ್ಯೋದಯಕ್ಕೆ ಮುಂಚಿನ ಶುಭ್ರವಾದ, ಸೌಮ್ಯವಾದ ಬೆಳಕನ್ನು ಮುತ್ತಿನ ನೀರಿನ ಎರಕವೆಂಬಂತೆ ಮಾಡಿದ ಊಹೆಯ ಔಚಿತ್ಯವನ್ನು ನೋಡಬೇಕು, ಮುಂದಿನ ನುಡಿಯಲ್ಲಿ ಈ ಬೆಳಕು ಸೂರ್ಯೋದಯಕಾಲದ ಉಜ್ವಲ ಕಿರಣಗಳ ಮೇಲ್‌ತೂರಿಕೆಯಿಂದ ಪುಟಪುಟನೆ ಪುಟಿಯುತ್ತಿರುವ ರತ್ನದ ರಸದ ಕಾರಂಜಿಯಾಗಿ ತೋರಿದ್ದೂ ಅಷ್ಟೇ ಉಂರವಾಗಿದೆ. ಹೀಗೆ ಬೆಳಗಿನ ಸೃಷ್ಟಿಯಲ್ಲಿ ಕಾಣುವ ಬೆಳಕಿನ ಸೊಬಗು, ಅರಳುವ ಮೊಗ್ಗೆಯ ಸುಗಂಧ, ಎಲೆಗಳ ಮೇಲೆ, ಹೂಗಳ ಒಳಗೆ ಕಾಣುವ ಹನಿಗಳ ಹೊಳಪು, ತಂಗಾಳಿಯಿಂದ ಹರಡುವ ಹೂವಿನ ಕಂಪು, ಗಿಡಗಂಟೆಯ ಕೊರಳಿಂದ ಹೊಮ್ಮುವ ಹಕ್ಕಿಯ ಹಾಡಿನ ಇಂಪು ಇದನ್ನೆಲ್ಲ ಒಂದೊಂದು ಊಹಾಚಿತ್ರವಾಗಿ ಈ ಕವನದಲ್ಲಿ ಕೊರೆಯಲಾಗಿದೆ. ಮೂರನೆಯ ನುಡಿಯ ಎಲೆಗಳ ಮೇಲೇ ಹೂಗಳ ಒಳಗೇ, ಅಮೃತದ ಬಿಂದು, ಕಂಡವು, ಅಮೃತದ ಬಿಂದು- ಯಾರಿರಿಸಿರುವರು ಮುಗಿಲ ಮೇಲಿಂದಿಲ್ಲಿಗೆ ತಂದು, ಈಗ ಇಲ್ಲಿಗೇ ತಂದು ಎಂಬಲ್ಲಿ ಆನಂದ-ಆಶ್ಚರ್ಯಗಳ ಸಂಮಿಶ್ರಭಾವದೊಡನೆ, ಯಾರು ಈ ಸೌಂದರ್ಯದ, ಈ

– ಸುಖದ ಮೂಲವೆಂಬ ಕುತೂಹಲವು ಹೆಚ್ಚು ಪ್ರಕಟವಾಗಿದೆ. ಕಣ್ಣು, ನಾಲಿಗೆ, ಮೈ, ಕಿವಿ, ಮೂಗು ಈ ಐದೂ ಇಂದ್ರಿಯಗಳಿಗೆ ಬೆಳಗಿನ ಸೃಷ್ಟಿ ನೀಡಿದ ಆನಂದದಿಂದ ದೇವರದೇ ಆದ ಮನಸಿನ ಮನೆ ತನ್ಮಯವಾಯಿತೆಂಬ ಕವಿಯ ಅನುಭವು ಅವನ ಆಳವಾದ ಆಧ್ಯಾತ್ಮಿಕ ಪ್ರಜ್ಞೆಯನ್ನು ತೆರೆದು ತೋರಿದೆ, ಕೊನೆಯ ನುಡಿಯಲ್ಲಿಯಂತೂ ಅದು ಅಗಾಧತೆಯ ಆಳಕ್ಕಿಳಿದು ಖಚಿತವಾದ ರಸಾನುಭವವಾಗಿ ಪರಿಣಮಿಸಿ ಕವನಶಿಲ್ಪದ ಸುಂದರ ಸಮಾರೋಪವಾಗಿ. ಅರಿಯದು ಅಳವು, ತಿಳಿಯದು ಮನವು ಎಂಬುದಲ್ಲದೆ ಕಾಣದೋ ಬಣ್ಣಾ ಎಂಬ ಪುನರುಕ್ತಿಯಿಂದ ಕಣ್ಣಿಗೆ ಕಾಣುವ ಬಣ್ಣದೊಳಗಿನ ಬಣ್ಣವು ಅಂದರೆ ರಹಸ್ಯವು ಕಾಣದು ಎಂಬ ಧ್ವನಿತಾರ್ಥದಲ್ಲಿ ಅಗಾಧತೆ ವ್ಯಕ್ತವಾಗಿದೆ. ಶಾಂತೀರಸವೇ ಪ್ರೀತಿಯಿಂದಾ ಮೈದೋರಿತಣ್ಣಾ, ಇದು ಬರಿ–ಬೆಳಗಲ್ಲೋ ಅಣ್ಣಾ ಎಂಬುದು ಉದ್ಭವಮೂರ್ತಿಯಂತೆ ಕವಿವಾಣಿಯಲ್ಲಿ ಮೂಡಿ ಅವನ ಅನುಭವಸಾರವನ್ನು ಅರ್ಥವತ್ತಾಗಿ ಸಾರಿದೆ. ಬೆಳಗಿನ ನೋಟವು ಪಂಚೇಂದ್ರಿಯಗಳಿಗೆ ಕೊಟ್ಟಿರುವ ಸುಖ ಹಾಗೂ ತನ್ಮಯತೆಗಳ ಮೂಲಕ ಪ್ರೀತಿಸಹಿತವಾದ ಶಾಂತಿರಸವು ಕವಿಗೆ ಸ್ಥಾಯಿಯಾಗಿ ದೊರೆತಿದೆ. ಇಲ್ಲಿ ಶಾಂತಿರಸ ಎಂಬ ಪದವಿದೆ, ಶಾಂತರಸವಲ್ಲ. ಶಾಂತಿರಸದಲ್ಲಿ ಕ್ಷೋಭೆಯಿಲ್ಲದ ತೃಪ್ತಿಯಿಂದ ಕೂಡಿದ ಇಂದ್ರಿಯ ಸುಖವಿರುತ್ತದೆ. ಶಾಂತರಸದಲ್ಲಿ ನಕಾರರೂಪವಾದ ನಿರ್ವೇಗ ಅಥವಾ ಉಪರತಿ ಪ್ರಧಾನವಾಗಿರುತ್ತದೆ. ಇಲ್ಲಿ ಶಾಂತಿರಸದ ಜೊತೆ ಪ್ರೀತಿ ಅಂದರೆ ಪ್ರೇಮಯುತಿಯುಳ್ಳ ಪರಿಶುದ್ಧ ಆನಂದವಿರುತ್ತದೆ. ಪ್ರೀತಿಯ ಮೂಲಾರ್ಥವು ಆನಂದವೇ. ಹೀಗಾಗಿ ಇದು ಬರಿ ಬೆಳಗಲ್ಲ ಎಂಬ ಮಾತು ಸಾರ್ಥಕವಾಗಿದೆ.

ವಿವರ–ವಿವರದಲ್ಲಿ ವಿಶೇಷವಾಗಿ ಮೊದಲುಕೊನೆಗಳಲ್ಲಿ, ಈ ಕವನವು ಹೇಗೆ ವಿಶಿಷ್ಟವಾಗಿದೆ, ಉತ್ತಮ ರಚನೆಯಾಗಿದೆ, ಹೇಗೆ ಸೃಷ್ಟಿ ದೃಷ್ಟಿಗಳ ಸಂಮಿಲನದಿಂದ ಪ್ರಕೃತಿ–ಪುರುಷರ ಬೆಸುಗೆಯಾಗಿದೆ ಎಂಬುದನ್ನು ಎತ್ತಿ ತೋರಿಸಲು ಇದನ್ನು ಇಲ್ಲಿ ವಿಸ್ತಾರವಾಗಿ ವಿಶ್ಲೇಷಿಸಲಾಗಿದೆ. ಇದರಲ್ಲಿಯ ಧಾಟಿ–ಶೈಲಿಗಳಲ್ಲಿ ಜನಪದಗೀತೆಯ ಸರಣಿ ಮತ್ತು ಪರಿಣಾಮ ಕರವಾದ ಪುನರುಕ್ತಿಯಿದೆ, ಅವಗ್ರಹ ಮತ್ತು ದೀರ್ಘ ಚಿಹ್ನೆಗಳ ಮೂಲಕ ಇದರ ರಸಾನುಭವದ ಉತ್ಕಟ ಸ್ವರೂಪದ ಸಂವಹನವಿದೆ, ಗಿಡಗಂಟೆಯಾ ಕೊರಳೊಳಗಿಂದ ಹಕ್ಕಿಗಳಾ ಹಾಡು ಎಂದು ಈ ಕವನದಲ್ಲಿದ್ದರೆ, ಬಾರೊ ಸಾಧನಕೇರಿಗೆ(**ಗಂಗಾವತರಣ**) ಕವಿತೆಯಲ್ಲಿ ಗಿಡದ ಹೊದರೊಳು ಹಾಡಿದೆ ಎಂದು ಇನ್ನೂ ಸೂಚ್ಯವಾಗಿದೆ.

ಮುಂದೆ ಬೇರೆ ಬೇರೆ ಸಮಯ ಸಂದರ್ಭದಲ್ಲಿ, ಮನೋಲಹರಿಗಳಲ್ಲಿ ಮತ್ತು ಭಾವರಸ ಸ್ಥಿತಿಗಳಲ್ಲಿ ಇತರ ವಿಷಯದ ವಸ್ತುಗಳೊಡನೆ ಸೃಷ್ಟಿಯ ವಿವಿಧ ಲೀಲೆಗಳನ್ನು ಕವಿ ಚಿಕ್ಕದಾಗಿ ದೊಡ್ಡದಾಗಿ ಬಣ್ಣಿಸಿದ್ದಾನೆ. ಬರಬರುತ್ತಾ ಅವನ ಮನಸ್ಸು ಮಾಗಿದ್ದು, ತನ್ನಾಳ-ಎತ್ತರಗಳನ್ನು ಕಂಡದ್ದು ಕವನ ರೂಪ ತಾಳಿದೆ. ಕಾವ್ಯ ನಿರ್ಮಿತಿಯ ಯೌವನದಲ್ಲಿ ಪಡೆದ ಉತ್ತಮಿಕೆ ಅವನ ಅಪರವಯಸ್ಸಿನ ಪ್ರಕೃತಿಪರವಾದ ಕವಿತೆಗಳಲ್ಲಿ ಅಪರೂಪವಾಗಿ ಕಂಡುಬರುತ್ತದೆ. ಒಂದೊಂದು ವಿಷಯಕ್ಕೆ ಸಂಬಂಧಿಸಿದ ಕೃತಿಗಳನ್ನು ನೋಡಿದರೆ ಇದಕ್ಕೆ ನಿದರ್ಶನಗಳು ದೊರೆಯುತ್ತವೆ. ಮೊದಲು ನಸುಕು,ಬೆಳಗು, ಸೂರ್ಯ ಇವನ್ನು ಕುರಿತು ಕೆಲವನ್ನು ನೋಡಬಹುದು, ಉದಾಹರಣೆಯಾಗಿ, ನಸುಕು(**ಗಂಗಾವತರಣ**) ಉಷಾಸೂಕ್ತ (**ಹಾಡುಪಾಡು**) ಸೂರ್ಯನ ಹೋಳಿ (**ಹಾಡುಪಾಡು**) ಚಿಗುರು ಬೆಳಕು (**ಉತ್ತರಾಯಣ**) ಇದು ಬರಿ ಬೆಳಗಲ್ಲೋ ಅಣ್ಣಾ (**ಕಾವ್ಯವೈಖರಿ**). ಇವುಗಳಲ್ಲಿ ಮೊದಲನೆಯದು ಕೇವಲ ಪ್ರಕೃತಿ ವರ್ಣನೆಯುಳ್ಳ ಚಿಕ್ಕ ಕವಿತೆಯಾದರೂ ಕವಿ ಕಲ್ಪನೆಯಲ್ಲಿ ತನ್ನತನವಿದೆ. ಸ್ವಲ್ಪ ಅಂತ್ಯ ಪ್ರಾಸದ ಮೋಹಕ್ಕೆ ಒಳಗಾದರೂ ಇದರಲ್ಲಿ ರಚನೆಯ ಸೌಲಭ್ಯವಿದೆ. ಬೆಳಗು ಗಾಳಿ ತಾಕಿ ಚಳಿತು, ಇರುಳ ಮರವು ಒಡೆದು ತಳಿತು, ಅರುಣಗಂಧ ಹರುಹಿ ಒಳಿತು, ನಸುಕು ಬಂತು. ಬೆಳಗಿನ ಗಾಳಿ ತಾಕಿ ತಂಪಿನಿಂದ ನಡುಗಿ ರಾತ್ರಿಯ ಮರವು ಒಡೆದು ತಳಿರಿನಿಂದ ಕೆಂಪಾಗಿ ಅರುಣಗಂಧ ಹರಡಿತು ಎಂಬ ಕಲ್ಪನೆ ಸೂಕ್ಷ್ಮವಾಗಿದೆ, ಮೌಲಿಕವಾಗಿದೆ. ಹಾಗೇ ಬೆಳಕು ಬಳ್ಳಿ ಕುಡಿಬಿಟ್ಟು ಹಗಲಗುಡಿಯನ್ನು ಬಯಲಲ್ಲಿ ಎತ್ತಿ ರವಿಯ ಮಿಡಿಯನ್ನು ಅಡಗಿಸಿಟ್ಟು ನಸುಕು ಬಂತೆಂಬ ಊಹೆಯೂ ರಮ್ಯವಾಗಿದೆ. ಕೊನೆಯ ನುಡಿಯಲ್ಲಿ ಬೆಳಕು ಹೂತು ಆತು ಬಿಸಿಲು ಎಂಬುದು ಅದೇ ಪ್ರತಿಮೆಯ ಮುಂದುವರಿಕೆಯಾಗಿದೆ. ಉಷಾಸೂಕ್ತ ಇದು ಉಷಃಕಾಲದ ಸೃಷ್ಟಿಯನ್ನು ಸಣ್ಣ ಸಣ್ಣ ಪ್ರಾಸಬದ್ಧ ಪಂಕ್ತಿಗಳಲ್ಲಿ ವರ್ಣಿಸಿದ ನೀಳವಾದ ಆದರೆ ಅಂಥ ಆಳವಾದ ಸ್ಪಂದನೆಯಿಲ್ಲದ ಗೀತೆ, ಆದರೆ ಕೊನೆಕೊನೆಗೆ ಮುಪ್ಪು ಮುಟ್ಟುಲಾರದೆನೆ, ಚಿರಜವ್ವನೆ, ಚಿರನೂತನೆ, ನನ್ನ ಮನವೆ ನಿನ್ನ ಮನೆ ಎಂಬ ಭಾವ ತಲೆದೋರಿ ಪ್ರಕೃತಿ-ಪುರುಷರ ಆಧಾರ-ಆಧೇಯ ಸಂಬಂಧವನ್ನು ಸೂಚಿಸಿದೆ. ಉಷೆಯ ಚಿರಯೌವನವನ್ನೂ ಚಿರನೂತನತೆಯನ್ನೂ ಕವಿ ತನ್ನ ಗುರಿಯಾಗಿ ಮಾಡಿಕೊಂಡಿರುವನೆಂಬ ಧ್ವನಿತಾರ್ಥವು ಅದರಲ್ಲಿದೆ.'ಸೂರ್ಯನ ಹೋಳಿ' ಇದು ಸುತ್ತೆಲ್ಲ ಬೆಳಕನ್ನು ಸೂಸುವ ಸೂರ್ಯಪ್ರಕಾಶವನ್ನು ಒಂದು ಹೋಳಿಯ ರೂಪವಾಗಿಸಿ, ಇದೇ **ಹಾಡುಪಾಡು** ಸಂಗ್ರಹದಲ್ಲಿ ಬಂದಿರುವ ಶ್ರಾವಣ ದಂತೆ ಜನಪದ ಶೈಲಿಯ ಆವೇಶದಲ್ಲಿ ರಚಿತವಾಗಿದೆ, ಮಾತ್ರವಲ್ಲ ಸುಕೃತಕಡೆಯಿಂದ ಹರಿದು ಬರುತ್ತಿರುವ ಜ್ಞಾನಪ್ರಕಾಶದ ಹೊಳೆಯಲ್ಲಿ ಇಳಿಯಲು ಕರೆಕೊಡುವ ಪ್ರತೀಕಾತ್ಮಕ ಕವನವೂ ಆಗಿದೆ. ಈ ಕುರುಹನ್ನು ಅರಿಯಲು ಹಳಹಳಕು ಹೀರಕದ ಕಾಂತಿ, ಅಲ್ಲಿಲ್ಲ ಚಿರಶಾಂತಿ,

ಹರಿಯುವದು ಭ್ರಾಂತಿ, ಬಾ ಯಾಕ ಸುಮ್ಮನ ನಿಂತೀ ಈ ಸಾಲುಗಳನ್ನು ಗಮನಿಸಬಹುದು. ಚಿಗುರು ಬೆಳಕು ಈ ಚಿಕ್ಕ ಕವನವಂತೂ ಒಂದು ಆಂತರಿಕ ಸುಖಾನುಭವದ ನಿವೇದನವಾಗಿದೆ, ಎದ್ದು ಕಾಣುವ ಪ್ರತೀಕವಾಗಿದೆ. ಕಾವ್ಯ ವೈಖರಿಯಲ್ಲಿ ಪ್ರಕಟವಾಗಿರುವ ಇದು ಬರಿ ಬೆಳಗಲ್ಲೋ ಅಣ್ಣಾ ಇದು ಬೆಳಗು ಕವನದ ಅಂತ್ಯ ಉದ್ಗಾರವನ್ನು ತನ್ನ ಶೀರ್ಷಿಕೆಯನ್ನು ಮಾಡಿಕೊಂಡಿದ್ದರಲ್ಲಿ. ಸ್ವಲ್ಪ ಅರ್ಥವಿದೆಯಾದರೂ ಅನೇಕ ಅಂಶಗಳಲ್ಲಿ ಬೇರೆಯಾದ, ಕನ್ನಡ- ಇಂಗ್ಲೀಷ ಪದ ಪ್ರಯೋಗಗಳು ಬೆರೆತಿರುವ ಹಂಡಬಂಡ ಕವಿತೆ. ಇದರಲ್ಲಿ ವರ್ಣಭೇದ ನೀತಿಯ ಉದ್ದಾಮತೆ, ತನ್ಮೂಲಕ ಏಕಮಾನವತೆಯ ಅವಹೇಳನೆ ಈ ಮೊದಲಾದ ಪ್ರಚಲಿತ-ವಿಚಾರಗಳು ನೇರ ಗದ್ಯದಲ್ಲಿಯ ಕಟಕಿಯಾಗಿವೆಯೆ ಹೊರತು ಕವನ ರೂಪ ತಾಳಿಲ್ಲ. ಜಗವೆಲ್ಲಾ ಒಂದಾಗಲಿ ಎಂಬ ಅಂಬಿಕಾತನಯದತ್ತರ ಭವಿಷ್ಯವಾಣಿ ಇದು ಅಮರ ಮಂತ್ರವೆಂದೂ ಅದರಿಂದಲೇ ಜಗತ್ತಿಗೆ ಒಳ್ಳೆಯದಾಗುವುದೆಂಬ ಸದಾಶಯವನ್ನೂ ಕಡೆಗೆ ವ್ಯಕ್ತ ಮಾಡಲಾಗಿದೆ. ಆದರೆ ಕೇವಲ ಸದಾಶಯಗಳು ಎಷ್ಟೇ ಉದಾತ್ತವಾಗಿದ್ದರೂ ರಸಸ್ಪರ್ಶವಿಲ್ಲದೆ ಕಾವ್ಯವಾಗಲಾರವು ಎಂಬುದನ್ನು ಬೇರೆಯಾಗಿ ಹೇಳಬೇಕಾಗಿಲ್ಲ.

ಬೆಳಗಿನ ತರುವಾಯ ಸಂಜೆ, ರಾತ್ರಿ, ನಕ್ಷತ್ರ, ಚಂದ್ರ, ಬೆಳದಿಂದಗಳು ಈ ಬಗೆಗಿನ ಕವಿತೆಗಳನ್ನು ಆಯಾ ಸಂಕಲನಗಳಲ್ಲಿ ನೋಡಿದರೆ, ಒಂದೆರಡು ಮಾತ್ರ ಗುಣಾತಿಶಯದಿಂದ ಮೆರೆಯುತ್ತವೆ. ಅವುಗಳಲ್ಲಿ 'ರಾಗರತಿ' (**ಗ೦**) ಗಾತ್ರದಲ್ಲಿ ಅಲ್ಪವಾದರೂ ಕಲ್ಪಕತೆಯಲ್ಲಿ ಮೇಲ್ಮೆಯನ್ನು ಪಡೆದಿರುವಂಥದು. ಸಂಜೆಹೊತ್ತಿನ ಪಡುವಣ ಮುಗಿಲಿನ ದಟ್ಟ ಕೆಂಪು, ನೆಲವನ್ನು ಮುಸುಕಿದ ತೆಳು ಮಂಜು , ಬಿದಿಗೆ ಚಂದ್ರನ ಮತ್ತು ಬೆಳ್ಳಿಯ ಯುತಿ, ಅತ್ತಿತ್ತ ಸೂಸಿದ ಚಿಕ್ಕೆ ಈ ದೃಶ್ಯದ ಹಿನ್ನೆಲೆಯಲ್ಲಿ ನೀರಿಗೆ ಹೋದ ಹೆಣ್ಣಿನ ಚಿತ್ರ , ಅವಳ ಬೆನ್ನು ಹತ್ತಿದ ರಸಿಕರ ಮೈಮರವು ಇದೆಲ್ಲ ಈ ಕವನದಲ್ಲಿ ಸಾರ್ಥಕ ಪ್ರತಿಮೆಗಳ ಒಟ್ಟಂದವಾಗಿ ದಟ್ಟಯಿಸಿ ಬಂದಿದೆ , ಪ್ರಕೃತಿ - ಪುರುಷರ ಮೇಳಾಪವಾಗಿದೆ. 'ಬಿದಿಗೆ ಚಂದ್ರನಾ ಚೊಗಚೀ-ನಗಿ- ಹೂ' ಎಂಬಲ್ಲಿಯ ಅಪೂರ್ವ ರೂಪಕ , ಅತ್ತಿತ್ತ ಸೂಸಿದ ಚಿಕ್ಕೆಗೆ 'ಇರುಳ ಹೆರಳಿನಾ ಅರಳ ಮಲ್ಲಿಗೀ ಜಾಳಿಗಿ ಹಾಂಗಿತ್ತ' ಎಂಬ ಹೊಸ ಹೋಲಿಕೆ ಇಂಥವೆಲ್ಲ ಸಂಜೆಯ ಚಿತ್ರವನ್ನು ಅದ್ಭುತರಮ್ಯಗೊಳಿಸಿವೆ. 'ಇಲ್ಲಿ ಒಂದು ವರ್ಣನೆಯೂ ಅಪ್ರಕೃತವಲ್ಲ: ಒಂದು ಧ್ವನಿಯೂ ಅನುಚಿತವಲ್ಲ. ಅದಕ್ಕೆ ಬದಲು ಪ್ರಕೃತಿಯ ರಾಗದ ಚಿತ್ರದಿಂದಲೇ ಈ ಕಾಮಿಗಳ ಪ್ರಣಯದ ವಸ್ತು ಇಷ್ಟು ಸುಂದರವಾಗಿರುವುದು'(ಶ್ರೀಕಂಠಯ್ಯ, ೧೯೫೫:೩೨)ಎಂದು ಯಥಾರ್ಥವಾಗಿ ಇದನ್ನು ಮೆಚ್ಚಿಕೊಂಡ ತೀ.ನಂ.ಶ್ರೀಕಂಠಯ್ಯನವರು ಕಾಮಿ ಎಂದರೆ ಹೆಣ್ಣು ಬೆಕ್ಕು ಎಂಬ ಪ್ರಾದೇಶಿಕ ಅರ್ಥವು ಮೊದಲು ತಿಳಿಯದಿದ್ದ

ಕಾರಣ ತಮ್ಮ ವಿವರಣೆಯಲ್ಲಿ ಕೆಲಮಟ್ಟಿಗೆ ತಪ್ಪಾಯಿತೆಂದು ಹೇಳಿದ್ದಾರೆ. (ಶ್ರೀಕಂಠಯ್ಯ, ೧೯೫೪:೫೩)ಆದರೆ 'ಕಾಮಿ ಬೆಕ್ಕಿನ್ಹಾಂಗ'ಎಂದು ಬಿಡಿಸಿ ಇಟ್ಟಿರುವುದರಲ್ಲಿ ಮುಂದಿನ ನುಡಿಯಲ್ಲಿ ವರ್ಣಿತನಾದ 'ಒಂದು ಮನದಗಿಣಿ'ಯಾದ ಪ್ರಿಯಕರನ ಮುನ್‌ಸೂಚನೆಯೂ ಇರುವುದರಿಂದ ಅವರ ವಿವರಣೆಯಲ್ಲಿ ಅಂಥತಪ್ಪಾಗಿದೆ ಎಂದು ತಿಳಿಯಬೇಕಾಗಿಲ್ಲ. ಬೇಕಾದರೆ ಅದರಲ್ಲಿಯ ಶ್ಲೇಷದ ಸ್ವಾರಸ್ಯವು ಅವರಿಗೆ ಆಗ ತಿಳಿಯಲ್ಲಿಲ ಎನ್ನಬಹುದು. 'ಚಿತ್ತಿಯ ಮಳೆಯ ಸಂಜೆ(**ಸಖೀಗೀತ**)ಇದು ಚಿತ್ತಿಯ ನಕ್ಷತ್ರಕಾಲಕ್ಕೆ ಬಿದ್ದ ಮಳೆಯಿಂದ ಸಂಜೆಹೊತ್ತು ಕಾಣುವ ದೃಶ್ಯವನ್ನು ತುಂಬ ತನ್ಮಯತೆಯಿಂದ ಬಿತ್ತರಿಸಿದ ಒಳ್ಳೆಯ ಕವಿತೆ. 'ಕುರುಡು ಪ್ರೀತಿಯ ಹಾಂಗ ಕುರುಡು ಚಿತ್ತಿಯ ಮಳೆಯೆ'ಎಂಬ ಔಚಿತ್ಯಪೂರ್ಣವಾದ ಅಮೂರ್ತಭಾವದ ಹೋಲಿಕೆಯಿಂದ ಮೊದಲಾಗಿ ಈ ಕವಿತೆಯಲ್ಲಿ ಅವಿತುಕೊಂಡ ತರತರದ ಹೊಸ ಪ್ರತಿಮೆಗಳು ಕವಿಪ್ರತಿಭೆಗೆ ಸಾಕ್ಷಿಯಾಗಿವೆ. ಇಲ್ಲಿಯ 'ಹುಲ್ಲುಗಾವಲಾ ಸವರಿ ಬೈತಲಾ ಚಾಚ್ಯಾವ', 'ಅರಿಷಣ ಕುಂಕುಮ ತಂದು ಮರದಣಿಗೆ ಹಂಚ್ಯಾವ', 'ದುಡಿದವರ ಪಾದಕ್ಕಂತ ಹಡದಿ ಹಾಸ್ಯಾವ, ಮುಂತಾದವು ಕಣ್ಮನ ಸೆಳೆಯುತ್ತವೆ. ಬಹುಶಃ ಶಿಷ್ಟ ಮತ್ತುಜನಪದ ಶೈಲಿಗಳ ಅನಾವಶ್ಯಕ ಸಂಮಿಶ್ರಣವೊಂದೇ ಈಕವಿತೆಯ ಕೊರತೆಯೆನ್ನಬಹುದು . 'ಸಂಜೀಯ ಜಾವಿಗೆ'(**ಗಂಗಾವತರಣ**)ಇಲ್ಲಿಯೂ ಇದೇ ಶೈಲಿಯ ಬೆರಕೆಯಿದ್ದರೂ ಆಂತರಿಕ ಪ್ರಾಸದ ಸಹಜ ಆಂದೋಲನದಿಂದ ಮೂಡಿರುವ ವರ್ಣನೆ ವಿಶಿಷ್ಟವಾಗಿದೆ. ಈಮೂರು ಕವಿತೆಗಳಲ್ಲಿಯೂ ಪ್ರಕೃತಿ–ಪುರುಷರ ಅಥವಾ ಸೃಷ್ಟಿ–ದೃಷ್ಟಿಯ ಒಂದಿಲ್ಲೊಂದು ಬಗೆಯ ಅನ್ಯೋನ್ಯತೆಯಿರುವುದನ್ನು ಗಮನಿಸಬೇಕು.

ಬೆಳಗು, ಸಂಜೆಗಳಾದ ಮೇಲೆ ರಾತ್ರಿಯನ್ನು ಕುರಿತು ಬರೆದ ಕವನಗಳಲ್ಲಿ ಬೆಳದಿಂಗಳನ್ನು ಬಣ್ಣಿಸಿದ ಒಂದೆರಡು ಕವನಗಳು ಎದ್ದು ಕಾಣುತ್ತವೆ. 'ಚಂದ್ರ' (**ಗರಿ**)ನನ್ನು ಉದ್ದೇಶಿಸಿ ಬರೆದ ಮೊದಲನೇ ಕವನದಲ್ಲಿ ಹಳೆಯ ಭಾಮಿನೀ ಛಂದದ ಎರಕದಲ್ಲಿ ಕೋಶದಿಂದ ಹೇತುಪೂರ್ವಕವಾಗಿ ಎತ್ತಿ ತಂದು ಸುರಿದವೆಂಬಂತೆ 'ಅಚ್ಚ'ಗನ್ನದ ಪದಗಳು ಕೆಲವಿದ್ದು, 'ತನ್ನ ದುಃಖವ ನುಂಗಿ ಪರದುಃಖವನು ಹಿಂಗಿಸುವ ಚೆನ್ನಿಗಳು ಭೂದೇವಿ, ಆಕೆಯ ನನ್ನಿಯಲ್ಲಿ ಮಡಿಯಾದ ನುಡಿಗಳು ನನ್ನ ನಾಲಿಗೆಯಲ್ಲಿ ಮೂಡಲಿ ಪ್ರತಿಚಂದ್ರರಂತೆ' ಎಂಬ ಕೊನೆ ನುಡಿಯಲ್ಲಿ ಬಂದಿರುವ ಹಂಬಲಿಕೆ ಪ್ರಯೋಗಾವಸ್ಥೆಯಲ್ಲಿಯ ಭಾವುಕತೆಯಂತೆ ಕಾಣುತ್ತದೆ. ಆದರೆ ಬರಬರುತ್ತ ಕವಿಯ

ಸೃಜನಶೀಲತೆ ಬೆಳೆಯುತ್ತ ಹೋಗಿರುವುದೆ ಬೆಳದಿಂಗಳ ಕವಿತೆಗಳಲ್ಲಿ ಕಂಡುಬರುತ್ತದೆ. ಉದಾಹರಣೆಗೆ ,'ದವನ ಹುಣ್ಣಿಮೆಯ ಜಾತ್ರೆಯ ರಾತ್ರಿ'**(ಹಾಡು-ಪಾಡು)**ಮತ್ತು 'ಬೆಳದಿಂಗಳ ನೋಡ' **(ನಾದ ಲೀಲೆ)** ಇವೆರಡೂ ಉತ್ತರ ಕರ್ನಾಟಕದ ಹಳ್ಳಿಯ ಹಾಡಿನ ಧಾಟಿ ಮತ್ತು ದೇಸಿಯಲ್ಲಿವೆ; ಎರಡರಲ್ಲಿಯೂ ಕಲ್ಪಕತೆ ತಲ್ಲೀನತೆಯ ಬಸಿರಲ್ಲಿ ಮೊಳೆತ ಸಹಜ ಪ್ರಾಸದಿಂದ ಪುಷ್ಟವಾಗಿ ಮೆರೆದಿದೆ. 'ಇಗೊ ಬಂತು ದವನದುಣ್ಣಿವಿ ಬಿಚ್ಚಿ ಕಣ್ಣಿವಿ ಕುಡಿದು ಅಮೃತಾ ಕಂಡವರಿಗುಣಿಸಿ ಸಮತಾ'. 'ಹಣ್ಣಾದ ಬಿಸಿಲ ಬಣ್ಣನ ಕಳತು ಬೆಳದಿಂಗಳಾತೋ ಏನೊ ಹರದದ ಬಾನಜೇನೋ' ಎಂಬ ಉತ್ಪ್ರೇಕ್ಷೆಗಳ್ನು ತೂರುತ್ತ ಕವಿ ಸೂಕ್ಷ್ಮತರವಾದ ದೈವಿಕಸ್ತರಕ್ಕೆ ಹೋಗಿ ಹೀಗೆ ಹಾಡನ್ನು ನನೆಕೊನೆಗೊಳಿಸುತ್ತಾನೆ : 'ದನಿಮ್ಯಾಲೆ ದನಿಯನೆತ್ತೆತ್ತಿ ಓಲಗಾ ಏರತಾದ ಹ್ಯಾಂದ ಗೋಪುರಾ ಕಟ್ಟಿಧಾಂಗ ಆಕಾಶ ಅನಸತದ ಗುಡಿಯ ಹಾಂಗ ಪ್ರಕಾಶ ಮಹಾಲಿಂಗ ನೆಲ ಅಗಲ ಪೀಠಧಾಂಗ ಇದಕ್ಕಿಂತ ಹೆಚ್ಚು ತುಂಬಿಕೆಯ ತಲ್ಲೀನತೆ 'ಬೆಳುಂದಿಳ ನೋಡ**(ನಾದಲೀಲೆ)** ಈ ಹಾಡಿನಲ್ಲಿದೆ. ಅದರಿಂದಲೇ ಅದರ ಕಲ್ಪನೆಯ ಶ್ರೀಮಂತಿಕೆ ಉಕ್ಕುಕ್ಕಿ ಬಂದಿದೆ. ಪ್ರಾಸರಚನೆ ನಿರಾಯಾಸವಾಗಿ ಒದಗಿದೆ. ನಿದರ್ಶನವೆಂದು 'ಹಾಕ್ಯಾರ ಚಿಕ್ಕಿಗೆಳತ್ಯಾರ ಕೃತ್ತಿಕೀ ಹಾರ','ತೆಪ್ಪಗ ಗಾಳಿ ತೂಕಡಿಸತದ ತಾನೀಗ ಜಂಪ ಬಂಧಾಂಗ 'ಇದು ಅದರ ತುಪ್ಪಳದ ಗೂಡ ಬೆಳದಿಂಗಳ ನೋಡ' ಈ ನುಡಿಗಳನ್ನು ನೆನೆದು ಮೆಲಕುಹಾಕಬಹುದು.'ಜಗ ಧವಳ ಗಂಗ್ಯಾಗ ಮುಳುಗಿ ವ್ಯೆಮನಾ ಬೆಳಗಿ ಸಮಾಧಿಯು ಹತ್ತಿ ಮೋಡನೂ ಬೆಳ್ಳಗಾಗ್ಯಾವ ತೆನೀ ಮಾಗ್ಯಾವ' ಈ ನುಡಿಯಲ್ಲಿ ಬೆಳದಿಂಗಳ ನೋಟವು ಹೇಗೆ ಸಮಾಧಿಯನ್ನು ಹತ್ತಿಸಿ ಕವಿಯನ್ನು ತಲ್ಲೀನತೆಯ ಪರಮ ಪ್ರಕರ್ಷಕ್ಕೆ ಒಯ್ದು ಮುಟ್ಟಿಸಿದೆ ಎಂಬುದನ್ನು ಬಣ್ಣಿಸಲಾಗಿದೆ.

ಋತುಗಳ ವರ್ಣನೆಯಲ್ಲಿ 'ಚಳಿಯಾಕೆ'**(ಗರಿ)**, 'ವಸಂತಮುಖ' **(ಸಖೀಗೀತ)**,'ಮಧುಮಾಸದ ಕುಣಿತ'**(ನಮನ)**,'ಈಸಲದಸುಗ್ಗಿ'**(ಅರಳುಮರಳು)** 'ನವಯುಗಾರಂಭ' **(ಅರಳುಮರಳ)**'ಯುಗಾದಿ'**(ಗರಿ)**,'ಋತುಗಾನ'**(ನಾದಲೀಲೆ)**, 'ದೀಪ'**(ನಾದಲೀಲೆ)**, ಇವನ್ನು ವಿಶಿಷ್ಟ ಉದಾಹರಣೆಗಳೆಂದು ಎತ್ತಿಕೊಳ್ಳಬಹುದು 'ಚಳಿಯಾಕೆ' ಇದು ಚಳಿಗಾಲಕ್ಕೆ ಸ್ತ್ರೀರೂಪ ಕೊಟ್ಟು ಸೊಗಸಾದ ಸಾವಯವ ರೂಪಕದಂತೆ ಇಡಿಯಾಗಿ ವರ್ಣಿಸಲಾಗಿದೆ. ಪ್ರಾಚೀನ ಕಾವ್ಯಗಳಲ್ಲಿಯ

ಕವಿಸಮಯ ಶರಣವಾದ ಶಿಶಿರ-ವರ್ಣನೆಗಿಂತ ಬೇರೆಯಾಗಿ ನೈಜನಿರಿಕ್ಷಣೆಯಿಂದ ಸುಂದರ ಆಕೃತಿ ಪಡೆದ ಒಳ್ಳೆಯ ಕವನವಿದು. 'ವಸಂತಮುಖ' ಇದು ಚಿಕ್ಕದಾದರೂ ಕವಿಯ ವಿಶಾಲ ಪ್ರಜ್ಞೆಯನ್ನೂ ಉನ್ನತ ಪ್ರತಿಭೆಯನ್ನೂ ಅಭಿವ್ಯಕ್ತಗೊಳಿಸಿದ ಕವಿತೆ.'ಏನೊ ವಿಧ! ಏನೊ ಹದ !' 'ಗಾಳಿಗೊಡೆದ ಬುದ್ಬುದ' ಈ ಸಾಲುಗಳಲ್ಲಿ ಸಹಜಸ್ಫೂರ್ತವಾಗಿ ಹೊಮ್ಮಿದ ಪ್ರತಿಮೆ ಅಸಾಧಾರಣವಾಗಿದೆ. 'ಯುಗಾದಿ' ಇದು ಅದೇ ವಸಂತ ಋತುವಿನಲ್ಲಿ ಹೊಸ ವರ್ಷದ ಆದಿಯಾಗಿ ಬರುವ ಯುಗಾದಿಯ ಹೊಸತನದ ಚಿತ್ರಮಯ ನಿರೂಪಣೆಯೊಂದಿಗೆ, ತನಗೇಕೆ ಹೊಸತನವಿಲ್ಲ ಎಂಬ ಮಾನವ ಕುಲದ ಕೊರಗು ಕವಿಚೇತನದಲ್ಲಿ ಒಂದಾಗಿ ಬಂದಿದೆ. 'ಯುಗಯುಗಾದಿ ಕಳೆದರೂ ಯುಗಾದಿ ಮರಳಿ ಬರುತಿದೆ ಹೊಸ ವರುಷಕೆ ಹೊಸ ಹರುಷವ ತರುತಿದೆ ನಮ್ಮನಷ್ಟೆ ಮರೆತಿದೆ' ಎಂಬುದು ಜೀವಜೀವದಲ್ಲಿ ಮಾರ್ದನಿಯಾಗುವ ಅರ್ಥವತ್ತಾದ ಸಮಾಪನದ ಸೊಲ್ಲು. ಅದಕ್ಕಿಂತ ಹೆಚ್ಚು ಆಶಾದಾಯಕವಾಗಿ, ಎಲ್ಲ ಋತುಗಳಲ್ಲಿ ಸೃಷ್ಟಿ ಹೊಸಹೊಸ ವೇಷ ತಳೆಯುತ್ತ 'ತಿರುತಿರುಗಿಯೆ ಹೊಸತಾಗಿರಿ' ಎಂದು ಮನುಷ್ಯಜಾತಿಗೆ ಸಂದೇಶವನ್ನು ಭೀರುತ್ತದೆ ಎನ್ನುತ್ತಿದೆ 'ಋತುಗಾನ'ವು. ಈ ಎಲ್ಲ ಕವನಗಳಿಗಿಂತ ಆಶಯ-ಆಕೃತಿ, ಛಂದ, ಪ್ರಾಸ-ಕಾವ್ಯಶಿಲ್ಪದ ಈ ಎಲ್ಲ ಅಂಗಗಳಲ್ಲಿ ಬಹುಮಟ್ಟಿಗೆ ಪೂರ್ಣವಾದ ಕವನವೆಂದರೆ 'ದೀಪ'ವೆಂಬುದು. 'ಬಂತಿದೊ ಶೃಂಗಾರ ಮಾಸ ಕಂತು ನಕ್ಕ ಚಂದ್ರಹಾಸ ಎಂತು ತುಂಬಿತಾಕಾಶ ಕಂಡವರನು ಹರಸಲು' ಈ ಮೊದಲ ನುಡಿಯಿಂದ ಕೊನೆಯವರೆಗೆ ಎಂಥ ಸೂಕ್ಷ್ಮ ಕಲ್ಪಕತೆ, ಅಡಕವಾದ ಆದರೆ ತಿಳಿಯಾದ ಪದರಚನೆ, ಸಹಜಸ್ಫೂರ್ತವಾದ ಆದಿ-ಅಂತ್ಯಪ್ರಾಸ, ಮುಖ್ಯವಾಗಿ ದಾಂಪತ್ಯದ ಅದ್ವೈತಭಾವ ಅಭಿವ್ಯಕ್ಯಗೊಂಡಿವೆ ಎಂಬುದನ್ನು ಲಕ್ಷಿಸಿದರೆ ಭಾವಗೀತೆಯ ಉನ್ನತಸಾಧನೆಯ ಅರಿವಾಗುತ್ತದೆ. ತುರುವಾಯದ ಸಂಕಲನಗಳಲ್ಲಿ 'ಇದು ಯುಗಾದಿ'**(ನಾಕುತಂತಿ), '(ಶ್ರೀಮಾತಾ),** ಹೀಗೆ ಭಿನ್ನವಾದ ದೃಷ್ಟಿಕೋನಗಳಿಂದ ಹೊರಪಟ್ಟಿವೆ. 'ಇದು ಯುಗಾದಿ'ಯಲ್ಲಿ ಸಮಾಧಾನದ. ಸಂವಾದದ ವ್ಯಾಪಕ ದೃಷ್ಟಿಕೋನವು 'ಅವರವರಿಗೆ ಅವರ ಹಾದಿ ನಿನಗೆ ನನಗೆ ಆದಿ ಒಂದೆ ದಾದಿ ಯುಗದ ಮಧ್ಯಬಿಂದು ಒಂದು' ಎಂಬ ಪ್ರಾರಂಭದಿಂದಲೇ ತನ್ನ ಶ್ರುತಿಯನ್ನು ಹಿಡಿದಿದೆ. 'ಮೊನ್ನೆ ಮೊನ್ನೆ ಬೂದಿಯಾದಾ ಹೋಳಿಯಲ್ಲಿ ಕಾವಾ' ಎಂಬ ಸೂಚಕ ಉಕ್ತಿಯಿಂದ ಮೊದಲುಮಾಡಿ ಸುಗ್ಗಿಬೇಸುಗೆಗಳ ಚಿತ್ರ ಬರೆಯುತ್ತ' ಯುಗಯುಗಗಳ ವಿರಹದೊಳಿವೆ ಪ್ರೀತಿಯಾ ಬುನಾದಿ ನನ್ನುಸಿರಿಗೆ

ನಿನ್ನುಸಿರನು ಸಂಗಡಿಸು ಸಮಾದಿ' ಎಂಬಲ್ಲಿ ಕವಿತೆ ತನ್ನ 'ಮಧ್ಯಬಿಂದು'ವನ್ನು ಎತ್ತಿ ತೋರಿದೆ. ಮುಂದೆ ಶ್ರಾವಣಾದಿ ಋತುಗಳ ಸಂಕ್ಷಿಪ್ತ ವರ್ಣನೆಯೊಂದಿಗೆ ಪರಿಪಾಕದ ಭರವಸೆಯೊಂದರನ್ನು ನೀಡುತ್ತ ಕೊನೆಗೊಂಡಿದೆ. ಇನ್ನೊಂದು 'ಯುಗಾದಿ' ಮಾತ್ರ 'ಜಗಕ್ಕ ಆದಿ ಇಲ್ಲಾ, ಮುಗಿಲಿಗೆ ಅಂತ ಇಲ್ಲಾ' ಎಂಬ ಗಂಭೀರ ಚಿಂತನೆಯಿಂದ ಮೊದಲಾದರೂ ಅಲ್ಲಲ್ಲಿ ವ್ಯಂಗ್ಯರೀತಿಯ ಚಾಟಿಯೇಟುಗಳಿಂದ ಮುಂದರಿಯುತ್ತ ಮುಕ್ತಛಂದದಲ್ಲಿ ಬೀಸಾಗಿ ಹರಡಿದೆ. ಇದರಲ್ಲಿ ಉದ್ದಕ್ಕೂ ಆಡುನುಡಿಯಲ್ಲಿ ಕಂಡ ಎರಡರ್ಥದ ಶ್ಲೇಷವಿದೆ, ಅಧ್ಯಾತ್ಮದ ಹಾಗೂ ವಾಸ್ತವದ ಸರಿಜೋಡಣೆಯಿದೆ. ಉದಾಹರಣೆ, ಸಾವಿರದರವಿಂದಕ್ಕ ಸವಿ ಇರತದ; ಸವಕಳಿ ಇರೂದಿಲ್ಲಾ. ಎಲಿ ಚಿಗರ್ತಾವ ಉದರ್ತಾವ, ಮರಾ ಅಮರಾ; 'ಉದರದ ಬದುಕು ಉದರೋದಿಲ್ಲಾ' 'ಮನೀ ಮುರ್ಯೋ ಜನಾ; ಅಶ್ಲೀಲಕ್ಕ ಅಂಗಾರ ಹಚ್ಚಿದ್ರು ಬೀಭತ್ಸಕ್ಕ ಮುದ್ರಿ ಒತ್ತಿದರು; ಸಿಹಿ ಸಿಗದವ್ರು ಸಿಕ್ಕದ್ದು ತಿಂತಾರ'. ಕೊನೆಯೆರಡು ಸಾಲಿನಲ್ಲಿಯೂ ಇದೇ ಹದಿರಿನ ಶೈಲಿ: 'ಗರಗರಾ ಯುಗಾದಿ ಗಿರಿಗಿರಿ ತಿರುಗಿದ್ರೂ, ಅಸ್ವಸ್ಥ ಆದಾವ್ರು ಸ್ವಸ್ಥಾಗ್ರಿ ಅಂತದ. ಹೀಗೆ ಸೂರ್ಯೋದಯದ ಗೀತೆಗಳು ಈ ಮೂರು ಜನರಲ್ಲಿಯು ಭಿನ್ನವಾಗಿ–ವಿಭಿನ್ನವಾಗಿ ಕಂಡುಬರುತ್ತದೆ. ಇವರ ಸೂರ್ಯೋಪಾಸನೆ ಕನ್ನಡ ಸಾಹಿತ್ಯದಲ್ಲಿ ಬೆರಗು ತರಿಸುವಂತವು.

ಗ್ರಂಥಋಣ

೧. ಅಜಿತಪುರಾಣ ತಿಲಕಂ ಕಾವ್ಯ ಸಂಗ್ರಹ, ಸಂ.ಹಂಪ.ನಾಗರಾಜಯ್ಯ, ಪದ್ಮ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೯೦.

೨. ಆಲನಹಳ್ಳಿ ಕವಿತೆಗಳು, ಶ್ರೀಕೃಷ್ಣ ಆಲನಹಳ್ಳಿ, ಐ.ಬಿ.ಹೆಚ್ ಪ್ರಕಾಶನ, ಬೆಂಗಳೂರು, ೧೯೮೧

೩. ಆಯ್ದ ಕುವೆಂಪು ಕವನಗಳು, ಸಿ.ಪಿ.ಕೆ. ಚೇತನ ಬುಕ್ ಹೌಸ್, ಮೈಸೂರು, ೧೯೮೪

೪. ಇವತ್ತಿನ ನೆರಳು (ಆಯ್ದ ಕವನಸಂಕಲನ) ಸಂ.ಜಿ.ಎಸ್.ಸಿದ್ದಲಿಂಗಯ್ಯ,

೫. ಕನ್ನಡದಲ್ಲಿ ಭಾವಗೀತೆ, ಪ್ರಭುಶಂಕರ, ಡಿ.ವಿ.ಕೆ.ಮೂರ್ತಿ ಪ್ರಕಾಶನ, ಮೈಸೂರು, ೧೯೬೬

೬. ಕಣವಿ ಸಮಗ್ರ ಕಾವ್ಯ, ಚೆನ್ನವೀರಕಣವಿ, ಸಂವಹನ ಪ್ರಕಾಶನ, ಮೈಸೂರು, ೧೯೮೯

೭. ಕುವೆಂಪು ಸಮಗ್ರ ಕಾವ್ಯ ಸಂಪುಟ ೧, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೨

೮. ಕುವೆಂಪು ಸಮಗ್ರ ಕಾವ್ಯ ಸಂಪುಟ ೨, ಪ್ರಸಾರಾಂಗ, ಕ.ವಿ.ವಿ. ಹಂಪಿ, ೨೦೦೨

೯. ಕುವೆಂಪು ಕಾವ್ಯದಲ್ಲಿ ಪ್ರಕೃತಿ ಒಂದು ಅಧ್ಯಯನ, ಲತಾ ರಾಜಶೇಖರ್, ಸಹ್ಯಾದ್ರಿ ಪ್ರಕಾಶನ, ಮೈಸೂರು, ೨೦೦೩.

೧೦. ಗಂಗಾವತರಣ, ದ.ರಾ.ಬೇಂದ್ರೆ, ಮನೋಹರ ಗ್ರಂಥ ಪ್ರಕಾಶನ, ಧಾರವಾಡ, ೧೯೪೬

೧೧. ನಾನಿಲ್ಲದ ನಾನು, ಪಿ. ಕೆ. ರಾಜಶೇಖರ್, ಹೊಸ್ತಾರು ಜನಪದ ಗಾಯಕರು, ಮಾನಸಗಂಗೋತ್ರಿ, ಮೈಸೂರು ೨೦೦೧

೧೨. ನಿತ್ಯೋತ್ಸವ, ಕೆ. ಎಸ್. ನಿಸಾರ್ ಅಹಮದ್, ಲಿಪಿ ಪ್ರಕಾಶನ, ಬೆಂಗಳೂರು, ೧೯೭೬

೧೩. ಪು.ತಿ.ನ. ಸಮಗ್ರ ಕಾವ್ಯ, ಪು.ತಿ.ನ. ಪ್ರತಿಷ್ಠಾನ ಟ್ರಸ್ಟ್ (ರಿ) ಜಯನಗರ, ಬೆಂಗಳೂರು, ೨೦೦೪

೧೪. ಪು.ತಿ.ನರಸಿಂಹಾಚಾರ್ಯರ ಕಾವ್ಯ ಒಂದು ಅಧ್ಯಯನ, ಎ.ಎಸ್.ವೇಣುಗೋಪಾಲರಾವ್, ಸಹ್ಯಾದ್ರಿ ಪ್ರಕಾಶನ ಮೈಸೂರು, ೧೯೯೧

೧೫. ಪಂಪಕವಿವಿರಚಿತಂ ಆದಿ ಪುರಾಣಂ, ಸಂ. ಎಸ್. ಜಿ. ನರಸಿಂಹಾಚಾರ್, ಟಿ.ವಿ.ವೆಂಕಟಾಚಲಶಾಸ್ತ್ರಿ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೦

೧೬. ಪಂಪಮಹಾಕವಿ ವಿರಚಿತ ಪಂಪಭಾರತಂ, ಗದ್ಯಾನುವಾದ ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೯

೧೭. ಬಾ ಹತ್ತರ, ದ.ರಾ.ಬೇಂದ್ರೆ, ಗೀತಾ ಬುಕ್ ಹೌಸ್, ಮೈಸೂರು ೧೯೬೯

೧೮. ಭರತೇಶವೈಭವ ಸಂಗ್ರಹ, ಸಂ.ಟಿ.ಎಸ್.ಶಾಮರಾವ್, ಪ್ರಸಾರಾಂಗ, ಮೈ.ವಿ.ವಿ. ೧೯೮೬

೧೯. ಮರ್ಯಾದೆ, ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬

೨೦. ಮುಕ್ತಕಂಠ, ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬

೨೧. ಮುಗಿಲ-ಮಲ್ಲಿಗೆ, ದ.ರಾ.ಬೇಂದ್ರೆ, ಪ್ರತಿಭಾ ಗ್ರಂಥಮಾಲೆ ಧಾರವಾಡ ೧೯೬೧

೨೨. ರಸಋಷಿ ಕುವೆಂಪು, ಎಸ್.ವಿ.ಪರಮೇಶ್ವರಭಟ್ಟ, ಪ್ರಸಾರಾಂಗ, ಮೈಸೂರು ವಿ.ವಿ. ೧೯೯೫

೨೩. ಶ್ರೀಮಾತಾ, ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ ಧಾರವಾಡ ೧೯೬೮

೨೪. ಶ್ರೀ ರಾಮಾಯಣದರ್ಶನಂ ಒಂದು ವಿಮರ್ಶಾತ್ಮಕ ಅಧ್ಯಯನ, ಎಚ್.ಜೆ.ಲಕ್ಕಪ್ಪಗೌಡ, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೯೨

೨೫. ಸಹೃದಯ ಸ್ಫುರಣ, ಗಂಗಮನಾಥ, ಜಿ. ಹಂಡಿ, ಶೈಲಜಾ ಪ್ರಕಾಶನ, ವಿಜಾಪುರ, ೧೯೬೭

೨೬. ಸಾಮಗಾನ, ಜಿ. ಎಸ್. ಶಿವರುದ್ರಪ್ಪ, ತಳುಕಿನ ವೆಂಕಣ್ಣಯ್ಯನವರ ಸ್ಮಾರಕ ಗ್ರಂಥಮಾಲೆ, ಮೈಸೂರು, ೧೯೫೧

೨೭. ಸಾಲುದೀಪಗಳು, ಸಂ. ಜಿ.ಎಸ್.ಸಿದ್ದಲಿಂಗಯ್ಯ, ಎಂ. ಎಚ್. ಕೃಷ್ಣಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೦

೨೮. ಸಿ.ಪಿ.ಕೆ. ಸಮಗ್ರಕವಿತೆ, ಸಿ.ಪಿ.ಕೃಷ್ಣಕುಮಾರ್, ಸಂವಹನ ಪ್ರಕಾಶನ, ಮೈಸೂರು, ೨೦೦೦

೨೯. ಸೂರ್ಯಪಾನ, ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬

೩೦. ಸೌಂದರ್ಯ ಸಮೀಕ್ಷೆ, ಜಿ.ಎಸ್. ಶಿವರುದ್ರಪ್ಪ, ತಳುಕಿನ ವೆಂಕಣ್ಣಯ್ಯನವರ ಸ್ಮಾರಕಗ್ರಂಥಮಾಲೆ, ಮೈಸೂರು ೧೯೫೧

೩೧. ಸಂಚಯ, ದ.ರಾ.ಬೇಂದ್ರೆ, ಸಮಾಜ ಪುಸ್ತಕಾಲಯ, ಧಾರವಾಡ, ೧೯೫೬

೩೨. ಹಾಡೆ ಹಾದಿಯ ತೋರಿತು, ಎಚ್. ಎಸ್. ರಾಘವೇಂದ್ರರಾವ್, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೫

೩೩. ಹಾಡು-ಪಾಡು, ದ.ರಾ.ಬೇಂದ್ರೆ, ಆನಂದ ಸಾಹಿತ್ಯ ಮಂದಿರ, ಗಲಗಲಿ, ೧೯೪೬

೩೪. ಹೊಸಗನ್ನಡ ಕವಿತೆಯ ಮೇಲೆ ಇಂಗ್ಲೀಷ್ ಕಾವ್ಯದ ಪ್ರಭಾವ, ಎಸ್. ಅನಂತನಾರಾಯಣ, ರಾಜಲಕ್ಷ್ಮಿ ಪ್ರಕಾಶನ, ಬೆಂಗಳೂರು, ೧೯೬೨